ಕಲ್ಯಾಣಕಿರಣ

ಜುಲೈ 2004

ಬೆಲೆ ರೂ. 5-00



ಶಿವಶರಣ ಹಡಪದ ಅಪ್ಪಣ್ಣನವರು



ದಿ. 30-6-2004 ರಂದು ಬೆಂಗಳೂರಿನ ಬಸವ ಮಂಟಪದಲ್ಲಿ ನಡೆದ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ 10ನೇ ಪುಣ್ಯ ಸಂಸ್ಮರಣೆಯಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ ಪೂಜ್ಯ ಮಾತಾಜಿ ಮತ್ತು ಜೊತೆಯಲ್ಲಿ ಶರಣರಾದ. ಶರಣಪ್ಪ ಜೆ.ಎಂ. ಮಲ್ಲಿಕಾರ್ಜುನ, ಪ್ರಾಂಶುಪಾಲರು, ಕಾನೂನು ವಿದ್ಯಾಲಯ, ಸತ್ಯಾನಂದ, ಕಾರ್ಮಿಕ ಮುಖಂಡರು, ಎನ್. ಪುಟ್ಟರುದ್ರ ಮತ್ತು ಸಿದ್ಧರಾಮಪ್ಪ ಪಾಟೀಲರನ್ನು ಕಾಣಬಹುದು.

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 35	ಬಸವ ಶಕೆ 870	ಆಜೀವ ಸದಸ್ಯತ್ವ 500 ರೂ
ಸಂಚಿಕೆ -05	ಜುಲೈ 2004	ವಾರ್ಷಿಕ ಚಂದಾ 50/- ರೂ

* ಧರ್ಮವಂತರಿಗೆ ಕರೆ *

ಹೇ ಧರ್ಮವಂತರೇ ಶಾಂತಿ ಧ್ವಜ ಹಾರಿಸುವ, ವಿಶ್ವಪ್ರೇಮ ಬೋಧಿಸುವ
ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ ಮರೆತೀಗ ॥ ಪ ॥

ಜಾತಿಯತೆಯ ತಿಮಿರತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಶಾಂತಿ ಪತಾಕೆಯ ಸಮತೆಯೊಡನೆ ಮೆರೆಸುತ
ಧರ್ಮವಾಗಲಿ ಸದ್ಧರ್ಮ ಧರ್ಮವಾಗಲಿ ಮಾನವ ಧರ್ಮ
ಧರ್ಮವಾಗಲಿ ರಾಷ್ಟ್ರಧರ್ಮ ಧರ್ಮವಾಗಲಿ ವಿಶ್ವಧರ್ಮ ॥ 1 ॥

ಬಸವ ಶಂಕರ ಮಧ್ವರು ಮಹಾದೇವಿ ಮೀರಾಬಾಯಿ
ಗುರುನಾನಕ ಕಬೀರರ ಭವ್ಯ ಪರಂಪರೆ ನಮದು
ಬಾಪು ಬುದ್ಧ ಮಹಾವೀರ ಅರವಿಂದ ವಿವೇಕಾನಂದ
ಧರ್ಮ ಗುಡಿಯ ಹಾರಿಸಿದ ಮಹಂತರ ನಾಡೆಮದು ॥ 2 ॥

ಹಿಂದು ಕ್ರೈಸ್ತ ಮುಸಲ್ಮಾನ ಲಿಂಗಾಯತ ಸಿಖ್ ಜೈನ
ಬೌದ್ಧ ಫಾರಸಿ ಯಹೂದಿಗಳ ಸಮರಸದ ನಾಡಿದುವು
ಶಾಂತಿ ಗೀತವ ಹಾಡಿ ವಿಶ್ವಪ್ರೇಮ ಧ್ವಜವ ಸೂಡಿ
ಎಲ್ಲರ ನಾವು ಆದರಿಸುವ ಸಚ್ಚಿದಾನಂದನ ಮಕ್ಕಳೆಂದು ॥ 3 ॥

ರಚನೆ - ಜಗದ್ಗುರು ಮಾತೆ ಮಹಾದೇವಿ

ಬೆಂಗಳೂರಿನ ಪುಟ್ಟಣ ಚೆಟ್ಟಿ ಪುರಭವನದಲ್ಲಿ ದಿ. 15-6-2004 ರಂದು ಜೈನ ಧರ್ಮದ ತೇರಾಪಂಥದ ಜೀವ ವಿಜ್ಞಾನ ಸಂಘಟನೆಯವರು ಆಚಾರ್ಯ ಮಹಾಪ್ರಜ್ಞಾರವರ 85ನೆಯ ಹುಟ್ಟು ಹಬ್ಬದ ನಿಮಿತ್ತ ಏರ್ಪಡಿಸಿದ್ದ ಸರ್ವಧರ್ಮ ಸಮನ್ವಯ ಸಭೆಯಲ್ಲಿ ಪೂಜ್ಯ ಮಾತಾಜಿಯವರು ಬರೆದು, ಭಾಷಣದಲ್ಲಿ ಹಾಡಿದ ಗೀತೆ.

ಕಲ್ಯಾಣ ಕಿರಣ

ಸಂಪುಟ 35	ಬಸವ ಶಕೆ 870	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 5	ಜುಲೈ 2004	ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

ಲಿಂಗಾಂಗಯೋಗಿ ಸಿದ್ಧರಾಮೇಶ್ವರರ ವಚನಾಮೃತ

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮ ಬಾರದಯ್ಯಾ.
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀ(ಯ ಯಾಗ) ಸಮ ಬಾರದಯ್ಯ.
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರೀ ಲಕ್ಷ ಜಪ ಸಮ ಬಾರದಯ್ಯಾ, ಕಪಿಲಸಿದ್ಧಮಲ್ಲಿಕಾರ್ಜುನಾ.

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಬಸವ ಬೀಡಿನಿಂದ ಅಮೆರಿಕಾ ನಾಡಿಗೆ - ಭಾಗ 6

ಪ್ರವಾಸ ಕಥನ

- ಮಾತಾಜಿ

(2003ರ ಜೂನ್ 14ರಂದು ಹೊರಟು ಅಮೆರಿಕಾದ ಸುಮಾರು ಎಂಟು ರಾಜ್ಯಗಳ[illegible] ಸಂಚಾರ ಮಾಡಿ ನವೆಂಬರ್ 7 ರಂದು ಬೆಳಿಗ್ಗೆ ಬೆಂಗಳೂರನ್ನು ತಲುಪಿದೆನು. ಸೆಪ್ಟಂಬರ್ ಕಡೆಯವ[illegible] ಮಾಡಿದ ಪ್ರಯಾಣ ಕುರಿತು ಬರೆದುದು ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿದೆ. ನಂತ[illegible] ಕಾರ್ಯಭಾರದ ಒತ್ತಡದಿಂದ ಬರೆಯಲಾಗಿಲ್ಲ. ಈಗ ಮುಂದುವರಿಸುತ್ತಿದ್ದೇನೆ. ಡಿಸೆಂಬರ್ 2003ರ ಸಂಚಿಕೆಯಿಂದ ಮುಂದುವರಿದಿದೆ)

ಶ್ರೀಮತಿ ಗೀತಾ ಸೋಮಶೇಖರ್ ಪಾಳೇಗಾರ್ ಮನೆಯ ನಿರ್ವಹಣೆ, ನಮ್ಮ ಉಪಚಾರ ಇವುಗಳ ಜೊತೆಗೆ ಡಾ॥ ಪಾಳೇಗಾರರ ಆಫೀಸಿನಲ್ಲಿಯೂ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಅವರು ಇರುವ ಬ್ರಾಡೆನ್‌ಟನ್ ಹತ್ತಿರದಲ್ಲೇ ಇರುವ ಸಮುದ್ರ ದಂಡೆಯಸ್ಥಳದಲ್ಲಿದ್ದ ಬಹುದೊಡ್ಡ ಮತ್ಸ್ಯಾಗಾರವೊಂದನ್ನು ಮತ್ತು ಡಾಲ್ಫಿನ್ ಎಂಬ ಸಸ್ತನಿ (mammal) ಇರುವ ಸ್ಥಳವನ್ನು, ಒಂದು ಪಕ್ಷಿಧಾಮವನ್ನು ತೋರಿಸಲು ಕರೆದೊಯ್ದರು. ಇವುಗಳ ವರ್ಣನೆ ಮಾಡುವುದಕ್ಕಿಂತಲೂ ಒಂದು ವಿಷಯ ಪ್ರಸ್ತಾಪಿಸುವುದು ಮುಖ್ಯವೆನ್ನಿಸುತ್ತಿದೆ. ಇಂಥ ಸಾರ್ವಜನಿಕ ಸಂಸ್ಥೆಗಳಲ್ಲಿ ಸೇವಾಕಾರ್ಯಕ್ಕೆ ಬಹಳ ಜನರು ತೊಡಗಿಸಿಕೊಳ್ಳುತ್ತಾರೆ. ಅನೇಕ ನಿವೃತ್ತರು, ಬಿಡುವು ಇರುವ ಶ್ರೀಮಂತರು ಸಾರ್ವಜನಿಕ ಸಂಸ್ಥೆಗಳಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಾರೆ. ಮ್ಯುಸಿಯಮ್ ತೆರೆಯುವ ವೇಳೆಗೆ ಬಂದು ಟಿಕೆಟ್ ವಿತರಣೆ, ವಸ್ತು ವಿವರಣೆ ಮುಂತಾದ ಕಾರ್ಯಗಳನ್ನು ಸಮವಸ್ತ್ರ ಧರಿಸಿ ಮಾಡುತ್ತಾರೆ. ಅವರಿಂದ ಸೇವೆಯೂ ಆಗುತ್ತದೆ, ಅವರ ಸಮಯದ ಸದುಪಯೋಗವೂ ಆಗುತ್ತದೆ. ಸದಾ ಕ್ರಿಯಾಶೀಲರಾಗಿರಲು ಬಯಸುವ ಆ ಜನರು ಎಷ್ಟು ಮುಪ್ಪಿನವರಾದರೂ ಕೆಲಸ ಮಾಡುತ್ತಲೇ ಇರುತ್ತಾರೆ. ನಮ್ಮನ್ನು ನೋಡಿ ಓರ್ವ ವ್ಯಕ್ತಿ, "ನೀವು ಭಾರತೀಯರಲ್ಲವೆ ?" ಎಂದ. ಅಹುದು ಎಂದಾಗ "ಈ ಸಂಸ್ಥೆಯ ಸ್ಥಾಪನೆಗೆ ಶ್ರಮಿಸಿದ ಜೀವ ವಿಜ್ಞಾನಿ ಭಾರತೀಯರೆ" ಎಂದು ಅಭಿಮಾನದಿಂದ ನುಡಿದ. ಗೌರವಾನ್ವಿತ ಹೆಸರ ಫಲಕದತ್ತ ಕೈ ಮಾಡಿದ; ನೋಡಿದಾಗ ಡಾ॥ ಮಹಾಲಿಂಗಯ್ಯ ಎಂದು ಇತ್ತು.

ಫ್ಲಾರಿಡಾ ರಾಜ್ಯದ ಹವಾಮಾನ ಬೆಂಗಳೂರಿನ ಹವಾಮಾನದಂತಿದೆ. ಸಮುದ್ರ ದಂಡೆಗುಂಟ ಇರುವ ಈ ರಾಜ್ಯದಲ್ಲಿ ಅರಣ್ಯ ಸಂಪತ್ತು ಬಹಳ. ಸಮುದ್ರಕ್ಕೆ ಬಂದು ಸೇರುವ ನದಿಗಳು ಅಸಂಖ್ಯಾತ. ಅಮೆರಿಕಾದ ಕೆಲವು ಭಾಗಗಳಲ್ಲಿ ವಿಪರೀತ ಥಂಡಿಯಾಗಿ, ಹಿಮಪಾತವಾಗುವ ಕಾಲದಲ್ಲಿ ಹೇಗೆ ಪಕ್ಷಿಗಳು ಉಷ್ಣವಲಯಕ್ಕೆ ವಲಸೆ ಹೋಗುತ್ತವೋ ಹಾಗೆ ಜನರೂ ಸಹ ಈ ರಾಜ್ಯದ ಹಲವು ಭಾಗಗಳಲ್ಲಿ ಬಂದು ಚಳಿಗಾಲ ಕಳೆದುಕೊಂಡು ಪುನಃ ತಮ್ಮ ಊರುಗಳಿಗೆ ಹೋಗುವರಂತೆ. ಹೀಗಾಗಿ ಅಂಥ ಜನರಿಗಾಗಿ ತಾತ್ಕಾಲಿಕ ವಸತಿಗಳು, ಮೊಬೈಲ್ ಹೋಮ್ಸ್ ಇರುತ್ತವೆ. ಗಾಲಿಗಳ ಮೇಲೆ ಮನೆ ಸಿದ್ಧವಾಗಿ ಸಿಗುತ್ತವೆ. ಅವನ್ನು ಎಳೆದುಕೊಂಡು ಹೋಗಿ ಒಂದೆಡೆ ನಿಲ್ಲಿಸಿ ಒಳಗೆ ವಾಸಿಸುವರು. ಇಲ್ಲವೇ ಪಾಯ ಕಟ್ಟಿ, ಇವನ್ನು ಒಯ್ದು ಅದರ ಮೇಲೆ ಇಡುವರು. ಡಾ॥ ಸೋಮಶೇಖರ್ ಅಲ್ಲಿ ಒಂದು

ಹೊಲಕೊಂಡು, ಪ್ರಾರ್ಥನಾ ಮಂದಿರ, ಲಿಂಗಾಯತರಿಗಾಗಿ ಒಂದು ವೃದ್ಧಾಶ್ರಮ, ಸ್ಮಶಾನ, ವಿಶ್ರಾಂತಿ ಧಾಮ ಮುಂತಾಗಿ ಮಾಡಬೇಕು ಎಂಬ ಆಸೆ ಇಟ್ಟುಕೊಂಡಿದ್ದಾರೆ. ಅಂಥ ಒಂದು ಸುಂದರ ಸ್ಥಳವನ್ನು ಸಹ ತೋರಿಸಿದರು. ಡಿಸ್ನಿ ವರ್ಲ್ಡ್‌ಗೆ ಸಹ ಅದು ಹೆಚ್ಚುದೂರದಲ್ಲಿಲ್ಲ.

ಅಕ್ಟೋಬರ್ 4ನೇ ತಾರೀಖು ನಾನು ಟಾಂಪಾದಿಂದ ವಿಮಾನವನ್ನು ಹತ್ತಬೇಕಾಗಿತ್ತು. ಶ್ರೀಮತಿ ಗೀತಾ ಅವರು ವಿಮಾನ ನಿಲ್ದಾಣಕ್ಕೆ ಬಂದು ಬೀಳ್ಕೊಟ್ಟರು. ಅಲ್ಲಿಂದ ನ್ಯೂಯಾರ್ಕಿಗೆ ಪ್ರಯಾಣ. ನ್ಯೂಯಾರ್ಕ್ ನಗರದ ಬಳಿ ಬರುತ್ತಲೇ ವಿಮಾನವನ್ನು ಚಾಲಕ ಸುತ್ತುಹೊಡೆಸುತ್ತ ನಗರದ ಸಂದರ್ಶನ ಮಾಡಿಸಿದ. ಸಮುದ್ರ ದಂಡೆಯ ಮೇಲಿರುವ ಈ ನಗರ ಮನೆಗಳಿಂದ ದಟ್ಟೈಸಿದೆ. ನಗರವು ಬೆಳೆಯಲಿಕ್ಕೆ ಭೂಮಿಯೇ ಇಲ್ಲದಿರುವುದರಿಂದ ಮನೆಗಳು ಒತ್ತೊತ್ತಾಗಿ ಇವೆ. ತುಂಬಾ ತುಟ್ಟಿ ನಗರ. ವಾಷಿಂಗ್ಟನ್ ಅಮೆರಿಕಾದ ರಾಜಧಾನಿಯಾಗಿದ್ದರೂ ರಾಜಧಾನಿಯ ಸ್ಥಾನವನ್ನು ನ್ಯೂಯಾರ್ಕ್ ಪಡೆದುಕೊಂಡಿದೆ. ನಿಜವಾಗಿ ಹೇಳಬೇಕೆಂದರೆ ಜಗತ್ತಿನ ರಾಜಧಾನಿ ನ್ಯೂಯಾರ್ಕ್ ಎಂದರೆ ಉತ್ಪ್ರೇಕ್ಷೆಯಲ್ಲ. ಹೇಗೆ ಬೆಂಗಳೂರು ನಗರ ಕಾಸ್ಮೊಪಾಲಿಟನ್ ಸಿಟಿ ಎಂಬ ಬಿರುದು ಪಡೆದಿದೆಯೋ ನ್ಯೂಯಾರ್ಕ್ ಸಹ ಹಾಗೆ. ಜಗತ್ತಿನಲ್ಲಿ ಎಷ್ಟು ರಾಷ್ಟ್ರಗಳು ಇವೆಯೋ ಅಷ್ಟೂ ರಾಷ್ಟ್ರಗಳ ಜನರು ಈ ನಗರದಲ್ಲಿ ಕಾಣ ಸಿಗುತ್ತಾರೆ. ವಿಶ್ವರಾಷ್ಟ್ರ ಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಗಳಾದ ವಿಶ್ವ ವಾಣಿಜ್ಯ ಕೇಂದ್ರ, ವಿಶ್ವ ಆರೋಗ್ಯ ಕೇಂದ್ರ ಎಲ್ಲವೂ ಅಲ್ಲೇ ಕೇಂದ್ರೀಕೃತವಾಗಿವೆ. ಮುಂಬೈ ನಗರದಂತೆ ತೋರುತ್ತದೆ. ಆದರೆ ಆ ಕೊಳಕು ದುರ್ವಾಸನೆ ಮಾತ್ರ ಇಲ್ಲ.

ಲಾಗಾರ್ಡಿಯಾ ವಿಮಾನ ನಿಲ್ದಾಣದಲ್ಲಿ ವಿಮಾನ ನಿಂತು ಲಗೇಜ್ ವಿಭಾಗಕ್ಕೆ ಬರುತ್ತಲೇ ಮನೋಹರ್ ಮತ್ತು ಅವರ ಮಿತ್ರ ಪ್ರಶಾಂತ್ ನಮ್ಮನ್ನು ಸ್ವಾಗತಿಸಿ ಕರೆದೊಯ್ದರು. ಇವರ ಅಪಾರ್ಟ್‌ಮೆಂಟ್ ಇರುವುದು ಎಲ್ಮ್‌ಹರ್ಸ್ಟ್ ಎಂಬಲ್ಲಿ. ತುಂಬಾ ಜನ ನಿಬಿಡ ಸ್ಥಳ. ಇಲ್ಲಿ ಕಾರ್‌ಪಾರ್ಕಿಂಗ್ ತುಂಬಾ ಕಷ್ಟ. ಕಾರನ್ನುಕೊಳ್ಳೋದು ಸುಲಭ. ನಿಲ್ಲಿಸಲು ಜಾಗ ಹುಡುಕುವುದು ಕಷ್ಟ. ಅನೇಕ ಬಗೆಯ ಕಾರುಗಳು ಈ ದೇಶದಲ್ಲಿ ಉತ್ಪನ್ನವಾಗುತ್ತವೆ. ಜೊತೆಗೆ ಸಾಲ ಸುಲಭವಾಗಿ ಸಿಗುತ್ತದೆ. ಹೀಗಾಗಿ ಮನೆ ಮಂದಿಯೆಲ್ಲ ಕಾರನ್ನು ಇಟ್ಟುಕೊಳ್ಳುತ್ತಾರೆ, ಕಂತಿನಲ್ಲಿ ತೀರಿಸುತ್ತಾರೆ. ನಾನು ಈವರೆಗೆ ಸಂಚರಿಸಿದ ಎಲ್ಲ ಊರುಗಳಲ್ಲಿ ಮನೆಯ ಎಲ್ಲರೂ ಕಾರುಗಳನ್ನು ಹೊಂದಿರುತ್ತಾರೆ. ಆದರೆ ಈ ನ್ಯೂಯಾರ್ಕ್‌ನಲ್ಲಿ, ಅದೂ ಮುಖ್ಯವಾಗಿ ಎಲ್ಮ್‌ಹರ್ಸ್ಟ್ ಮುಂತಾದ ಭಾಗಗಳಲ್ಲಿರುವವರು ಕಾರು ನಿಲ್ಲಿಸಲು ಜಾಗ ಸಿಕ್ಕದ್ದರಿಂದ ಕಾರು ಇಡಲು ಹಿಂಜರಿಯುತ್ತಾರೆ. ಇದಕ್ಕೆ ಇನ್ನೂ ಒಂದು ಕಾರಣ ಎಂದರೆ ಇಲ್ಲಿ ಸಾರ್ವಜನಿಕ ಸಾರಿಗೆ ಸೌಲಭ್ಯ ಅತ್ಯುತ್ತಮವಾಗಿದೆ. ಬಸ್ಸುಗಳು, ಟ್ಯಾಕ್ಸಿಗಳು, ಭೂಗತ ಟ್ರೇನುಗಳು ಇಡೀ ನಗರದ ಮೂಲೆ ಮೂಲೆಗೆ ಹೋಗುವುದರಿಂದ ಬಹಳ ಸುಲಭವಾಗಿ ಪ್ರಯಾಣಿಸಬಹುದು. ಈ ಭೂಗತ ರೇಲ್ವೆ ನಿಲ್ದಾಣ ಹೆಜ್ಜೆ ಹೆಜ್ಜೆಗೂ ಇರುತ್ತವೆ. ಬಸ್ ಸ್ಟಾಪ್ ಸಹ ಅಷ್ಟೆ. ಒಮ್ಮೆ ನಾವು ನಗರ ವೀಕ್ಷಣೆಗೆ ಎಂದು ಹೊರಟೆವು. ಮನೋಹರ್ ಅವರ ಪತ್ನಿ ಆಪಲ್ ಬಸ್ ಟೂರ್ ಎಂದು ಫೋನಿನಲ್ಲಿ ಬುಕ್ ಮಾಡಿ, ಸ್ವಂತ ಕಾರ್ ಆದರೆ ರಸ್ತೆ ಹುಡುಕಲು ಸಮಯ ಹಿಡಿಯುತ್ತೆ ಎಂದು ಟ್ಯಾಕ್ಸಿಗೊತ್ತು ಮಾಡಿದರು. ನಾವು ತಲುಪಬೇಕಾದ ಸ್ಥಳ ಮುಟ್ಟಲು ಎರಡು ತಾಸು ಹಿಡಿಯಿತು. ಒಂದು ವೇಳೆ ಭೂಗತ ಟ್ರೇನಿನಲ್ಲಿ ಹೋಗಿದ್ದರೆ ಮುಕ್ಕಾಲು ಗಂಟೆಯೊಳಗೆ ತಲುಪಿರುತ್ತಿದ್ದೆವು.

ದಾರಿಯಲ್ಲಿ ವಾಹನಗಳ ಸಾಲು ವಿಪರೀತ ಇರುತ್ತದೆ. ಅಕ್ಟೋಬರ್ 4, ಶನಿವಾರದಂದು ಹಿಂದೂ ಸೆಂಟರ್‌ನಲ್ಲಿ ನನ್ನ ಭಾಷಣ ಕಾರ್ಯಕ್ರಮ. ಮನೋಹರ್ ಮತ್ತು ಸಂಗಡಿಗರು ಕಾರ್ಯಕ್ರಮದ ವ್ಯವಸ್ಥೆ, ಬಂದವರಿಗೆ ಪ್ರಸಾದ ವ್ಯವಸ್ಥೆ ಮಾಡಿದ್ದರು. ಮದ್ರಾಸ್ ಮೂಲದ ಓರ್ವ ವೈದ್ಯರು ಅದರ ಅಧ್ಯಕ್ಷರು. ಯೋಗೀಶ್ವರಿ ಅವರಿಂದ ಫೋನ್ ಬಂದಿತು. ವಾಷಿಂಗ್‌ಟನ್‌ದವರು ಆಹ್ವಾನಿಸುತ್ತಿದ್ದಾರೆ, ಸಮಯ ಕೇಳುತ್ತಿದ್ದಾರೆ ಎಂದು. ಮೊದಲೇ ವಿಚಾರಿಸಿದಾಗ ಅವರಿಗೆ ಸಮಯ ಹೊಂದಾಣಿಕೆಯಾಗಿಲ್ಲ. ನ್ಯೂಯಾರ್ಕಿನಿಂದ ಆಸ್ಟಿನ್‌ಗೆ ಹೊರಟು ಇನ್ನು ವಾಪಸ್ಸು ಭಾರತಕ್ಕೆ ಬರುವ ತಯಾರಿ ಮಾಡಬೇಕು. ಆಸ್ಟಿನ್‌ಗೆ ಹೋದ ಮೇಲೆ ಪುನಃ ವಾಷಿಂಗ್‌ಟನ್‌ಗೆ ಹೋಗಬೇಕೆಂದರೆ ವಿಪರೀತ ವಿಮಾನ ವೆಚ್ಚ ಮತ್ತು 15 ದಿವಸಗಳ ಮೊದಲಿಗೆ ರಿಸರ್ವ್ ಮಾಡಿದರೆ ಒಂದು ಬೆಲೆ, 3 ವಾರ ಮೊದಲಿಗೆ ಆದರೆ ಇನ್ನೂ ಕಡಿಮೆ. ಜೊತೆಗೆ ಅಲ್ಲಿಯ ಜನರಿಗೆ ಶನಿವಾರ, ಭಾನುವಾರಗಳೇ ಬೇಕು. ಬೇರೆ ದಿವಸ ಏತಕ್ಕೂ ಬಿಡುವಿರದು.' ಕಡೆಗೆ ಅಕ್ಟೋಬರ್ 11ರ ಶನಿವಾರ ನ್ಯೂಯಾರ್ಕಿನಿಂದ ವಾಷಿಂಗ್‌ಟನ್‌ಗೆ ಹೋಗಿ ಮಧ್ಯಾಹ್ನ ಕಾರ್ಯಕ್ರಮಪೂರೈಸಿ ಪುನಃ ಸಂಜೆಗೆ ವಾಪಸ್ಸು ನ್ಯೂಯಾರ್ಕಿಗೆ ಹೋಗುವುದು ಎಂದು ನಿರ್ಧರಿಸಿ ಕಾರ್ಯಕ್ರಮ ಕೊಟ್ಟೆವು. ಬೆಳಗಿನ ಜಾವವೇ ಎದ್ದು ಸಿದ್ಧಳಾದೆ. ಮನೋಹರ್ ವಿಮಾನ ನಿಲ್ದಾಣಕ್ಕೆ ಬಿಟ್ಟು ಬಂದರು. ಅಲ್ಲಿಂದ ವಾಷಿಂಗ್‌ಟನ್ ತಲುಪುವಾಗ ಮಧ್ಯಾಹ್ನ 12. ವಿಮಾನ ನಿಲ್ದಾಣಕ್ಕೆ ಇಂಜಿನಿಯರ್‌ಗಳಾದ ಶಿವಾನಂದ ಹತ್ತಂಗಡಿ ಮತ್ತು ಗಿರೀಶ್ ಅವರು ಬಂದಿದ್ದರು. ಶ್ರೀ ರಾಮರಾವ್ ಎನ್ನುವವರ ಮನೆಯ ನೆಲಮಾಳಿಗೆ ವಿಶಾಲವಾಗಿತ್ತು. ಅವರು ಬೆಂಗಳೂರಿನವರು. ಅಲ್ಲೇ ಕಾರ್ಯಕ್ರಮ. ಒಂದು ಗಂಟೆಗೆ ಮನೆ ತಲ್ಪಿ ಅವಸರದಿಂದ ಪ್ರಸಾದ ಸ್ವೀಕರಿಸಿದೆ. ಅಷ್ಟರಲ್ಲಿ ಬಂದ ಜನರೂ ಊಟ ಮುಗಿಸಿದರು. ನಂತರ ಕಾರ್ಯಕ್ರಮ; ರಾಮರಾವ್ ಅವರೇ ಸಭೆಗೆ ನಮ್ಮ ಪರಿಚಯ ಮಾಡಿದರು. ಧರ್ಮದ ಅಗತ್ಯವೇನು ? ಪಾಶ್ಚಾತ್ಯ ರಾಷ್ಟ್ರದಲ್ಲಿ ನೆಲೆಸಿರುವ ಭಾರತೀಯರು ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಎದುರಿಸುವ ಸಮಸ್ಯೆಗಳೇನು ? ಹೇಗೆ ಹೊಂದಿಕೊಳ್ಳಬೇಕು ? ಯಾವ ರೀತಿ ತಮ್ಮತನವನ್ನು ಕಳೆದುಕೊಳ್ಳದಂತೆ ಇರಬೇಕು. ಜೀವನದಲ್ಲಿ ವೈಜ್ಞಾನಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಸಮನ್ವಯ ಮಾಡಿಕೊಳ್ಳುವ ಪರಿ ಎಂತು ? ಹೀಗೆ ವೈವಿಧ್ಯಮಯ ವಿಷಯ ಕುರಿತು ಮಾತನಾಡಿದೆ. ನಂತರ ಪ್ರಶ್ನೋತ್ತರ. ಐವತ್ತು ವರ್ಷಗಳ ಹಿಂದೆ ಅಲ್ಲಿ ಹೋಗಿ ನೆಲೆಸಿದ ಡಾ|| ಪಾಯಸದ ಕೊಟ್ರಪ್ಪ ಅವರಿಂದ ಹಿಡಿದು ಅಲ್ಲೇ ಹುಟ್ಟಿ ಬೆಳೆದವರಲ್ಲದೆ, ವೈದ್ಯರು, ಇಂಜಿನಿಯರುಗಳು ಮುಂತಾದ ಎಲ್ಲ ವೃತ್ತಿಯ ಶ್ರೋತೃಗಳೂ ಸೇರಿದ್ದರು. ತುಂಬಾ ಹಸಿದು ಕಂಗಾಲಾದವರಿಗೆ ಒಮ್ಮೆಗೇ ಬಗೆಬಗೆಯ ಭಕ್ಷ್ಯಭೋಜ್ಯಗಳು ಕಣ್ಣಮುಂದೆ ತಂದಿಟ್ಟಂತೆ ಅವರಿಗೆ ಪಶ್ನೆ ಕೇಳಿ ತಿಳಿದುಕೊಳ್ಳುವ ಆತುರ. 2 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮ ಐದೂವರೆ ಆಗುತ್ತಿದೆ. ನನ್ನ ವಿಮಾನ 7 ಗಂಟೆಗಿದೆ. ಮರುದಿನವೇ ನ್ಯೂಯಾರ್ಕಿನಲ್ಲಿ ದೊಡ್ಡ ಕಾರ್ಯಕ್ರಮ ಹೋಗಲೇ ಬೇಕು.. ಹೇಗೋ ಬಿಡಿಸಿಕೊಂಡೆ, ಸರಿಯಾಗಿ ಊಟವನ್ನೂ ಮಾಡಿರಲಿಲ್ಲ, ಮನೆಯವರು ಬಗೆಬಗೆಯ ಅಡಿಗೆ ಮಾಡಿಟ್ಟುಕೊಂಡಿದ್ದಾರೆ. ಊಟ ಮಾಡಲು ಸಮಯವಿಲ್ಲ, ಅವಸರದಲ್ಲಿ ಹೊರಟು ಬಿಟ್ಟಾಗ, ''ನಮಗೆಲ್ಲ ಅರ್ಧ ಹೊಟ್ಟೆಗೆ ಉಂಡಂತಾಗಿದೆ. ಮುಂದಿನ ಸಲ ಬಂದಾಗ ಹೆಚ್ಚು ಸಮಯ ಕೊಡಬೇಕು'' ಎಂದು ಹೇಳಿ ಬೀಳ್ಕೊಟ್ಟರು. ಮರುದಿನ ಭಾನುವಾರ, ಅಕ್ಟೋಬರ್ 12

ಅಂದು ಸುಪ್ರಸಿದ್ಧ ಹಿಂದು ಟೆಂಪಲ್‌ದ ವಿಶಾಲವಾದ ಸಭಾಂಗಣದಲ್ಲಿ ಪ್ರವಚನ. ಆ ಭಾನುವಾರ ವಿಜ್ಞಾನ ಯುಗದಲ್ಲಿ ಧರ್ಮದ ಅಗತ್ಯ ಎಂಬ ಬಗ್ಗೆ ಈ ಬಾರಿ ಕರ್ಮಸಿದ್ಧಾಂತ ಕುರಿತು ಮಾತನಾಡಿದೆ. ಜನರು ಹರ್ಷಪುಳಕಿತರಾದರು. ಕಾರ್ಯಕ್ರಮವನ್ನು ಉದ್ಘಾಟಿಸಿದವರು India weekly USA ಎಂಬ ವಾರ ಪತ್ರಿಕೆಯ ಮಾಲಿಕರಾದ ಕೇವಲ್ ಕಪೂರ್. ಅವರು ತಮ್ಮ ಪತ್ನಿ ಅನುರಾಧ ಮತ್ತು ಎರಡು ಮಕ್ಕಳ ಸಹಿತ ಬಂದಿದ್ದರು. ಪತ್ರಿಕೆಯ ಕಾರ್ಯಾಲಯದ ಸಿಬ್ಬಂದಿ ಬಂದಿದ್ದರು. ಅಮೆರಿಕನ್ನರು ಬಹಳ ಸಂಖ್ಯೆಯಲ್ಲಿದ್ದರು. ಅನೇಕ ಜನ ವೈದ್ಯರು, ಬ್ಯಾಂಕ್ ಅಧಿಕಾರಿಗಳು - ಹೀಗೆ ವೈವಿಧ್ಯಮಯ ಶ್ರೋತೃಗಳು ಸಮಾವೇಶವಾಗಿದ್ದರು. ಕಾರ್ಯಕ್ರಮದ ಬಳಿಕ ಪ್ರಶ್ನೋತ್ತರ ನಡೆಯಿತು. ಬರ್ಮನ್ ಎಂಬ ಓರ್ವ ವಿದ್ವಾಂಸರು ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ವಿಶೇಷ ಅಭಿಮಾನದಿಂದ ಮಾತನಾಡಿದರು. ''ಈವರೆಗೆ ಅನೇಕ ಜನರು ಬಂದು ಇಲ್ಲಿ ಉಪನ್ಯಾಸ ನೀಡಿದ್ದಾರೆ. ಭಾರತದಿಂದ ಬರುವ ಎಲ್ಲರೂ ನ್ಯೂಯಾರ್ಕ್‌ಗೆ ಬರದೆ ಇರುವುದಿಲ್ಲ; ಈ ಹಿಂದು ಟೆಂಪಲ್ ಭಾರತೀಯರು, ಅಮೆರಿಕನ್ ಎಲ್ಲರನ್ನೂ ಆಕರ್ಷಿಸುತ್ತಿದೆ. ಆದರೆ ಇಂದು ಅತ್ಯಂತ ವಿದ್ವತ್‌ಪೂರ್ಣ ಮನ ಮುಟ್ಟುವ ಪ್ರವಚನ ಕೇಳಿದೆವು ''ಎಂದು ಅಭಿನಂದಿಸಿದರು. ಓರ್ವ ಅಮೆರಿಕನ್ ಮಹಿಳೆ, ''ಈವರೆಗೆ ಅನೇಕ ಸ್ವಾಮಿ, ಸಂತರ ಪ್ರವಚನ ಕೇಳಿದ್ದೇವೆ. ಆದರೆ ತಾಯಿಯನ್ನು ಕಂಡುದು ಈಗಲೇ. ನಿಮ್ಮ ಮಾರ್ಗದರ್ಶನ ಮಗೆ ಬೇಕು'' ಎಂದು ಭಾವಪೂರ್ಣವಾಗಿ ಹೇಳಿದಳು. ಕೆಲವರು ಧ್ಯಾನದ ಬಗ್ಗೆ ಮಾರ್ಗದರ್ಶನ ಬೇಕು ಎಂದರು. ಮರುದಿವಸ ನಾವಿರುವ ಸ್ಥಳಕ್ಕೆ ಬರಲು ತಿಳಿಸಿದೆವು. ಕೆಲವರು ಬಂದು ಧ್ಯಾನದ ವಿಧಾನ ಹೇಳಿಸಿಕೊಂಡರಲ್ಲದೆ ಮಂತ್ರೋಪದೇಶ ಮಾಡಿಸಿಕೊಂಡರು. ಅವರಲ್ಲಿ ಇಬ್ಬರು ವೈದ್ಯ ದಂಪತಿಗಳು ನಮಗೆ ಅಲ್ಲೇ ಉಳಿಯಬೇಕೆಂದು, ಆಶ್ರಮ ಸ್ಥಾಪಿಸಬೇಕೆಂದು ಆಗ್ರಹಿಸಿದರು. ಅಂದಿನ ಭಾಷಣ ಕೇಳಿ ಪ್ರೇರಿತರಾದ ಮಧು ಮೆತ್ತು ಪತಿಯವರು ಒಂದು ವಾರದ ನಂತರ ಅಭಿನಂದಿಸಿ ಪತ್ರ ಬರೆದುದಲ್ಲದೆ 500 ಡಾಲರ್ ಕಾಣಿಕೆಯನ್ನು ಕಳಿಸಿಕೊಟ್ಟರು. ತಮಿಳು ನಾಡಿನಿಂದ ಅಲ್ಲಿಗೆ ಹೋಗಿರುವ ಮಾರಿಮುತ್ತು ಕೃಷ್ಣಸ್ವಾಮಿ ಎನ್ನುವವರು ಸಸ್ಯಾಹಾರ ನಿಯಮಕ್ಕೆ ಬದ್ಧರಾಗುವುದಾಗಿ ಹೇಳಿ ಪ್ರತಿಜ್ಞೆ ಮಾಡಿ ಇಷ್ಟಲಿಂಗ ದೀಕ್ಷೆ ಪಡೆದರು.

ಬೆಂಗಳೂರಿನ ಮೂಲದವರಾದ ಶ್ರೀಮತಿ ಹೇಮಾ ಮತ್ತು ಶ್ರೀ ಬಿ.ಸಿ. ಉಮೇಶ್, ಧಾರವಾಡ ಮೂಲದ ವಿಶ್ವನಾಥ್ ದಂಪತಿಗಳು, ತಮಿಳುನಾಡಿನ ಊಟಿ ಮೂಲದ ಶ್ರೀಮತಿ ವಸಂತ್ ಮಲ್ಲನ್, ಆಂಧ್ರದ ಡಾ|| ಅನುಪಮ ಮತ್ತು ಡಾ|| ನೊಕಲ ರೆಡ್ಡಿ ಮನೆಗೆ ಆಹ್ವಾನಿಸಿ ಬಸವ ಜ್ಯೋತಿ ಕಾರ್ಯಕ್ರಮ ಏರ್ಪಡಿಸಿದರು.

ಮಹಾಲಕ್ಷ್ಮಿ ಮಂದಿರ

ನಾನೀಗಾಗಲೇ ಹೇಳಿದ್ದೇನೆ ನ್ಯೂಯಾರ್ಕ್ ಅಂತರರಾಷ್ಟ್ರೀಯ ನಗರ, ಜಗತ್ತಿನ ರಾಜಧಾನಿ ಎಂದು. ನಮ್ಮ ವಿಚಾರಧಾರೆಯಿಂದ, ಪ್ರವಚನಗಳಿಂದ ಪ್ರಭಾವಿತರಾದ ಕೃಷ್ಣಸ್ವಾಮಿ ತಮಿಳು ಸಂಘದ ಅಧ್ಯಕ್ಷರಾದ ಸಾಗರ್ ಎನ್ನುವವರಿಗೆ ಪ್ರೇರಣೆ ನೀಡಿ ಅವರ ಮನೆಯ ಪ್ರದೇಶವಾದ ರಿಚ್‌ಮೆಂಡ್ ಹಿಲ್ಸ್‌ದಲ್ಲಿ ಉಪನ್ಯಾಸ ಇಡಲು ಕೇಳಿಕೊಂಡರು. ಅಲ್ಲಿ ಒಂದು ಮಹಾಲಕ್ಷ್ಮಿ ಮಂದಿರ ಎಂದಿದ್ದು ಅದರಲ್ಲಿ ವಿಶಾಲವಾದ ಸಭಾಂಗಣವಿದೆ. ಅಲ್ಲಿ ಅಕ್ಟೋಬರ್ 19ರಂದು ಕಾರ್ಯಕ್ರಮ

ಏರ್ಪಡಿಸಿದರು. ಅದು ವೆಸ್ಟ್ ಇಂಡೀಸ್, ಗಯಾನಾ ಮುಂತಾದ ಪ್ರದೇಶಗಳಿಂದ ಬಂದ ಹಿಂದುಗಳ ಕೇಂದ್ರ. ಇವರ ಬಗ್ಗೆ ತಿಳಿಯುವುದು ಅಗತ್ಯ. ಇವರು ಬ್ರಿಟಿಷ್ ವಸಾಹತುವಾಗಿ ನಮ್ಮ ದೇಶ ಇದ್ದಾಗ ಆ ಬ್ರಿಟಿಷ್ ಜನ ಕೆಲಸಕ್ಕಾಗಿ ಅನೇಕರನ್ನು ಗುಜರಾತ್, ಉತ್ತರ ಭಾರತದ ಇತರೆ ರಾಜ್ಯಗಳಿಂದ ವೆಸ್ಟ್ ಇಂಡೀಸ್, ಗಯಾನಾ ಹೀಗೆ ಕರೆದೊಯ್ದಿದ್ದಾರೆ. ಇವರುಗಳ ಮುತ್ತಾತಂದಿರ ಕಾಲದಲ್ಲಿ ಹೋಗಿದ್ದರೂ. ಇಂದಿಗೂ ಅವರು ಭಾರತೀಯ ಸಂಸ್ಕೃತಿ, ಆಚಾರ-ವಿಚಾರ, ಬಟ್ಟೆಯುಡುವ ರೀತಿ ನೋಡಿದರೆ ಆಶ್ಚರ್ಯ ಮತ್ತು ಆನಂದ ಎರಡೂ ಉಂಟಾಗುತ್ತವೆ. ಆ ದೇಶಗಳಿಂದ ಇಲ್ಲಿಗೆ ವಲಸೆ ಬಂದು ವ್ಯಾಪಾರ-ವ್ಯವಹಾರದಲ್ಲಿ ಬಲ್ಲಿದರಾಗಿದ್ದಾರೆ. ಇವರ ಒಂದು ಮಂದಿರ ನೋಡಿಯೇ ನನಗೆ ಅಚ್ಚರಿಯುಂಟಾಯಿತು. ಇಂಥವು 22 ಮಂದಿಗಳು ಬರೀ ನ್ಯೂಯಾರ್ಕ್ ನಗರ ಒಂದರಲ್ಲೇ ಇವೆಯಂತೆ.

ಜನರು ಬಹಳ ವಿದ್ಯಾವಂತರು ಮತ್ತು ಶ್ರೀಮಂತರು. ಆದರೆ ಅವರ ಶಿಸ್ತು, ಸಂಘಟನೆ ಮೆಚ್ಚಬೇಕು - ಅವರು ತಮ್ಮ ತಮ್ಮ ಪ್ರದೇಶಗಳಲ್ಲಿ ಮಹಾಲಕ್ಷ್ಮಿ ಮಂದಿರ ಮಾಡಿಕೊಂಡು ಸೇರಿ, ಮುಖ್ಯ ಉತ್ಸವಗಳಲ್ಲಿ ಎಲ್ಲರೂ ಸೇರುತ್ತಾರಂತೆ. ವಾರದ ಭಜನೆ ಕಡ್ಡಾಯ. ತಪ್ಪಿಸಿದವರು ಸಮಾಜಕ್ಕೆ ದಂಡ ತೆರಬೇಕಂತೆ. ನಾನು ಹೋದಾಗ ಗೌರವ ಪೂರ್ಣವಾಗಿ ಬರ ಮಾಡಿಕೊಂಡರು. ಒಬ್ಬರು ಕಾವಿ ಧರಿಸಿದ ಗುರುಗಳು ಇದ್ದರು. ಅವರ ಮುಂದೆ ಇಬ್ಬರು ಬ್ರಾಹ್ಮಣ ಪೂಜಾರಿಗಳು; ಬೇರೆ ಬೇರೆ ಪೂಜೆ ಮಾಡಿಸುತ್ತಿದ್ದರು. ಹಿಂದುಗಳ ಎಲ್ಲ ದೇವತೆಗಳ ಪ್ರತಿಮೆಗಳು ಇದ್ದವು. ಭಜನೆ ನೆಡೆಯಿತು. ಅವರ ಗುರುಗಳು ಮಾತನಾಡಿದರು. ಜನರು ತಮ್ಮ ಪಾಡಿಗೆ ತಾವು ಕುಳಿತಿದ್ದರು. ನಂತರ ನನ್ನ ಪರಿಚಯ ತಿಳಿಸಿ ಕಾರ್ಯದರ್ಶಿ ನನಗೆ ಮೈಕ್ ಕೊಟ್ಟರು. ನಾನೂ ಭಜನೆ ಮಾಡಿಸಿ, ಶರಣ ಜನ ಪೂಜಿತ ಲಿಂಗಾಷ್ಟಕ ಹೇಳಿದೆ. ಜನರು ಉತ್ಸಾಹ ಭರಿತರಾದರು. ನಂತರ ಪ್ರವಚನ ಶುರು ಮಾಡಿದೆ. ಎಲ್ಲರೂ ಲಕ್ಷಗೊಟ್ಟು ಆಲಿಸ ತೊಡಗಿದರು. ಅತ್ತ ಇತ್ತ ಕೆಲಸದಲ್ಲಿದ್ದವರೆಲ್ಲ ಓಡಿ ಬಂದು ಪ್ರವಚನ ಕೇಳಲು ಆರಂಭಿಸಿದರು. ಒಂದು ಬಗೆಯ ವಿದ್ಯುತ್ ಸಂಚಾರವಾದಂತೆ ಆಗಿತ್ತು. ಪ್ರವಚನ ನಿರರ್ಗಳವಾಗಿ ಹರಿಯುತ್ತ ಹೋದಂತೆ ಜನರು ಮೈಮರೆತು ಕೇಳತೊಡಗಿದರು. ಅದನ್ನು ಕಂಡು ಸ್ವಾಮಿಗಳಿಗೆ ಕಸಿವಿಸಿ ಪ್ರಾರಂಭವಾಯಿತು. ''ಸಮಯವಾಗುತ್ತಿದೆ '' ಎಂದು ಚೀಟಿ ಕಳಿಸಿದರು. ಆದರೆ ಜನ ''ಇಲ್ಲ.....ಮುಂದುವರಿಸಿ'' ಎಂದರು'' ಸಮಯವಾಗುತ್ತಿದೆ......ಪೂರ್ಣಗೊಳಿಸಿರಿ'' ಎಂದು ಸ್ವಾಮಿಗಳು ಸಂಕಟಪಟ್ಟು ಹೇಳಿ ಕಳಿಸಿದಾಗ ನಾನು ಮುಗಿಸಿದೆ. ಕಾರ್ಯಕ್ರಮ ಮಂಗಲಗೊಳ್ಳುತ್ತಲೇ ಜನರು ದರ್ಶನಕ್ಕಾಗಿ ಸಾಲುಗಟ್ಟಿನಿಂತು ಬಿಟ್ಟರು. ''ಇಂದು ಜ್ಞಾನದ ಬೆಳಕನ್ನು ಕಂಡಿದ್ದೇವೆ. ನಮಗಿನ್ನೂ ತೃಪ್ತಿಯಾಗಿಲ್ಲ. ನೀವು ಮುಂದಿನವಾರವೂ ಬರಲು ಆಹ್ವಾನ ಕೊಡಿರಿ'' ಎಂದು ಹೇಳುತ್ತಿದ್ದರು. ''ಆಗಲಿ, ಮುಂದಿನವಾರದ ಕಾರ್ಯಕ್ರಮ ಏನಿದೆಯೋ ನೋಡಿ ತಿಳಿಸುತ್ತೇವೆ'ಎಂದು ಅವರಿಗೆ ಹೇಳಿದರು. ಆಶ್ಚರ್ಯವೆಂದರೆ ಅಲ್ಲಿ ಪೂಜೆ ಮಾಡಿಸುತ್ತಿದ್ದ ಇಬ್ಬರು ಬ್ರಾಹ್ಮಣ ಪೂಜಾರಿಗಳೂ ಬಂದು ಪಾದಮುಟ್ಟಿ ನಮಸ್ಕರಿಸಿ, ಕಾಣಿಕೆ ನೀಡಿ, ''ಜಗನ್ಮಾತೆ ನಿಮ್ಮ ಆಶೀರ್ವಾದವಿರಲಿ'' ಎಂದರು. ದಕ್ಷಿಣ ಭಾರತದ ಬ್ರಾಹ್ಮಣ ಪೂಜಾರಿಗಳು ಆ ರೀತಿ ಬ್ರಾಹ್ಮಣೇತರ ಸ್ವಾಮಿಗಳನ್ನು, ಅದೂ ಮಹಿಳಾ ಗುರುಗಳನ್ನು ವಂದಿಸುವುದು ಅಪರೂಪ.

ಮುಖ್ಯಸ್ಥರಿಗೆ ಮಾತ್ರ ಮತ್ಸರ ಉಂಟಾಗಿತ್ತು. ಎಂದಿನಿಂದಲೂ ಅವರೊಬ್ಬರಿಗೇ ಮನ್ನಣೆ ಕೊಡುತ್ತಿದ್ದ ಜನ, ಆಕಸ್ಮಿಕವಾಗಿ ಬಂದ ನನ್ನ ಪ್ರವಚನ ಕೇಳಿ ಗೌರವಿಸಿದ್ದು ನೋಡಿ ಮನಸ್ಸಿನೊಳಗಾದ ತಳಮಳ ಮುಖದ ಮೇಲೆ ಕಾಣುತ್ತಿತ್ತು. ಎಲ್ಲಿ ಹೋದರೂ ಈ ಮತ್ಸರ ಬಿಡದಲ್ಲ ಎನ್ನಿಸಿತು ನನಗೆ. ನಮ್ಮದೇಶದಲ್ಲೂ ಮತ್ಸರದ ಬೆಂಕಿಯ ಝಳದಲ್ಲೇ ಅರಳ ಬೇಕಾಯಿತು. ಇಲ್ಲಿಗೆ ಬಂದರೂ ಇದೇನೆ. ಜನ ಸಾಮಾನ್ಯರು ಎಷ್ಟು ಪ್ರಾಮಾಣಿಕ ಮನಸ್ಸಿನಿಂದ ಗೌರವಿಸುತ್ತಾರೆ. ಮುಂದಾಳುಗಳದ್ದೇ ಕಾಟ ಎನ್ನಿಸಿ ಮನಸ್ಸು ಮುದುಡಿತು. ಕಾರ್ಯಕ್ರಮ ಏರ್ಪಡಿಸಲು ಕಾರಣರಾದ ಸಾಗರ್ ತೀರಾ ಖುಷಿಯಲ್ಲಿದ್ದರು. ನನ್ನ ಜೊತೆಗೆ ಬಂದಿದ್ದ ಮನೋಹರ್, ವಿಶ್ವನಾಥ, ಕೃಷ್ಣಮೂರ್ತಿ ಅವರೂ ಹಿಗ್ಗಿದ್ದರು. ''ಕಾರ್ಯಕ್ರಮ ಇಷ್ಟು ಪ್ರಭಾವ ಪೂರ್ಣವಾಗುತ್ತೆಂದು ನಾವು ನಂಬಿರಲಿಲ್ಲ. ಮಾತಾಜಿಯವರ ವಾಣಿ ಅದ್ಭುತ. ಖಂಡಿತಾ ಪುನಃ ಬರಲು ಆಹ್ವಾನಿಸುತ್ತಾರೆ '' ಎಂದು ಹೇಳುತ್ತಿದ್ದರು. ನಾನು ಅಂದುಕೊಂಡೆ, ''ಎಷ್ಟು ಮುಗ್ಧರು ! ಮತ್ಸರದ ಕಾವು ಇವರಿಗೆ ಬಡಿದಿಲ್ಲ. ನಮಗಾಗಲೇ ನಮ್ಮ ದೇಶದಲ್ಲಿ ಇದೆಲ್ಲ ಅನುಭವವಾಗಿದೆ''.

ಸಾಗರ್ ಅವರ ಪತ್ನಿ ಶ್ರೀಮತಿ ಅಂದು ಮನೆಯಲ್ಲಿ ವಿಶೇಷ ಪೂಜೆ ಇಟ್ಟುಕೊಂಡು ಎಲ್ಲರಿಗೂ ಭಕ್ತಿಯಿಂದ ಪ್ರಸಾದ ಮಾಡಿಸಿ, ''ನಮ್ಮ ಭಾಗ್ಯ'' ಎಂದು ಹರ್ಷಿಸಿದರು. ಆ ಕಾರ್ಯಕ್ರಮ ಒಂದು ವಿಶೇಷ ಅನುಭವ ನೀಡಿತು. ವಿದೇಶಗಳಲ್ಲಿ ಹೋದಾಗ ಭಾರತೀಯರನ್ನು ಕಂಡಾಗ ಏನೋ ಒಂದು ವಿಶೇಷ ಅಕ್ಕರತೆ ಉಂಟಾಗುತ್ತದೆ.

ಅಮೆರಿಕಾದ ಮದರ್ ಸ್ಟಾಚ್ಯು ನೋಡುವ ಸಲುವಾಗಿ ಮನೋಹರ್ ಒಂದು ದಿವಸ ಕರೆದೊಯ್ದರು. ಹಡಗಿನಲ್ಲಿ ಕುಳಿತು ಒಂದು ಸುತ್ತು ಓಡಾಡಿ ಬಂದುದಾಯಿತು. ಸಮುದ್ರದಲ್ಲಿ ಹೋಗುವಾಗ ಗಾಳಿಯ ಹೊಡೆತ ವಿಪರೀತ. ನ್ಯೂಯಾರ್ಕ್‌ನಲ್ಲಿ ಚಳಿಯು ಬೇಗನೇ ಆರಂಭವಾಗುತ್ತದೆ. ಒಂದು ಬದಿಗೆ ನ್ಯೂಯಾರ್ಕ್‌ನ ಗಗನ ಚುಂಬಿ ಬೃಹತ್ ಕಟ್ಟಡಗಳ ಸಮೂಹ ಇನ್ನೊಂದು ಬದಿಗೆ ನ್ಯೂಜೆರ್ಸಿಯ ಬೃಹತ್ ಕಟ್ಟಡಗಳ ಸಮೂಹ. ಹಿಂದೆ ನಾನು ಹೋದಾಗ ಆ ಬೃಹತ್ ಪುತ್ಥಳಿಯ ಒಳಗೆ ಲಿಫ್ಟ್‌ನಲ್ಲಿ ಹೋಗಲು ಅವಕಾಶವಿತ್ತು. ವಿಶ್ವ ವಾಣಿಜ್ಯ ಗೋಪುರ ಉರುಳಿದ ಮೇಲೆ ಒಳಗೆ ಹೋಗಲು ಬಿಡುವುದಿಲ್ಲ, ಹೊರಗಿನಿಂದಲೇ ನೋಡಬೇಕು ಎಂದರು. ನೋಡಿಕೊಂಡು ವಾಪಸ್ಸು ಬಂದೆವು. ನ್ಯೂಯಾರ್ಕ್ ಪಕ್ಕದ್ದೇ ನ್ಯೂಜೆರ್ಸಿ. ಎರಡೂ ಬೇರೆ ಪಟ್ಟಣಗಳೇ ಆದರೂ ಮಧ್ಯದಲ್ಲಿ ಸಮುದ್ರದ ಚಾಚಿದ ಭಾಗವಷ್ಟೆ ಎರಡನ್ನೂ ಬೇರ್ಪಡಿಸಿದೆ. ಹುಬ್ಬಳ್ಳಿ-ಧಾರವಾಡದಂತೆ ಜನರು ಎರಡೂ ಪಟ್ಟಣಗಳ ನಡುವೆ ಸಹಜವಾಗಿ ಓಡಾಡಿ ಉದ್ಯೋಗ ಮಾಡುತ್ತಾರೆ.

ವಿಶ್ವವಾಣಿಜ್ಯ ಗೋಪುರ (World Trade Tower) ವು 2002ರ ಸೆಪ್ಟಂಬರ್ 11 ವಿಮಾನ ತಾಗಿಸಲ್ಪಟ್ಟು ಬಿದ್ದು ನಾಶವಾದ ಜಾಗವನ್ನು ತೋರಿಸಲು ಮನೋಹರ್ ಕರೆದೊಯ್ದರು. ಆ ಜಾಗಕ್ಕೆ ಬಲವಾದ ಕಬ್ಬಿಣದ ಗ್ರಿಲ್‌ದಿಂದ ಕಾಂಪೌಂಡ್ ಮಾಡಿ, ಒಂದು ಸ್ಮಾರಕವನ್ನು ಅಂದು ಮಡಿದವರ ಸ್ಮರಣಾರ್ಥ ನಿರ್ಮಿಸಿದ್ದಾರೆ. ಅದೇ ಜಾಗದಲ್ಲಿ ಇನ್ನೊಂದು ಬೃಹದಾಕಾರದ ಬಿಲ್ಡಿಂಗ್ ಕಟ್ಟಲು ಪಾಯವನ್ನು ತೋಡಿದ್ದರು. ಅದರ ಮುಂದೆಯೇ ಭೂಗತ ರೇಲ್ವೆಯ ನಿಲ್ದಾಣವಿದೆ. ಕೆಳಗೆ ಹೋಗಿ ಟ್ರೇನ್ ಹಿಡಿದು ಮನೆಯತ್ತ ಸಾಗಿದೆವು.

ಆಪಲ್ ಬಸ್ ಟೂರ್

ಬೆಂಗಳೂರು ಎಂದರೆ ಮೆಜೆಸ್ಟಿಕ್ ಎನ್ನುವಂತೆ, ನ್ಯೂಯಾರ್ಕ್ ಎಂದರೆ ಟೈಂ ಸ್ಕ್ವೇರ್ ಎಂಬ ಭಾವ. ಆಪಲ್ ಕಂಪೆನಿಯವರು ನ್ಯೂಯಾರ್ಕಿನ ಮುಖ್ಯ ಸ್ಥಳಗಳಲ್ಲಿ ಅದೂ ಲೈಟ್ ಹೊತ್ತಿದಾಗ ಎರಡು ಅಂತಸ್ತಿನ ತೆರೆದ ಮೇಲ್ಛಾವಣಿ ಇರುವ ಬಸ್ಸಿನಲ್ಲಿ ಕರೆದೊಯ್ದು ಮುಖ್ಯ ಸ್ಥಳಗಳನ್ನು ವಿವರಿಸುತ್ತಾ ತೋರಿಸುವರು. ನ್ಯೂಯಾರ್ಕ್ ನಗರದಲ್ಲೂ ಒಂದು ಸುತ್ತು ಹಾಕಿದಂತೆ ಆಗುವುದು ಎಂದು ಒಂದು ಟಾಕ್ಸಿ ತೆಗೆದುಕೊಂಡು ಮಂಜುಳಾ ಕರೆದೊಯ್ದರು. ಅವರ ತಾಯಿ ವಸಂತ್ ಅವರೂ ಜೊತೆಗೂಡಿದರು. ನ್ಯೂಯಾರ್ಕ್ ನಗರದ ಮಧ್ಯೆ ಒಂದು ನದಿ ಹರಿದಿದ್ದು ಅದಕ್ಕೆ ಬೃಹತ್ ಸೇತುವೆ ನಿರ್ಮಿಸಿದ್ದಾರೆ. ಬಹುಶಃ ನಾಲ್ಕು ಅಂತಸ್ತುಗಳ ಸೇತುವೆ ಅಂತ ಕಾಣುತ್ತದೆ. ಪಾಶ್ಚಿಮಾತ್ಯರು ಬಲು ಸಾಹಸಿಗಳು; ಎತ್ತರವಾದ ಗಗನ ಚುಂಬಿ ಕಟ್ಟಡ, ಸಮುದ್ರದ ಕೆಳಗೆ ಭೂಮಿಯ ಕೆಳಗೇ ಟ್ರೇನ್ ಹಾದಿ ಹೀಗೆ ಬಗೆಬಗೆಯ ಪ್ರಯೋಗ ಮಾಡುತ್ತಾರೆ. ಬ್ರಿಡ್ಜ್ ಪಕ್ಕ ಒಂದು ಟ್ರಾಲಿ, ನದಿಯ ಮೇಲೆ ಅತ್ತಇತ್ತ ಸಂಚರಿಸುತ್ತಿತ್ತು. ಇದು ಸೆಪ್ಟಂಬರ 11ರ ಅಪಘಾತದ ನಂತರ ಮೇಲ್ ಸೇತುವೆ ಕಾಯಲು ಇಟ್ಟ ಭದ್ರತಾ ಪಡೆಯ ಗಸ್ತು ಎಂದು ಟ್ಯಾಕ್ಸಿಡ್ರೈವರ್ ಹೇಳಿದ. ಆ ಘಟನೆಯ ನಂತರ ಅಮೆರಿಕಾದ ಜನರು ತಮ್ಮ ನೆರಳನ್ನು ಕಂಡರೆ ತಾವೇ ಭಯ ಪಡುವ ಸ್ಥಿತಿಯಲ್ಲಿದ್ದಾರೆ. ಸಂಜೆಯಾಗುತ್ತಲೇ ದೀಪಗಳು ಜಗಜಗಿಸುತ್ತವೆ. ವಿಶ್ವವಾಣಿಜ್ಯ ಅವಳಿಗೋಪುರಗಳೇ ಜಗತ್ತಿನಲ್ಲಿ ಅತ್ಯಂತ ಎತ್ತರದ ಕಟ್ಟಡಗಳಾಗಿದ್ದವು. ಅವು ಉರುಳಿದ ಮೇಲೆ ಎತ್ತರದ ಕಟ್ಟಡ ಎಂಬ ಖ್ಯಾತಿಗೆ ಪಾತ್ರವಾಗಿದೆ ಎಂಪೈರ್ ಸ್ಟೇಟ್ ಕಟ್ಟಡ. ತುಟ್ಟ ತುದಿಯಲ್ಲಿ ಕೋನಾಕಾರ ಮಾಡಿ ಅಲ್ಲಿ ಒಳಗಿನಿಂದ ದೀಪ ಕೊಟ್ಟು ಸುಂದರವಾಗಿ ಮಾಡಿರುತ್ತಾರೆ. ಟೈಂ ಸ್ಕ್ವೇರ್‌ದಲ್ಲಿ ಒಂದು ದೊಡ್ಡ ಗಡಿಯಾರವಿದೆ.

ನ್ಯೂಯಾರ್ಕ್ ನಗರದ ಮೇಲೆ ಹೆಲಿಕಾಪ್ಟರ್‌ಗಳು ಸದಾ ಗಸ್ತು ತಿರುಗುತ್ತವೆ. ಸಮುದ್ರದ ಮೇಲ್ಭಾಗದಲ್ಲಿ ಮದರ್ ಸ್ಟಾಚ್ಯು ಸುತ್ತ ವಿಶೇಷ ಗಸ್ತು ಇರುತ್ತದೆ. ವಿವರಣೆ ಕೊಡುತ್ತ ಮಾರ್ಗದರ್ಶಿ ಕಟ್ಟಡಗಳ ಪರಿಚಯ ಮಾಡುತ್ತಿದ್ದ. ಬಸ್ ಸಾಗುತ್ತಿತ್ತು. ಇದ್ದಕ್ಕಿದ್ದಂತೆಯೇ ''ಸಾರಿ, ಮುಂದೆ ಹೋಗಲು ಆಗದ್ದಕ್ಕೆ ವಿಷಾದಿಸುತ್ತೇವೆ. ಒಂದು ಕಾರು ಅಪಘಾತ ಸಂಭವಿಸಿದೆ'' ಎಂದ. ಅದೆಷ್ಟು ಬೇಗನೆ ಅಲ್ಲಿ ಕಾರ್ಯ ಚಟುವಟಿಕೆ ನಡೆದವು ಎಂದರೆ, ಪೋಲೀಸ್ ಗಾಡಿಗಳು, ಅಂಬುಲೆನ್ಸ್ ಎಲ್ಲ ಧಾವಿಸಿ, ಕಾವಲು ಗಾಡಿಗಳು ಆ ಪ್ರದೇಶವನ್ನು ಸುತ್ತುಗಟ್ಟಿದವು. ರಾತ್ರಿವೇಳೆ ; ಹೆಲಿಕಾಪ್ಟರ್ ಶೀರ್ಷಾಸನ ಹಾಕಿ ತನ್ನ ಮೂತಿಯ ಭಾಗದಲ್ಲಿದ್ದ ಹೆಡ್ ಲೈಟ್‌ನಿಂದ ಕೆಳಗೆ ಬೆಳಕು ಚೆಲ್ಲುತ್ತ ಅಪಘಾತವಾದ ಜಾಗಕ್ಕೆ ಬೆಳಕುಬಿಟ್ಟವು. ಜನರನ್ನು ಹೊರಗೆ ತೆಗೆದು ಅಂಬುಲೆನ್ಸ್‌ದಲ್ಲಿ ಹಾಕಿದರು, ಅಪಘಾತವಾಗಿದ್ದ ವಾಹನಗಳನ್ನು ಸರಿಸಿದರು. ಎಷ್ಟು ಬೇಗನೆ ಇವೆಲ್ಲ ಕಾರ್ಯ ನಡೆದವೆಂದರೆ ಟ್ರಾಫಿಕ್ ಜಾಮ್ ಆಗಿ ನಾವು ನಿಂತ ಕೆಲವೇ ಕ್ಷಣಗಳಲ್ಲಿ ಪೂರೈಸಿದವು. ಅಂದರೆ ಮಾನವ ಜೀವಕ್ಕೆ, ಅವರು ಯಾರೇ ಇರಲಿ, ಎಷ್ಟು ಬೆಲೆ ಕೊಡುತ್ತಾರೆಂಬುದಕ್ಕೆ ಸಾಕ್ಷಿ. ಈ ಘಟನೆ ನಮ್ಮದೇಶದಲ್ಲಿ ಎಂದಾದರೂ ಇದು ಸಾಧ್ಯವೆ ? ಇಲ್ಲಿ ಜೀವಕ್ಕೆ ಅವರ ಲೌಕಿಕ ಅಂತಸ್ತಿನ ಮೇಲೆ ಬೆಲೆ ಅಲ್ಲವೆ ?

ಇನ್ನಷ್ಟು ಕಾಲ ಅಲ್ಲಿದ್ದರೆ ಬೇರೆ ಬೇರೆ ಕಡೆ ಕಾರ್ಯಕ್ರಮವನ್ನು ಏರ್ಪಡಿಸಲು ಅನುಕೂಲ, ಬಹಳ ಜನರು ಕೇಳುತ್ತಿದ್ದಾರೆ ಎಂದು ಮನೋಹರ್ ಆಗ್ರಹಿಸುತ್ತಿದ್ದರು. ಶನಿವಾರ-ಭಾನುವಾರ ಮಾತ್ರ

ಕಾರ್ಯಕ್ರಮ ಸಾಧ್ಯ; ಉಳಿದ ದಿವಸ ಜನರಿಗೆ ಬಿಡುವೇ ಇಲ್ಲದ ಜೀವನ. ಮತ್ತೊಮ್ಮೆ ಬಂದಾಗ ನೋಡೋಣ ಎಂದು ಅಕ್ಟೋಬರ್ 23ರಂದು ಆಸ್ಟಿನ್‌ಗೆ ಮರುಪ್ರಯಾಣ ಗೊತ್ತು ಮಾಡಿದೆವು. ಈ ಪ್ರಯಾಣದಲ್ಲೇ ಕೊಂಚ ತೊಂದರೆಯಾಯಿತು. ನ್ಯೂಯಾರ್ಕಿನಿಂದ ಆಸ್ಟಿನ್‌ಗೆ ನೇರ ಯಾನ ದಿನವೂ ಇರುವುದಿಲ್ಲ. ಮತ್ತು ನೇರ ಪ್ರಯಾಣ ವಿಪರೀತ ತುಟ್ಟಿ. ಕೇವಲ ಪ್ರವಾಸದ ಉದ್ದೇಶದಿಂದ ಹೋದಾಗ ನಾವು ನಿಗದಿತ ಸ್ಥಳಗಳಿಗೆ ಹೋಗುವುದರಿಂದ ಭಾರತದಿಂದಲೇ ಟಿಕೆಟ್ ಖರೀದಿಸಿ ಒಯ್ಯಬಹುದು ನನಗೂ ಹಾಗೆ ತರಲು ಯೋಗೀಶ್ವರಿ ವ್ಯವಸ್ಥೆ ಮಾಡಿದ್ದರು. ಆದರೆ ನಮ್ಮ ಕಾರ್ಯಕ್ರಮಗಳು ಬೇರೆಬೇರೆ ರಾಜ್ಯದ ಊರುಗಳಲ್ಲಿ ಅಲ್ಲಿಯ ವ್ಯವಸ್ಥಾಪಕರ ಅನುಕೂಲತೆಗೆ ಅನುಸಾರವಾಗಿ ಏರ್ಪಾಡಾಗುವುದರಿಂದ ಟಿಕೆಟ್ ಭಾರತದಿಂದಲೇ ಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಜೊತೆಗೆ ಅದರ ನೇಮವೇನೆಂದರೆ ದಿನಾಂಕ, ಸಮಯ, ಫ್ಲೈಟ್ ಬದಲಾಗುವಂತಿಲ್ಲ. ಬದಲಾದರೆ 100 ಡಾಲರ್ ದಂಡ. ಅಂದಾಗ ಕರಾರುವಾಕ್ಕಾಗಿ ಹೇಗೆ ಟಿಕೆಟ್ ತೆಗೆದುಕೊಳ್ಳಲು ಬರುವುದು ?

ನ್ಯೂಯಾರ್ಕ್‌ದಲ್ಲಿ ಆಗಲೇ ಶೀತಗಾಳಿ ಬೀಸಲು ಆರಂಭವಾಗಿತ್ತು. ಬೆಳಿಗ್ಗೆ 9-30ಕ್ಕೆ ಫ್ಲೈಟ್. ವಿಮಾನ ಹಾರಲೇ ಇಲ್ಲ, ಇನ್ನೂ ತೆವಳುತ್ತಲೇ ಇದೆ. ''ಹವಾಮಾನದ ಅನಾನುಕೂಲತೆ ಇದೆ. ಕ್ಷಮಿಸಿರಿ'' ಎಂದು ಚಾಲಕರ ಕೋರಿಕೆ. ಏಕೆ ಹೀಗೆ ಎಂದು ಕಿಟಕಿಯಲ್ಲಿ ಇಣುಕಿದರೆ ಒಂದರ ಹಿಂದೆ ಒಂದು ವಿಮಾನಗಳು ಹಾರುವ ಸಲುವಾಗಿ ಸಾಲುಗಟ್ಟಿ ನಿಂತು ಬಿಟ್ಟಿವೆ. ಟ್ರಾಫಿಕ್ ಜಾಮ್ ಆದಾಗ ಕಾರುಗಳು ನಿಲ್ಲುವಂತೆ ವಿಮಾನಗಳು ನಿಂತಿವೆ. ಆದರಲ್ಲೂ ನ್ಯೂಯಾರ್ಕ್‌ನವು ಅತಿ ದೊಡ್ಡ ರಾಷ್ಟ್ರೀಯ, ಅಂತರರಾಷ್ಟ್ರೀಯ ನಿಲ್ದಾಣಗಳು. ಮೂರು ನಿಲ್ದಾಣಗಳು ಇದ್ದರೂ ಸಾಲದಂತೆ. ಇನ್ನೊಂದು ಸಂಗತಿ ಏನೆಂದರೆ ಅವು ಮೇಲೆ ಹಾರಿ ವೇಗ ಗಳಿಸಿಕೊಂಡು ಕೊಂಚದೂರ ಹೋಗುವವರೆಗೆ ಇನ್ನೊಂದು ಕಾಯಬೇಕು. ಆದರೆ ಆಕಾಶ ಮಾರ್ಗಗಳಲ್ಲಿ ಜಾಗ ಸಾಲದು ಎಂದು ಹೇಳಿದರು. ಅಷ್ಟು ವಿಮಾನಗಳ ಸಂಖ್ಯೆ ಹೆಚ್ಚಾಗಿದೆ. ಸುಮಾರು ಎರಡು ಗಂಟೆ ಕಾಲ ನಿಂತ ವಿಮಾನದಲ್ಲೇ ಕುಳಿತಿದ್ದು ನಂತರ ಹೊರಟು ಸೇಂಟ್ ಲೂಯಿಸ್ ವಿಮಾನ ನಿಲ್ದಾಣಕ್ಕೆ ಬಂದಾಯಿತು. ಮುಂದಿನ ವಿಮಾನ ಸಿಗುತ್ತೋ ಇಲ್ಲವೋ ಎಂದು ಚಟಪಟಿಸಿದೆನಾದರೂ ಮಧ್ಯೆ ಸಮಯ ಬಹಳ ಇದ್ದುದರಿಂದ ಕೇವಲ ಕೆಲವೇ ನಿಮಿಷ ಇರುವಾಗ ಅಂತೂ ಹೋಗಿ ತಲ್ಪಿದೆವು. ಆ ವಿಮಾನವು ಹೊರಡುವಲ್ಲಿ ಸಹ ತೊಂದರೆಯೇ. ಚಾಲಕ ಎಷ್ಟೇ ಪ್ರಯತ್ನಿಸಿದರೂ ಸ್ಟಾರ್ಟ್ ಆಗಲೇ ಇಲ್ಲ. ರಿಪೇರಿಗೆ ಪ್ರಯತ್ನಿಸಿದರು; ಆಗಲಿಲ್ಲ. ಸಾಮಾನು ವಿಮಾನದಲ್ಲೇ ಇರಲಿ. ಕೈಯಲ್ಲಿನ ಸಾಮಾನು ತೆಗೆದುಕೊಂಡು ನಿರೀಕ್ಷಣ ಲಾಂಜ್‌ಗೆ ಹೋಗಲು ಸೂಚಿಸಿದರು. ಹೋಗಿ ಕುಳಿತುದಾಯಿತು. ಮುಂದೆ ಡಲ್ಲಾಸ್‌ಗೆ ಹೋಗಿ ಅಲ್ಲಿಂದ ಆಸ್ಟಿನ್‌ಗೆ ವಿಮಾನ ಹಿಡಿಯಬೇಕಾಗಿತ್ತು. ತಡವಾದಷ್ಟೂ ಚಟಪಟಿಕೆ ಹೆಚ್ಚಾಗುತ್ತಿತ್ತು. ಬಹಳ ಸಮಯದ ನಂತರ ಆ ವಿಮಾನ ರಿಪೇರಿಯಾಗಲಿಲ್ಲವಾಗಿಯೂ ಇನ್ನೊಂದು ವಿಮಾನ ಸಿದ್ಧವಾಗಿರುವುದಾಗಿಯೂ ಆ ಗೇಟ್‌ಗೆ ಹೋಗಿ ನಿಲ್ಲಬೇಕೆಂದು ಹೇಳಿದರು. ಹೋಗಿ ಕುಳಿತೆವು. ವಿಮಾನ ಹಾರಿತು; ಆದರೆ ಡಲ್ಲಾಸ್‌ಗೆ ಬರುವ ವೇಳೆಗೆ ರಾತ್ರಿ ಒಂಭತ್ತೂವರೆ ದಾಟಿತು. ನಮ್ಮ ವಿಮಾನವು ಒಂಭತ್ತು ಗಂಟೆಗೆ ಹೋಗಿತ್ತು. ನನಗೆ ಏನು ಮಾಡಬೇಕು ತೋಚುತ್ತಿಲ್ಲ. ಎಲ್ಲ ಪ್ರಯಾಣಿಕರೂ ಬೇರೆಬೇರೆ ಕಡೆ ತಾವು ಹೋಗಬೇಕಾದ ವಿಮಾನಗಳನ್ನು ಕಳೆದುಕೊಂಡು ಚಟಪಟಿಸುತ್ತ

ಅವರವರ ಚಿಂತೆಯಲ್ಲಿ ಅವರವರು ಇದ್ದಾರೆ. ನಾನು ಹೋಗಬೇಕಾದುದು ಬೇರೆ ಏರ್‌ಲೈನ್ಸ್ ಬಂದುದು ಬೇರೆಯದು. ಬಂದ ಏರ್‌ಲೈನ್ಸ್ ಅವರಲ್ಲಿ ಏನು ಮಾಡಬೇಕು ಎಂದು ವಿಚಾರಿಸಿದರೆ ನಮಗೇನೂ ಗೊತ್ತಿಲ್ಲ ಎನ್ನುತ್ತಾರೆ. ಒಂದು ವೇಳೆ ಬೆಳಿಗ್ಗೆ ಪ್ರಯಾಣಿಸುವುದಾದರೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ಎಂದರೆ ಡೊಮೆಸ್ಟಿಕ್ ಪ್ರಯಾಣದಲ್ಲಿ ಆ ಅನುಕೂಲತೆ ಇಲ್ಲ; ನಿರೀಕ್ಷಣಾ ಲಾಂಜ್‌ದಲ್ಲೇ ಇರಬೇಕು ಎಂದರು. ಅಷ್ಟರಲ್ಲಿ ಯಾರೋ ಓರ್ವ ಮಹಿಳೆ ಎರಡು ಸಣ್ಣ ಮಕ್ಕಳ ತಾಯಿ, ನನ್ನಂತೆಯೇ ಚಿಂತಿಸುತ್ತಿದ್ದವಳಿಗೆ ಓರ್ವ ಅಮೆರಿಕನ್ ಬಂದು ಹತ್ತು ಗಂಟೆಗೆ ಒಂದು ಫ್ಲೈಟ್ ಇದೆ ಎಂದವನೇ ತಾನು ವಿಮಾನದ ಆ ಗೇಟ್ ಕಡೆಗೆ ಓಡಿಬಿಟ್ಟ. ಏರ್‌ಲೈನ್ಸ್ ಖಾಸಗಿ ಸಂಸ್ಥೆಯವು ಆದ ಕಾರಣ ಅವರ ಗೇಟ್‌ಗಳು ದೂರದೂರ ಇರುತ್ತವೆ. ಮಕ್ಕಳನ್ನು ಎಳೆದುಕೊಂಡು ಆಕೆಯೂ ಓಡಿದಳು.

ನನಗೆ ಇದ್ದ ಚಿಂತೆ ಎಂದರೆ ನಾನು ವಿಮಾನವನ್ನು ನ್ಯೂಯಾರ್ಕ್‌ಲ್ಲಿ ಹತ್ತಿದ್ದಾಗ ಲಗೇಜ್ ಕಾರ್ಡ್ ಕೊಟ್ಟು ವಿಮಾನಗಳ ವಿವರ ಬರೆದು ಡೆಸ್ಟಿನೇಷನ್ (ಆಸ್ಟಿನ್) ಕಾಣಿಸಿರುತ್ತಾರೆ. ಈಗ ವಿಮಾನ ಬದಲಾಯಿತು. ಲಗೇಜ್ ಸೆಕ್ಷನ್‌ದಲ್ಲಿ ಕೊಟ್ಟ ಲಗೇಜ್ ಎರಡು ನಮ್ಮ ಸೇರುವುದೆಂತು. ಉಡುವ ಬಟ್ಟೆ ಎಲ್ಲ ಅದರಲ್ಲಿದ್ದವು. ಒಮ್ಮೆ ನಾನು ಓದಿದ್ದೆ ಡೆಲ್ಲಿ ಮುಖ್ಯಮಂತ್ರಿ ಶೀಲಾದೀಕ್ಷಿತ್ ಹೋದಾಗ ಸೂಟ್ ಕೇಸ್ ಕಳೆದುಹೋಗಿ ವಿದೇಶದಲ್ಲಿ ಸ್ನಾನದ ಬಟ್ಟೆ ಸಹ ಇಲ್ಲದಂತಾಯಿತು. ಮರು ದಿನ ಅದು ಸಿಕ್ಕಿತು ಎಂದು. ವಿಮಾನದಲ್ಲಿ ಹೋಗಲು ಸ್ಟಾಂಡರ್ಡ್ ಸೈಜ್ ಎಂದು ಮಾಡಿರುವ ಸೂಟ್‌ಕೇಸ್‌ಗಳು ಒಂದೇ ಆಕಾರ ಒಂದೇ ಬಣ್ಣದವು ಇರುತ್ತವೆ. ಹೀಗಾಗಿ ಲಗೇಜ್ ಚಕ್ರದ ಮೇಲಿಂದ ಎತ್ತಿಕೊಳ್ಳುವಾಗ ಅದಲು ಬದಲಾಗಿ ಬಹಳ ಗೊಂದಲವಾಗುತ್ತದೆ. ಆ ಜನ ಕೇಳಿದರೆ, ''ಆಸ್ಟಿನ್‌ದಲ್ಲಿ ಇಳಿದ ಮೇಲೆ ನಿಮಗೆ ಲಗೇಜ್ ಸಿಗದಿದ್ದರೆ ತಕ್ಷಣ ದೂರುಕೊಡಿರಿ. ಎಲ್ಲಿದ್ದರೂ ಟ್ರೇಸ್ ಮಾಡಿ ನೀವಿದ್ದ ಜಾಗಕ್ಕೆ ತಲ್ಪಿಸುತ್ತಾರೆ. ಕಳೆದರೆ ಪರಿಹಾರ ಕೊಡುತ್ತಾರೆ''. ದೇವರ ಮೇಲೆ ಭಾರಹಾಕಿ ಕೈಯಲ್ಲಿರುವ ಚಿಂತಿಸಬೇಡಿ, ಸಾಮಾನು ತಳ್ಳುವ ಸೂಟ್‌ಕೇಸ್‌ನೊಡನೆ ಹೊರಟರೆ ಅಬ್ಬಬ್ಬಾ ಆ ಗೇಟ್ ಎರಡು ಕಿಲೋಮೀಟರ್‌ಗೂ ಹೆಚ್ಚು ದೂರವಿದೆ. ಹಸಿವಾಗಿದೆ; ತಿನ್ನಲು ಏನೂ ಇಲ್ಲ. ಹಣ್ಣು ಬ್ರೆಡ್ ಕೊಂಡು ತಿನ್ನಲು ಸಮಯವೂ ಇಲ್ಲ. ನಡೆದೂ ನಡೆದು ಸಾಕಾಯಿತು. ಎಲ್ಲಿ ಕೈಕಾಲು ಸೋತು ಬಿಡುತ್ತವೋ ಎಂಬ ಚಿಂತೆ. ಹತ್ತು ಗಂಟೆಯ ಪ್ಲೇನ್ ಹೇಗೆ ಸಿಗಲು ಸಾಧ್ಯ ಎಂಬ ಚಿಂತೆ. ಒಳದಾರಿಯಲ್ಲಿ ಚಿಕ್ಕ ವಾಹನ ಓಡಿಸುತ್ತ ವಯಸ್ಕರನ್ನು ಸಾಗಿಸುವ ವ್ಯವಸ್ಥೆ ಇರುತ್ತದೆ. ನನ್ನ ಕಷ್ಟ ನೋಡಿ ಓರ್ವ ತರುಣಿ ಅಂಥ ಜೀಪ್ ತಂದು ನಿಲ್ಲಿಸಿದಳು ಧನ್ಯವಾದ ಹೇಳಿ, ಕುಳಿತೆ. ಗೇಟ್ ಸಮೀಪ ಬಿಟ್ಟಳು. ಇಳಿದು ವಿಚಾರಿಸಿದರೆ ಹತ್ತುಗ್ಗಂಟೆಯ ವಿಮಾನ ಹೋಗಿಬಿಟ್ಟಿತ್ತು. ದಿಕ್ಕು ತೋಚಲಿಲ್ಲ. ಸ್ವಾಗತಕಾರರಲ್ಲಿ ವಿಚಾರಿಸಿದಾಗ ಆಸ್ಟಿನ್‌ಗೆ ಹನ್ನೊಂದು ಗಂಟೆಗೆ ಇನ್ನೊಂದು ವಿಮಾನ ಹೋಗಲಿದೆ, ಕುಳಿತುಕೊಳ್ಳಿ ಎಂದಾಗ ನಿಂತುಹೋದ ಉಸಿರು ಪುನಃ ಬಂದಂತಾಯಿತು. ಮತ್ತೆ ಲಗೇಜ್ ಚಿಂತೆ. ''ಪ್ರಯಾಣಿಕರ ಪಟ್ಟಿನೋಡಿ ಲಗೇಜ್ ಹಾಕಿರುತ್ತಾರೆ. ಒಂದು ವೇಳೆ ಈ ವಿಮಾನದಲ್ಲಿ ಬರದಿದ್ದರೆ ಹಿಂದಿನ ವಿಮಾನದಲ್ಲಿ ಹೋಗಿ ಅಲ್ಲಿ ಇರುತ್ತವೆ. ಚಿಂತಿಸಬೇಡಿ'' ಎಂದು ಒಬ್ಬಾಕೆ ಬಂದು ತಿಳಿಸಿ ಹೇಳಿದಳು. ಮುಂದಿನ ಚಿಂತೆ, ''ಯೋಗೀಶ್ವರಿ ನಮ್ಮ ನಿಗದಿತ ಸಮಯಕ್ಕೆ ಬಂದು ಹೋಗಿರುತ್ತಾರೆ. ಏನು ಮಾಡುವುದು ? ಅಲ್ಲಿ ಹೋಗಿ ಫೋನ್ ಮಾಡಬೇಕು. ಆಗ ಹೊರಟು ಬಂದು ಕರೆದೊಯ್ಯಲು ಎಷ್ಟು

ಸಮಯವಾಗುತ್ತದೆಯೊ ! ಅಂತೂ ರಾತ್ರಿ ಎಲ್ಲ ಜಾಗರಣೆ'' ಎಂದುಕೊಂಡೆ.

ಡಯಾಬಿಟೀಸ್‌ದವರಿಗೆ ರಕ್ತದಲ್ಲಿ ಸಕ್ಕರೆ ಜಾಸ್ತಿಯಾದರೆ (ಹೈಪರ್ ಗ್ಲೇಸೀಮಿಯ) ಒಂದು ಸಮಸ್ಯೆ, ಅತೀವ ಸುಸ್ತು. ಕಡಿಮೆ ಆಗಿಬಿಟ್ಟರೆ (ಹೈಪೋಗ್ಲೇಸೀಮಿಯಾ) ಅಪಾಯ. ಮೈಯಲ್ಲೆಲ್ಲ ಬೆವರಿನ ಪ್ರವಾಹ, ತಲೆ ಎಲ್ಲ ಬಿಸಿಬಿಸಿ, ಕುಸಿದು ಬಿದ್ದು ಬಿಡುತ್ತಾರೆ; ಎಚ್ಚರ ತಪ್ಪಲೂ ಬಹುದು. ಬೆಳಗಾಂದಲ್ಲಿ ಪೂಜ್ಯ ಅಪ್ಪಾಜಿಯವರ ಪ್ರವಚನ ನಡೆದಿತ್ತು. ಅಂದು ಶ್ರೀಮತಿ ಕಮಲಾದೇವಿ, ಶಂಕರಾನಂದ ಅವರು ಕೇಂದ್ರ ಮಂತ್ರಿ ಶ್ರೀ ಶಂಕರಾನಂದರ ಪತ್ನಿ ಮುಖ್ಯ ಅತಿಥಿಯಾಗಿ ಬಂದಿದ್ದರು. ಮೈಕ್ ಮುಂದೆ ನಿಂತು ಭಾಷಣ ಮಾಡುತ್ತಿದ್ದವರು ಒಮ್ಮೆಲೇ ಕುಸಿದು ಕುರ್ಚಿ ಮೇಲೆ ಕುಳಿತರು. ವೇದಿಕೆ ಮೇಲಿದ್ದ ನಮಗೆ ಮತ್ತು ಸಭಿಕರಿಗೆ ಗಾಬರಿಯಾಯಿತು. ಅಷ್ಟರಲ್ಲಿ ಸಭೆಯಲ್ಲಿದ್ದ ಅವರನ್ನು ನೋಡಿಕೊಳ್ಳುವ ವೈದ್ಯರು ಓಡುತ್ತ ಬಂದು ಸಕ್ಕರೆ, ಗ್ಲೂಕೋಸ್ ಇದ್ದರೆ ಕೊಡಿ ಎಂದರು. ನಮ್ಮ ಬಳಿ ಏನೂ ಇರಲಿಲ್ಲ. ಪೂಜ್ಯ ಗುರುಗಳಿಗೆ ಆ ಹೊತ್ತಿಗಾಗಲೇ ಮಧುಮೇಹ ಬಂದಿದ್ದರೂ ಈ ಹೈಪೋಗ್ಲೇಸಿಮಿಯಾದ ಗಂಭೀರ ಪರಿಣಾಮ ಮನವರಿಕೆಯಾಗಿರಲಿಲ್ಲ; ನನಗೆ ಇನ್ನೂ ಆ ಕಾಯಿಲೆ ಶುರುವಾಗಿರಲಿಲ್ಲ. ಹೈಸ್ಕೂಲ್ ಸಮೀಪ ಓರ್ವ ಜವಾನನ ಮನೆ ಇತ್ತು. ಸಕ್ಕರೆ ಪಡೆದು ನೀರಲ್ಲಿ ಕರಗಿಸಿ ಬಾಯಿಯಲ್ಲಿ ಹಾಕಿದರು. ನಿಧಾನವಾಗಿ ಪ್ರಜ್ಞೆ ಬಂದಿತು. ಆ ಘಟನೆ ನಮ್ಮೆಲ್ಲರಿಗೂ ಪಾಠ ಕಲಿಸಿತು. ಮಧುಮೇಹ ರೋಗ ಉಳ್ಳವರು ಸದಾ ಜೊತೆಗೆ ಸಕ್ಕರೆ, ಗ್ಲೂಕೋಸ್, ಪೆಪ್ಪರಮಿಂಟ್ ಮುಂತಾದ ಪದಾರ್ಥ ಇಟ್ಟುಕೊಂಡಿರಬೇಕು. ಜೇಬಲ್ಲಿ, ಪರ್ಸ್‌ನಲ್ಲಿ ಒಂದು ಸೂಚನೆ ಬರೆದು ಇಟ್ಟುಕೊಂಡಿರಬೇಕು. ತಾವು ಸಕ್ಕರೆ ಕಾಯಿಲೆ ಇರುವವರೆಂದು; ಹಾಗೇನಾದರೂ ಎಚ್ಚರ ತಪ್ಪಿ ಬಿದ್ದರೆ ಗ್ಲೂಕೋಸನ್ನು ಬಾಯಿಯಲ್ಲಿ ಹಾಕಬೇಕು'' ಎಂದು ತಿಳಿಸಿರಬೇಕು. ಮತ್ತೊಂದು ಇಂಥದೇ ಅನುಭವ. ಹೈದರಾಬಾದಿನಲ್ಲಿ ಅಖಿಲಭಾರತ ದ್ವಿತೀಯ ಬಸವ ಧರ್ಮ ಸಮ್ಮೇಳನ 1994ರಲ್ಲಿ ಜರುಗಿತು. ಅದನ್ನು ಮುಗಿಸಿಕೊಂಡು ಕೆಲವರು ಶ್ರೀಶೈಲ, ಕದಳಿವನ ನೋಡಲು ಹೋದರು. ಶ್ರೀ ಶೈಲದಿಂದ ಒಂದು ವಿಶಿಷ್ಟ ಸ್ಥಳದ ತನಕ ಬಸ್ಸಿನಲ್ಲಿ ಹೋಗಿ ಮುಂದೆ ಕಾಲ್ನಡಿಗೆಯಲ್ಲಿ ಹೋಗಬೇಕಿತ್ತು. ಹಾಗೆ ಬಸ್ಸಿನಲ್ಲಿ ಹೋಗುವಾಗ ಚಾಲಕನಿಗೆ ಬವಳಿ ಬಂದು ಪ್ರಜ್ಞೆ ತಪ್ಪ ತೊಡಗಿದ. ಪುಣ್ಯಕ್ಕೆ ಆತ ರಸ್ತೆ ಮಗ್ಗುಲಿಗೆ ಬಸ್ ನಿಲ್ಲಿಸಿ ನಿಧಾನವಾಗಿ ಸ್ಟೇರಿಂಗ್‌ಗೆ ಒರಗಿ ಪ್ರಜ್ಞಾಶೂನ್ಯನಾಗಿದ್ದಾನೆ. ಆ ಬಸ್ಸಿನಲ್ಲಿದ್ದ ಓರ್ವ ವೈದ್ಯರು, ''ಯಾರ ಬಳಿಯಾದರೂ ಸಕ್ಕರೆ, ಗ್ಲೂಕೋಸ್ ಇದೆಯೆ?'' ಎಂದು ಕೇಳಿದ್ದಾರೆ. ಕದಳಿ ಬನದ ದುರ್ಗಮ ಹಾದಿಯಲ್ಲಿ ಸಾಗುವಾಗ ಬೇಕಾದೀತೆಂದು ನಮ್ಮ ಓರ್ವ ಶರಣರು ಜೇಬಲ್ಲಿ ಇಟ್ಟುಕೊಂಡಿದ್ದ ಗ್ಲೂಕೋಸ್ ಕೊಟ್ಟರಂತೆ. ಅದನ್ನು ವೈದ್ಯರು ಬಾಯಿಯಲ್ಲಿ ಹಾಕಿದಾಗ ಚಾಲಕನಿಗೆ ಪ್ರಜ್ಞೆ ಮರುಕಳಿಸಿದೆ. ಈ ಅನುಭವವನ್ನೂ ನಮ್ಮ ಶರಣರು ಬರೆದು ಹೇಳಿದ್ದರು.

ಒಮ್ಮೆ ಆಸ್ಟಿನ್‌ದಲ್ಲಿ ವಾಕ್ ಮಾಡಲು ಹೋಗಿದ್ದೆವು. ನನ್ನೊಂಡನೆ ರಾಧಿಕಾ ಸಹ ಇದ್ದರು. ದೂರ ಹೋಗಿದ್ದೆವು. ರಕ್ತದಲ್ಲಿನ ಸಕ್ಕರೆ ಅಂಶ ಇಳಿದು, ಮೈಯಲ್ಲೆಲ್ಲ ಬೆವರು ಹರಿಯುತ್ತ, ಕಾಲು ಹೆಜ್ಜೆ ತಪ್ಪ ತೊಡಗಿದವು. ಅವರಿಗೆ ಹೇಳಿದರೆ ಗಾಬರಿಯಾದೀತೇನೋ ಎಂದು ಬಹಳ ಕಷ್ಟಪಟ್ಟು ತಡೆದುಕೊಂಡು ಬೇಗನೆ ಮನೆಯ ಕಡೆಗೆ ಧಾವಿಸಿ ಟೊಮ್ಯಾಟೋ ಜ್ಯೂಸ್ ಕುಡಿದೆನು. ಸುಧಾರಿಸಿಕೊಂಡು ನಂತರ ಏನಾಯಿತೆಂದು ತಿಳಿಸಿದೆನು. ನಾವು ವಾಕ್ ಹೋಗುವ ರಸ್ತೆಯಲ್ಲಿ

ಅಂಗಡಿಯಾಗಲಿ, ಫೋನ್ ಸೌಲಭ್ಯವಾಗಲೀ ಇರಲಿಲ್ಲ. ಮೊದಲೇ ಹೇಳಿದ್ದರೆ ಅವರಿಗೂ ಏನು ಮಾಡಲೂ ತೋಚುತ್ತಿರಲಿಲ್ಲ. ತೀರಾ ಅಸಹನೀಯವಾದರೆ ಮಾತ್ರ ಹೇಳುತ್ತಿದ್ದೆ. ಆಗ ದಾರಿಯಲ್ಲಿ ಹೋಗುವ ವಾಹನದವರ ನೆರವು ಪಡೆಯಬೇಕಾಗುತ್ತಿತ್ತು. ಪುಣ್ಯಕ್ಕೆ ಮನೆಯನ್ನು ತಲುಪುವುದಕ್ಕೆ ಸಾಧ್ಯವಾಯಿತು. ಅಂದಿನಿಂದ ವಾಕ್ ಹೋಗುವಾಗ ಕೈಯಲ್ಲಿ ಪೆಪ್ಪರ್‌ಮೆಂಟ್ ಇಟ್ಟುಕೊಂಡು ಹೋಗುತ್ತಿದ್ದೆ. ಸಕ್ಕರೆ ಕಡಿಮೆಯಾಗುತ್ತಿದ್ದಂತೆಯೇ ಬಾಯಿಯಲ್ಲಿ ಪೆಪ್ಪರ್‌ಮೆಂಟ್ ಹಾಕಿಕೊಳ್ಳುತ್ತಿದ್ದೆ. ಈ ಬಗ್ಗೆ ಬಹಳ ಜನಕ್ಕೆ ತಿಳಿವು ಇಲ್ಲದೆ ತೊಂದರೆಗೆ ಒಳಗಾಗುತ್ತಾರೆ. ರಕ್ತದಲ್ಲಿ ಸಕ್ಕರೆಯ ಅಂಶ ನಿಧಾನವಾಗಿ ಏರಿದರೆ, ಕಡಿಮೆಯಾಗಲು ಹೆಚ್ಚು ಸಮಯ ಹಿಡಿಯದೆ ಒಮ್ಮೆಲೇ ಸುಸ್ತು, ಆಯಾಸ, ಬೆವರು ಹರಿಯುವಿಕೆ ಆರಂಭವಾಗುತ್ತದೆ.

ಈಗ ಸಹ ತ್ರಾಸು ಪ್ರಾರಂಭವಾಗಿತ್ತು. ಮಧುಮೇಹದವರಿಗಾಗಿಯೇ ಕೆಲವು ಬಗೆಯ ಪೆಪ್ಪರಮಿಂಟ್, ಚಾಕಲೇಟ್ ಅಲ್ಲಿ ಲಭ್ಯವಿದ್ದು ಫ್ರೆಸ್ನೋದ ಡಾ|| ನಾಗಭೂಷಣ್ ತಂದುಕೊಟ್ಟಿದ್ದರು. ಅವು ಮುಗಿದ ಮೇಲೆ ಯೋಗೀಶ್ವರಿ ತಂದುಕೊಟ್ಟಿದ್ದರು. ಅವನ್ನೇ ತಿನ್ನುತ್ತ ಸುಧಾರಿಸಿಕೊಂಡೆನು. ವಿಮಾನದಲ್ಲಿ ಹಣ್ಣಿನ ಜ್ಯೂಸ್ ಕೊಟ್ಟರು. ಅದೂ ಸ್ವಲ್ಪ ಕೆಲಸ ಮಾಡಿತು. ಆಸ್ಟಿನ್ ತಲುಪುವುದರಲ್ಲಿ ರಾತ್ರಿ ಹನ್ನೆರಡೂವರೆ. ಯೋಗೀಶ್ವರಿ ಒಮ್ಮೆ ಬಂದು ವಿಚಾರಿಸಿದಾಗ ಆ ವಿಮಾನದಲ್ಲಿ ಅಂದರೆ ಮೊದಲೇ ನಿಗದಿಯಾದುದರಲ್ಲಿ ನಾನು ಬರಲಿಲ್ಲ ಎಂದು ತಿಳಿದು ಮನೆಗೆ ಹೋಗಿ ಬಂದಿದ್ದರು. ಅವರ ಸಹೋದರ ಮಹೇಶರ ಪತ್ನಿ ಶ್ರೀಮತಿ ಆಶಾ ಅವರು ಸಹ ಬೆಂಗಳೂರಿನಿಂದ ಬಂದಿದ್ದು ಅವರ ಪುಟ್ಟ ಮಗಳು ಶರಣ್ಯ ಕುತೂಹಲದಿಂದ ವಿಮಾನ ನಿಲ್ದಾಣಕ್ಕೆ ಬಂದು ಆಗಮನ ತಡವಾಗಿ ನಿದ್ದೆಗೆ ಜಾರಿದ್ದಳು. ಆಕೆಯನ್ನು ತಾಯಿಯೊಡನೆ ಮನೆಗೆ ತಲ್ಪಿಸಿ ಪುನಃ ಬಂದಿದ್ದರು. ಬರುತ್ತಿರುವ ವಿಮಾನವನ್ನು ನಾನು ಹತ್ತಿದ್ದೇನೆ ಎಂಬುದನ್ನು ಖಚಿತಪಡಿಸಿಕೊಂಡಿದ್ದರು. ನನ್ನ ಲಗೇಜ್ ಆಗಲೇ ಹಿಂದಿನ ವಿಮಾನದಲ್ಲಿ ಬಂದಿತ್ತು. ಗುರುತಿಗಾಗಿ ನಾನು ಕಾವಿ ಬಣ್ಣದ ಬಟ್ಟೆಯ ತುಂಡುಗಳನ್ನು ಹಿಡಿಗಳಿಗೆ ಕಟ್ಟಿದ್ದೆ. ಅವುಗಳ ಗುರುತು ಹಿಡಿದಿದ್ದರು. ನನ್ನನ್ನು ಇದಿರ್ಗೊಳ್ಳಲು ಬಂದವರೇ, ''ನಿಮ್ಮ ಲಗೇಜ್ ಬಂದಿವೆ'' ಎಂದಾಗ ಆ ಬಗ್ಗೆ ಇದ್ದ ಆತಂಕವೂ ದೂರವಾಯಿತು. ಮನೆ ತಲುಪಿದಾಗ ರಾತ್ರಿ ಒಂದೂ ಕಾಲು.

ಅವರು ಏಳೂ ರಾಜ್ಯಗಳ ಪ್ರವಾಸ ಏರ್ಪಡಿಸಿದ್ದರಿಂದ ವಿವರಗಳನ್ನು ತಿಳಿಯಲು ಕುತೂಹಲಿತರಾಗಿದ್ದರು. ನನ್ನ ಪ್ರವಾಸ ಕಾಲದಲ್ಲಿ ಮೊದಲೇ ಆತಿಥೇಯರಿಗೆ ಫೋನ್ ಮಾಡಿ ನನಗೆ ಎಂಥ ಆಹಾರ ಸಿದ್ಧಪಡಿಸಬೇಕು ಎಂಬ ವಿವರ ನೀಡಿರುತ್ತಿದ್ದರು. ಪ್ರತಿ ದಿನ ರಾತ್ರಿ ನನಗೆ ಫೋನ್ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದ್ದರು. ''ಏಕೆ ಇಷ್ಟೊಂದು ಟೆನ್‌ಷನ್ ಮಾಡಿಕೊಳ್ಳುತ್ತೀರಿ? ನನ್ನ ಯೋಗಕ್ಷೇಮ ನಾನು ನೋಡಿಕೊಳ್ಳುತ್ತೇನೆ. ಮತ್ತು ಆತಿಥೇಯರು ಸಹ ಹೆಚ್ಚಿನ ಕಾಳಜಿ ವಹಿಸಿರುತ್ತಾರೆ'' ಎಂದು ಹೇಳಿದರೆ, ''ನಿಮ್ಮ ಆರೋಗ್ಯ ನಮಗೆ ಮುಖ್ಯ. ನಿಮ್ಮಂತಹ ಗುರುಗಳು ಸಿಗಲು ನಾವು ಪುಣ್ಯ ಮಾಡಿರಬೇಕು'' ಎನ್ನುತ್ತಿದ್ದರು. ನಾನೂ ಹೇಳಿದೆ, ''ನಿಮ್ಮಂತಹ ಶಿಷ್ಯರು ಸಿಗಲು ಗುರುಗಳು ಸಹ ಪುಣ್ಯ ಮಾಡಿರಬೇಕು'' ಎಂದು.

ಬಹಳಷ್ಟು ವಿಷಯ-ವಚನ ಸಾಹಿತ್ಯ ಕುರಿತು, ತಿಳಿಯಬೇಕು ಎಂಬ ಉತ್ಕಟ ಹಂಬಲ

ಅವರದು. ಆದರೆ ಸಮಯವೂ ಸಿಗುತ್ತಿರಲಿಲ್ಲ, ಅಷ್ಟು ಕೆಲಸದ ಒತ್ತಡ. ಆಫೀಸಿನಿಂದ ಬಂದ ನಂತರವೂ ಮನೆಯಲ್ಲಿ ಕಂಪ್ಯೂಟರ್ ಮೂಲಕ ಆಫೀಸ್ ಕೆಲಸ ಮುಂದುವರಿಸುತ್ತಿದ್ದರು. ರಾತ್ರಿ ಹತ್ತೂವರೆ ಹನ್ನೊಂದರ ತನಕ ಉಭಯತರೂ ಚರ್ಚಿಸುತ್ತಿದ್ದೆವು. ಅವರು ಸಹ ಎರಡೂ ಹೊತ್ತು ಇಷ್ಟಲಿಂಗಾರ್ಚನೆ, ಹೆಚ್ಚಾಗಿ ತ್ರಾಟಕಯೋಗ ಮಾಡುತ್ತ ಅದೇ ಆನಂದದಲ್ಲಿ ನಿದ್ರೆಗೆ ಹೋಗಲು ಇಷ್ಟಪಟ್ಟು ರಾತ್ರಿ ಊಟವನ್ನೇ ಮಾಡುತ್ತಿರಲಿಲ್ಲ. ನಾನು ಊರಿಗೆ ಹೊರಡುವ ದಿನಗಳು ಹತ್ತಿರ ಬರುತ್ತಿದ್ದಂತೆಯೇ ಚಟಪಟಿಸಲು ತೊಡಗಿದರು. ''ನನಗೆ ಇಲ್ಲಿರಲು ಮನಸ್ಸೇ ಇಲ್ಲ'' ಎನ್ನುತ್ತಿದ್ದರು. ''ಇರಲಿ, ನಿಮ್ಮಿಂದ ದೊಡ್ಡ ಕೆಲಸವಾಗುತ್ತದೆ. ನಿಮಗಾಗಿ ಅಲ್ಲವಾದರೂ ಬಸವ ತತ್ತ್ವ ಪ್ರಚಾರದ ದೃಷ್ಟಿಯಿಂದಲಾದರೂ ನೀವಿಲ್ಲಿರಬೇಕು'' ಎಂದು ಸಮಾಧಾನ ಮಾಡುತ್ತಿದ್ದೆ.

.........(ಮುಂದುವರಿಯುವುದು)

ಅಮೆರಿಕಾದಲ್ಲಿ ಕಾನೂನು

– ಮಾತಾಜಿ

Juror Jailed For Absence Without Notice

WASHINGTON (PTI) An Indian origin juror was charged in the District of Columbia with contempt of court for skipping jury duty and briefly sent to jail before being released pending a hearing.

Anu Rangappa was sent to jail July 1 after she pleaded guilty to the contempt charge by Judge Erik P. Christian and agreed to pay a $ 1,000 fine, perform 120 hours of community service and, at Judge Christian's insistence, write a 25-page paper on the importance of jury service. Anu Rangappa, 28, is a consultant and volunteer for Senator John F. Kerry's presidential campaign. She apparently decided that she had to skip the trial because Kerry was due to deliver a speech in Cedar Rapids, Iowa.

India weekly, U.S.A. July 13th, 2003, page 5.

ಭಾರತೀಯ ಸಂಜಾತ ನ್ಯಾಯಾಧೀಶೆ ಅನು ರಂಗಪ್ಪ ಕೊಲಂಬಿಯಾದ ಜಿಲ್ಲಾ ನ್ಯಾಯಾಲಯದಲ್ಲಿ ನ್ಯಾಯಾಲಯ ನಿಂದನೆ ಮೊಕದ್ದಮೆ ಎದುರಿಸಿ, ಶಿಕ್ಷೆಗೆ ಒಳಗಾಗಿದ್ದಾರೆ. ಜುಲೈ 1 ರಂದು ಜೈಲನ್ನು ಸೇರಿದ ಅವರು ಒಂದು ಸಾವಿರ ಡಾಲರ್ ದಂಡವನ್ನು ಕಟ್ಟಬೇಕು, 120 ಗಂಟೆಗಳ ಕಾಲ ಸಮಾಜ ಸೇವೆ ಮಾಡಬೇಕು ಮತ್ತು 25 ಪುಟಗಳ ಲೇಖನ ''ನ್ಯಾಯಾಧೀಶರ ಸೇವೆಯ ಮಹತ್ವ ಕುರಿತು'' ಬರೆಯಬೇಕು.

ಅನು ರಂಗಪ್ಪ ಮಾಡಿದ ತಪ್ಪೇನೆಂದರೆ ಮುನ್ಸೂಚನೆ ನೀಡದೆ ತಮ್ಮ ನ್ಯಾಯಾಧೀಶರ ಕರ್ತವ್ಯಕ್ಕೆ

ಗೈರು ಹಾಜರಿಯಾದುದು. ನ್ಯಾಯಾಧೀಶರಾದ ಎರಿಕ್ .ಪಿ. ಕ್ರಿಶ್ಚಿಯನ್ ಅವರು ತೀರ್ಪು ನೀಡಿದರು. ಅನು ರಂಗಪ್ಪ 29 ವರ್ಷದವರಿದ್ದು ಸೆನೇಟರ್ ಜಾನ್. ಎಫ್. ಕೆರ್ರಿಯವರ ಕಾನೂನು ಸಲಹೆಗಾರರು ಆಗಿದ್ದು ಚುನಾವಣಾ ಪ್ರಚಾರದ ಸ್ವಯಂ ಸೇವಕರೂ ಆಗಿದ್ದರು. ಅಯೋವ ರಾಜ್ಯದ ಸಿಡಾರ್ ರ್‍ಯಾಪಿಡ್ಸ್ ಎಂಬಲ್ಲಿ ಸೆನೇಟರ್ ಕೆರ್ರಿಯವರ ರಾಷ್ಟ್ರಾಧ್ಯಕ್ಷರ ಪರವಾಗಿ ಪ್ರಚಾರ ಭಾಷಣ ಇದ್ದುದರಿಂದ ಅನುರಂಗಪ್ಪ ನ್ಯಾಯಾಧೀಶರ ಕರ್ತವ್ಯಕ್ಕೆ ಹಾಜರಾಗುವುದನ್ನು ತಾವು ತಪ್ಪಿಸಿದ್ದರು.

ಕಾನೂನು ಬಾಹಿರವಾದ ಮಾದಕ ಪೇಯ, ವೇಶ್ಯಾವೃತ್ತಿ ಮತ್ತು ಡ್ರಗ್‌ಗಳನ್ನು ವಿತರಿಸುತ್ತಿದ್ದ ಬಾರ್‌ಗಳಿಗೆ ವಿಚಕ್ಷಕ ದಳದವರು ಬರುವುದರ ಮುನ್ಸೂಚನೆ ನೀಡಲು ಲಂಚ ಪಡೆಯುತ್ತಿದ್ದ ನಾಲ್ಕು ಜನ ಪೋಲೀಸ್ ಅಧಿಕಾರಿಗಳನ್ನು ಬಂಧಿಸಿ, ಜೈಲಿಗೆ ಅಟ್ಟಲಾದ ಸುದ್ದಿ ದಿ. 12-7-2003ರ ಪತ್ರಿಕೆಯಲ್ಲಿ ಬಂದಿತು. ಹಿರಿಯ ಪೋಲೀಸ್ ಅಧಿಕಾರಿಗಳು ಪತ್ರಿಕಾ ಹೇಳಿಕೆ ನೀಡಿ ''ಇದರಿಂದ ನಮಗೆ ಬಹಳ ಮುಜುಗರವಾಗುತ್ತಿದೆ. ವ್ಯವಸ್ಥೆ ಕೆಟ್ಟು ಹೋಗಿದೆ ಎಂದು ಯಾರೂ ಭಾವಿಸಬೇಕಾಗಿಲ್ಲ. ಇದು ಆಕಸ್ಮಿಕವಾಗಿ ನಡೆದ ಘಟನೆ ಖಂಡಿತವಾಗಿಯೂ ಕ್ರಮಕೈಗೊಳ್ಳಲಾಗುವುದು. ಇವರೆಲ್ಲ ಇಲಾಖೆಯಲ್ಲಿ 18-19 ವರ್ಷ ಸೇವೆ ಸಲ್ಲಿಸಿದವರು. ಇದರಲ್ಲಿ ಕೆಲವರಿಗೆ ಜೀವಾವಧಿ ಶಿಕ್ಷೆಯೂ ಆಗಬಹುದು'' ಎಂದು ಸಾರ್ವಜನಿಕರಲ್ಲಿ ಕ್ಷಮೆಯಾಚಿಸಿದರು. ಇದೆಲ್ಲ ನಮ್ಮ ದೇಶದಲ್ಲಿ ನಾವು ಊಹಿಸಲೂ ಆಗದ ಸಂಗತಿ. ಇಂದಿನ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳು ಹೆಬ್ಬಂಡೆಗಳಂತೆ ಜನ ಸಾಮಾನ್ಯರ ಮೇಲೆ ಬಿದ್ದಿವೆ. ಇದರ ಕೆಳಗೆ ಸಿಕ್ಕ ವ್ಯಕ್ತಿಯು ವಿಲಿವಿಲಿ ಒದ್ದಾಡುತ್ತಿದ್ದಾನೆ.

ಒಂದು ಕಡೆ ವಕೀಲರುಗಳ ಗೈರು ಹಾಜರಿ, ಇನ್ನೊಂದು ಕಡೆ ನ್ಯಾಯಾಧೀಶರ ಗೈರು ಹಾಜರಿ; ಹೀಗೆ ಕೇಸುಗಳು ನಡೆಯುವುದೇ ವಿಲಂಬ. ಒಂದು ನಗೆ ಹನಿ ಇದೆ. ಒಬ್ಬ ತರುಣ ವಕೀಲ ತನ್ನ ಕಕ್ಷೀದಾರನ ಕೇಸನ್ನು ಗೆಲ್ಲಿಸಿ ಹೆಮ್ಮೆಯಿಂದ ಬಂದು ತಂದೆಗೆ ಹೇಳಿದ, ''ಅಪ್ಪಾ, ನೀವ್ಯಾರೂ ಬೇಗನೆ ಮುಗಿಸಲಾರದ ಕೇಸನ್ನು ನಾನು ವೃತ್ತಿ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಮುಗಿಸಿದೆ''. ಆಗ ತಂದೆ ಹೇಳಿದ, ''ಮೂರ್ಖಾ, ನಿನಗೆ ಶಿಕ್ಷಣ ಕೊಡಿಸಿದ್ದು ಯಾವ ದುಡ್ಡಿನಿಂದ ಎಂದುಕೊಂಡೆ. ಇದೇ ಕಕ್ಷಿದಾರನ ಹಣದಿಂದ. ಹೀಗೆಲ್ಲ ಬೇಗನೆ ಮುಗಿಸಿದರೆ ಹೇಗೆ ?''

ನಮ್ಮ ಭಕ್ತರಲ್ಲಿ ಒಬ್ಬರು ಮನೆ ಹಿಡಿದರು. ಆರ್ಥಿಕವಾಗಿ ಬಹಳ ಕಷ್ಟದಲ್ಲಿದ್ದವರು. ಹೇಗೋ 40,000 ರೂ. ಸಾಲ ಮಾಡಿ ಹೊಂದಿಸಿ ಡಿಪಾಸಿಟ್ ಕಟ್ಟಿದರು. ತಿಂಗಳಿಗೆ ಎರಡೂವರೆ ಸಾವಿರ ಮನೆ ಬಾಡಿಗೆ. ಹುಡುಗನಿಗೆ ಅನುಭವ ಇರಲಿಲ್ಲ. ಬೆಳಿಗ್ಗೆ ಹೋದರೆ ರಾತ್ರಿ ಕೆಲಸದಿಂದ ಬರುವುದು. ರಾತ್ರಿ 9 ಗಂಟೆಗೆ ಹೋಗಿ ಮನೆ ನೋಡಿದ್ದ; ಹಣ ಕಟ್ಟಿದ್ದ. ನಂತರ ಮನೆಯವರೆಲ್ಲ ಬಂದು ಇರಲಾರಂಭಿಸಿದರೆ ಒಂದು ಕ್ಷಣವೂ ಇರಲಾರದ ವಾತಾವರಣ ; ಮನೆಯಲ್ಲಿ ಗಾಳಿ ಇಲ್ಲ, ಬೆಳಕಿಲ್ಲ, ಚರಂಡಿ ವಾಸನೆ, ಇರುವ ಜಾಗದಲ್ಲಿ ಅಗತ್ಯಕ್ಕಿಂತ ಹೆಚ್ಚು ಮನೆಗಳನ್ನು ಒಬ್ಬ ಶ್ರೀಮಂತ ಶೆಟ್ಟಿ ಕಟ್ಟಿಸಿದ್ದಾನೆ. ನಂತರ ಬಾಡಿಗೆದಾರರಿಗೆ ಸಿಕ್ಕಾಪಟ್ಟೆ ಕಿರುಕುಳ ಆತನಿಂದ, ಆತನ ಮಕ್ಕಳಿಂದ. ಎರಡು ತಿಂಗಳು ಇರುವುದರಲ್ಲಿ ನರಕ ಯಾತನೆಯನ್ನು ಅನುಭವಿಸಿದರು. ನೀರು ಸಹಿತ ಸರಿಯಾಗಿ ಬಿಡುತ್ತಿರಲಿಲ್ಲ. ತನಗೆ ಬೇಕಾದಂತೆ ಏಕಮುಖದ ಒಪ್ಪಂದ ಪತ್ರಕ್ಕೆ ಅನನುಭವಿ ಹುಡುಗನಿಂದ ಬರೆಸಿಕೊಂಡಿದ್ದ. ಅಲ್ಲಿದ್ದು ರೋಗಗ್ರಸ್ತರಾಗಿರುವುದಕ್ಕಿಂತ ಬೇರೆ ಕಡೆ ಹೋಗುವುದು ವಾಸಿ ಎಂದು ಇವರು ಮನೆ ಬಿಟ್ಟರು.

ಆದರೆ ಆ ಪಾಪಿ ಶೆಟ್ಟಿ "3 ವರ್ಷದ ಕರಾರು ಆಗಿದೆ. ಅಷ್ಟು ದಿನ ಇರಲೇ ಬೇಕು" ಎಂದು ಒಂದು ಪೈಸೆ ಸಹ ಕೊಡಲಿಲ್ಲ. ಮಾತ್ರವಲ್ಲ ಬಾಡಿಗೆಗೆ ಯಾವ ರಸೀತಿ ಕೊಡದೆ, ಇರುವಷ್ಟು ದಿವಸಕ್ಕೆ ಪಡೆದಿದ್ದ ಅವನು, ಇವರು ಬಾಡಿಗೆಯನ್ನೇ ಕೊಟ್ಟಿಲ್ಲ ಎಂದು ಇವರ ಮೇಲೆ ಕೇಸ್ ಹಾಕಿದ್ದಾನೆ. ವಕೀಲರು ಒಂದು ದಿನಾಂಕಕ್ಕೆ ಮುದ್ದತ್ ಬಂದಾಗಲೆಲ್ಲಾ ಹಣ ತನ್ನಿ ಎಂದು ಹೇಳುತ್ತಾರೆ. ಮುಗಿಯಿತು. ಅಂಥ ದಿನಾಂಕ ಎಷ್ಟೋ ಬಂದು ಹೋದವು. ಬಡವರ ಬದುಕು ಹೇಗೆ ಸಾಗಬೇಕು. ಆ ಪಾಪಿ ಶೆಟ್ಟಿ ಬಾಡಿಗೆ ಕೊಡುವುದು; ಡಿಪಾಸಿಟ್ ತೆಗೆದುಕೊಳ್ಳುವುದು; ಜನರಿಗೆ ಕಿರುಕುಳ ಕೊಟ್ಟು ಓಡಿಸುವುದು. ಇದನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡು ಅಂಗಡಿಗಳನ್ನು ಇಟ್ಟಿದ್ದಾನೆ. ಇಂಥ ಜನರಲ್ಲಿ ದೇವರ ಭಯ, ಪಾಪ-ಪುಣ್ಯದ ಭಯ ಮತ್ತು ಕಾನೂನಿನ ಭಯ ಎಳ್ಳಷ್ಟೂ ಇಲ್ಲ.

ನಾನು ಪ್ರವಚನ ಆರಂಭಿಸಿದ ಮೊದಮೊದಲು ಒಂದು ಉದಾಹರಣೆ ಹೇಳುತ್ತಿದ್ದೆ. ಒಮ್ಮೆ ಓರ್ವ ಗಣ್ಯ ಭಾರತೀಯ ಜಪಾನ್‌ದಲ್ಲಿ ಟ್ರೇನಿನಲ್ಲಿ ಹೋಗುತ್ತಿದ್ದ. ನಮ್ಮಲ್ಲಿಯಂತೆ ಎಲ್ಲಿ ಬೇಕಾದರೂ ತಿಂಡಿಗಳನ್ನು ಇಲ್ಲೆಲ್ಲ ಇಡರು. ಭಾರತೀಯನಿಗೆ ಹಸಿವಾಯಿತು. ಪ್ಲಾಟ್‌ಫಾರ್ಮ್ ಬಳಿ ತಿಂಡಿ ಮಾರುವವರು ಬರಲಿಲ್ಲ. "ಎಂಥ ದರಿದ್ರ ದೇಶ. ಒಂದು ತಿಂಡಿ ಸಹ ಸಿಗುತ್ತಿಲ್ಲ" ಎಂದು ಗೊಣಗಿದ. ತನ್ನ ತಾಯಿಯ ಜೊತೆ ಪ್ರಯಾಣಿಸುತ್ತಿದ್ದ ಬಾಲಕನೋರ್ವ ತಾಯಿಯಿಂದ ಹಣ ಪಡೆದು ಹೋಗಿ ಸ್ವಲ್ಪ ಹೊತ್ತಿನಲ್ಲೇ ತಿಂಡಿ ಪ್ಯಾಕೆಟ್ ತಂದು ಕೊಟ್ಟಾಗ ಆ ಗಣ್ಯ ಬೆಪ್ಪಾಗಿ ಹಣ ಕೊಡಲು ಹೋದ. ಆಗ ಆ ಬಾಲಕ ಹೇಳಿದ, "ಜಪಾನ್ ದರಿದ್ರ ದೇಶ ಎಂದು ಮತ್ತೊಮ್ಮೆ ಹೇಳಬೇಡಿ. ಅದೇ ನೀವು ಕೊಡಬಹುದಾದ ಹಣ" ಎಂದು ಹಣ ಪಡೆಯಲಿಲ್ಲ. ಬಾಲಕನ ಈ ರಾಷ್ಟ್ರಪ್ರೇಮ ಕುರಿತು ವಿವರಿಸಿ, "ಅದೇ ರೀತಿ ನಾವೂ ಸಹ ನಮ್ಮ ಮಾತೃಭೂಮಿಯ ಬಗ್ಗೆ ಅಗೌರವದ ಮಾತನಾಡಬಾರದು" ಎಂದು ಹೇಳುತ್ತಿದ್ದೆ. ಆದರೆ ನಮ್ಮ ದೇಶ ಸಾಗಿರುವ ಇಳಿಜಾರಿನ ನಡೆ ನೋಡಿದರೆ ನಾವೇ ಈಗ ಹೇಳುವ ಪರಿಸ್ಥಿತಿ ಬರುತ್ತಿದೆಯೆ? ಎಂದು ಆತಂಕವಾಗುತ್ತಿದೆ. ಪರಸ್ಪರ ಹಂಚಿಕೊಂಡು ಉಣ್ಣುವ ವಾತಾವರಣ ಹೋಗಿ ಹರಿದುಕೊಂಡು ತಿನ್ನುವ ಆಸುರೀ ವಾತಾವರಣ ಮೂಡುತ್ತಿದೆಯೇ ಎಂದು ಚಿಂತೆಯುಂಟಾಗುತ್ತಿದೆ.

ನಾಲ್ಕು ಜನ ಪೋಲೀಸ್ ಅಧಿಕಾರಿಗಳು ಲಂಚ ತಿಂದುದನ್ನು ಗಂಭೀರವಾಗಿ ಪರಿಗಣಿಸುವ ಅಮೆರಿಕಾದ ಶಿಸ್ತಿಗೂ, ಲಂಚ ತಿನ್ನುವುದನ್ನೇ ಒಂದು ಮಹತ್ವದ ಸಾಧನೆ ಎಂದು ಭಾವಿಸುವ ಇಂಡಿಯಾದ ನಡತೆಗೂ ಅಜಗಜಾಂತರ ವ್ಯತ್ಯಾಸವಲ್ಲವೆ ? ಓರ್ವ ನ್ಯಾಯಾಧೀಶೆ ಪೂರ್ವಭಾವಿ ಸೂಚನೆಯಿಲ್ಲದೆ ನ್ಯಾಯಾಲಯಕ್ಕೆ ಗೈರುಹಾಜರಾದುದಕ್ಕೆ ಶಿಕ್ಷೆ, ದಂಡ ವಿಧಿಸುವ ಅಮೆರಿಕಾದ ಕಾನೂನಿಗೂ, ರೆಸಾರ್ಟ್‌ಗಳಿಗೆ ನ್ಯಾಯಾಧೀಶರು ಹೋಗಿ ಹೊಲಸು ಕೆಲಸ ಮಾಡಿ, ಅದನ್ನು ಪತ್ರಿಕೆಗಳು ಬರೆದಾಗ ಮುಖ ಭಂಗಿತವಾದ ನ್ಯಾಯಾಂಗ ವ್ಯವಸ್ಥೆಯು ನ್ಯಾಯಾಧೀಶರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳದೆ ಸಂಗತಿಯನ್ನು ಬಹಿರಂಗ ಪಡಿಸಿದ ಪತ್ರಿಕೆಗಳ ಮೇಲೇ ನ್ಯಾಯಾಂಗ ನಿಂದನೆಯ ಕ್ರಮ ತೆಗೆದುಕೊಳ್ಳುವುದಕ್ಕೂ ಆಕಾಶ-ಭೂಮಿಗಳಷ್ಟೆ ಅಂತರವಲ್ಲವೆ ? ಯಾವುದು ಪುಣ್ಯ ಭೂಮಿ ಯಾವುದು ಪಾಪ ಭೂಮಿ ? ಎಂಬ ಸಂದೇಹ ಬರುವುದಲ್ಲವೆ ?

ಹಣದ ಪ್ರಭಾವ, ರಾಜಕೀಯ ಒತ್ತಡ, ಅಣ್ಣ-ತಮ್ಮ ಮಾವ-ಅಳಿಯ, ಭಾವ-ಮೈದುನ

ಎಂಬ ಬಂಧುತ್ವದ ಪ್ರಭಾವ ಈ ಎಲ್ಲ ಅಷ್ಟಪದಿ ಹಿಡಿತಕ್ಕೆ ಸಿಕ್ಕ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರಿಗೆ ಭರವಸೆಯೇ ಉಳಿಯುತ್ತಿಲ್ಲ. ಹೀಗಾಗಿ ಆದುದಾಗಲಿ ಎಂದು ತಲೆಯೊಡ್ಡಿ ನಿಲ್ಲುವುದಷ್ಟೇ ಭಾರತೀಯ ಶ್ರೀ ಸಾಮಾನ್ಯನಿಗೆ ಇರುವ ಅನಿವಾರ್ಯತೆ. ನಾನು ದಿ. 4-11-2003 ರಂದು ಡೆಟ್ರಾಯಿಟ್ (ಮಿಚಿಗನ್ ರಾಜ್ಯ) ದಿಂದ ಹೊರಟೆ. ಬಹುಶಃ 2ನೆಯ ದಿನಾಂಕ ಇರಬೇಕು. ಕ್ಯಾಲಿಫೋರ್ನಿಯಾ ರಾಜ್ಯದ ಅತ್ಯುನ್ನತ ಪೋಲೀಸ್ ಅಧಿಕಾರಿ, ಮಹಾನಿರ್ದೇಶಕರು ಬೇರೊಂದು ರಾಜ್ಯಕ್ಕೆ ಹೊರಟು, ವಿಮಾನ ನಿಲ್ದಾಣಕ್ಕೆ ಬಂದರು. ಕೈಯಲ್ಲಿದ್ದ ಎಲ್ಲ ಬ್ಯಾಗೇಜ್ ತಪಾಸಿಸಿದರು. ಲಗೇಜ್ ಸೆರ್ಕ್ಷ್‌ಗೆ ಕೊಟ್ಟ ಸೂಟ್‌ಕೇಸ್ ಸ್ಕ್ರೀನಿಂಗ್ ಯಂತ್ರದ ಮುಂದೆ ಹಾದು ಹೋಗುವಾಗ ಅದರಲ್ಲಿ ಪಿಸ್ತೂಲ್ ಕಾಣಿಸಿತು. ತಕ್ಷಣ ಆ ಅಧಿಕಾರಿಯನ್ನು ಪ್ರಶ್ನಿಸಿದರು. ಆತ ತನ್ನ ಕರ್ತವ್ಯದ ಮೇಲೆ ಹೊರಟಿದ್ದ ಜೊತೆಗೆ ಕೈಚೀಲದಲ್ಲಿ ಪಿಸ್ತೂಲ್ ಇಡದೆ ಲಗೇಜ್ ವಿಭಾಗಕ್ಕೆ ಕೊಟ್ಟಿದ್ದ. ಅಲ್ಲಿಯ ಕಾನೂನಿನ ಪ್ರಕಾರ ಯಾರೂ ಪಿಸ್ತೂಲ್, ಬಂದೂಕು ವಿಮಾನದಲ್ಲಿ ಒಯ್ಯುವಂತಿಲ್ಲ ಒಂದು ವೇಳೆ ಪೋಲೀಸ್ ಕರ್ತವ್ಯದ ಮೇಲೆ ಹೋಗುವುದಿದ್ದರೆ ಇಳಿದ ಸ್ಥಳದಲ್ಲೇ ಇಲಾಖೆಯಿಂದ ಪಡೆಯಬೇಕು. ತನ್ನದನ್ನು ಒಯ್ಯಬೇಕಾಗಿಯೇ ಇದ್ದರೆ ಅದನ್ನು ಘೋಷಿಸಿ, ಹತ್ತುವ ಸ್ಥಳದಲ್ಲಿ ಒಪ್ಪಿಸಬೇಕು. ಅಲ್ಲಿ ಇಳಿದ ಮೇಲೆ ಮತ್ತೆ ಪಡೆದುಕೊಳ್ಳಬೇಕು. ಗುಂಡು ತುಂಬಿದ ಪಿಸ್ತೂಲನ್ನು ವಿಮಾನದಲ್ಲಿ ಇಡುವಂತೆಯೇ ಇಲ್ಲ.

ಆ ವ್ಯಕ್ತಿಗೆ ತಾನೇ ರಾಜ್ಯದ ಮುಖ್ಯಸ್ಥ ಎಂಬ ಧೋರಣೆ ಇತ್ತೋ ಏನೋ ಪ್ರಮಾದವೆಸಗಿದ್ದ ತಕ್ಷಣವೇ ಬಂಧಿಸಿ ಜೈಲಿಗೆ ಕಳಿಸಿದ್ದೇ ಅಲ್ಲ; ಸಸ್ಪೆಂಡ್ ಮಾಡಲಾಯಿತು. "ಯಾವ ವಿಚಾರಣೆ ಇಲ್ಲದೆ ಈ ತಪ್ಪಿಗೆ ಮೂರು ವರ್ಷ ಶಿಕ್ಷೆ, ವಿಚಾರಣೆಯ ನಂತರ ಶಿಕ್ಷೆಯ ಅವಧಿ ಖಚಿತವಾಗುತ್ತದೆ" ಎಂದು ಇಲಾಖೆಯವರು ಹೇಳಿದರು. ಕಾನೂನು ಅಲ್ಲಿ ಎಷ್ಟು ಬಿಗಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ತಿಳಿದಾಗ ಭಾರತೀಯರಿಗೆ ಆಶ್ಚರ್ಯವೆನಿಸುವುದು ಸಹಜವಲ್ಲವೆ ?

ಬಸವ ಕಲ್ಯಾಣದ ಪುನರುತ್ಥಾನ ಮಾಡಿ ಅಲ್ಲಿ ಬಸವ ತತ್ತ್ವ, ಶರಣ ಸಂಸ್ಕೃತಿಯನ್ನು ಪುನರುಜ್ಜೀವಿಸಬೇಕೆಂದು ಸಂಕಲ್ಪಿಸಿದೆವು. ಬಹಳ ವರ್ಷಗಳಿಂದಲೂ ಕಾಯುತ್ತಿದ್ದ ಬೀದರ್, ಹೈದರಾಬಾದ್, ಗುಲಬರ್ಗಾ ಶರಣರು ಸಹರ್ಷದಿಂದ ಕಾಣಿಕೆ ರೂಪದಲ್ಲಿ, ಸಾಲರೂಪದಲ್ಲಿ ಹಣವನ್ನು ಸಂಗ್ರಹಿಸಿದರು. 3 ಎಕರೆ ಜಮೀನನ್ನು ಶುದ್ಧಕ್ರಯಕ್ಕೆ ಕೊಂಡು ಸಬ್ ರಿಜಿಸ್ಟ್ರಾರ್ ಅವರಲ್ಲಿ ನೋಂದಣಿ ಮಾಡಿಸಿದೆವು. ಯಾವುದೇ ಸಮಸ್ಯೆ ಇಲ್ಲದ ಖರೀದಿ ಅದು. ಖರೀದಿಗೆ ಕೊಟ್ಟ ವ್ಯಕ್ತಿ ಹೆಂಡತಿ, ಹೆಣ್ಣು-ಗಂಡು ಮಕ್ಕಳು, ಅಳಿಯಂದಿರೂ ಎಲ್ಲರಿಂದ ಸಾಕ್ಷಿ ಹಾಕಿಸಿದರು. ಎಲ್ಲರೂ ಜಮೀನು ಕೊಂಡ ಸಂತೋಷದಲ್ಲಿರುವಾಗಲೇ ನುಂಗೇಶ್ವರ ಜಗದ್ಗುರುಗಳ ಹಸ್ತ ಗುಣದ ಪರಿಣಾಮವಾಗಿ ಕೋರ್ಟ್ ನೋಟೀಸ್ ಬಂದಿತು. ತಿಳುವಳಿಕೆಯಿಲ್ಲದ ಅಂಗವಿಕಲ ಸಾಮಾನ್ಯ ವ್ಯಕ್ತಿಯೊಬ್ಬ 20 ರೂ.ದ, ಹಿಂದಿನ ದಿನಾಂಕದ ಛಾಪಾಕಾಗದದ ಮೇಲೆ ಒಂದು ಫೋರ್ಜರಿ ದಾಖಲೆ ಸಿದ್ಧಮಾಡಿದ್ದ. ಆ ಛಾಪಾ ಕಾಗದದ ಮೇಲೆ ಕೊಡುವವರು ತೆಗೆದುಕೊಳ್ಳುವವರು-ಉಭಯತರ ಹೆಸರೂ ಇಲ್ಲ. ಅದರಲ್ಲಿ ಆ ಜಮೀನಿನ ಮಾಲಿಕ ಈ ವ್ಯಕ್ತಿಗೆ ಒಂದು ಸಮಿತಿಯ ಅಧ್ಯಕ್ಷನೆಂದು ಆ ಸಮಿತಿಗೆ ಈ ಜಮೀನನ್ನು ಗಿಫ್ಟ್-ದಾನವಾಗಿ ಕೊಟ್ಟಂತೆ ಬರೆಯಲಾಗಿತ್ತು. ಇದು ಫೋರ್ಜರಿ ದಾಖಲೆ ಎಂದು ಸಹ ಆ ಜಮೀನಿನ ಮಾಜಿ ಮಾಲಿಕ ಪೋಲೀಸ್ ಕಂಪ್ಲೆಂಟ್ ಕೊಟ್ಟರು, ಕೋರ್ಟಿಗೆ ಸಹ ತಿಳಿಸಿದರು. ಆ

ಸಂಸ್ಥೆ ನೋಂದಣಿಯೂ ಆಗಿರಲಿಲ್ಲ. ಅದಕ್ಕೊಂದು ಸಮಿತಿ ಸಹ ಇರಲಿಲ್ಲ. ಮೇಲಾಗಿ ಆ ಮಾಲಿಕ ದಾನ ಕೊಡುವಷ್ಟು ಶ್ರೀಮಂತರೂ ಆಗಿರಲಿಲ್ಲ. ನಿಜವಾಗಿ ಹೇಳಬೇಕೆಂದರೆ ಸಬ್ ರಿಜಿಸ್ಟ್ರಾರರ ಮುಂದೆ ನೋಂದಾಯಿಸಿದ ದಾಖಲೆಯ ಮುಂದೆ ಕೆಲಸಕ್ಕೆ ಬಾರದ 20 ರೂಗಳ ಒಂದು ಫೋರ್ಜರಿ ಕಾಗದ ಅಮೆರಿಕಾದಂತಹ ದೇಶದಲ್ಲಿ ನಿಲ್ಲಲು ಸಹ ಸಾಧ್ಯವೆ? ಆದರೆ ನಮ್ಮ ಪುಣ್ಯಭೂಮಿ ಭಾರತದಲ್ಲಿ ದುಡ್ಡೇ ದೊಡ್ಡಪ್ಪ. ಅದು ಮಾಡದೆ ಇರುವ ಕೆಲಸವೇ ಇಲ್ಲ; ಅಸಾಧ್ಯವನ್ನು ಸಾಧ್ಯ ಮಾಡುವುದು; ಅಭೇದ್ಯವನ್ನು ಭೇದಿಸುವುದು! ಹಣದ ಪ್ರಭಾವ; ಅಂಥ ಖೋಟಾ ದಾಖಲೆ ಸಹ ಎರಡೂವರೆ ವರ್ಷಗಳ ಕಾಲ ನಮಗೆ ಕಿರಿಕಿರಿ ಮಾಡಿತು. ಇಂಥ ನಮ್ಮ ದೇಶದ ಬಗ್ಗೆ ಹೆಮ್ಮೆ ಪಡಬೇಕೋ ನಾಚಿಕೆ ಪಡಬೇಕೊ? ಮರುಕ್ಷಣವೇ ಅನ್ನಿಸುತ್ತೆ; ಪಾಪ! ದೇಶ ಏನು ಮಾಡೀತು ಅದು ನಿರ್ಜೀವ ಭೂಮಿ, ಸಜೀವ ಪರಂಪರೆ ಕೊಟ್ಟಿದೆ ಅಷ್ಟೇ ! ವ್ಯವಸ್ಥೆಯು ಹೊಲಸಾದಾಗ ದೇಶವನ್ನು ಬೈಯ್ದು ಏನು ಪ್ರಯೋಜನ ಎಂದು ನಿಟ್ಟುಸಿರು ಹೊರಗೆ ಬರುತ್ತದೆ ಅಷ್ಟೆ! ★★★

☹ ಸಮಸ್ಯೆ? – ಸಮಾಧಾನ !☺

– ಬಸವ ಶ್ರೀ ಬಾಣೂರು, ಶಿವಮೊಗ್ಗ

? ತಾವು ರಚಿಸಿರುವ ಹೇ ಪರಮಾತ್ಮ ಲೋಕದ ಮಿತ್ರ ಭಕ್ತಿಗೀತೆಯಲ್ಲಿ ಪರಮಾತ್ಮ ಪದಕ್ಕೆ ಬದಲಿಗೆ "ಲಿಂಗದೇವ" ಎಂಬ ಪದ ಬಳಕೆ ಚೆಂದವಲ್ಲವೆ?

★ ಈ ದೇವಸ್ತುತಿಯ ಗೀತೆ ದೇವರನ್ನು ನಂಬುವ ಜಗತ್ತಿನ ಎಲ್ಲ ಧರ್ಮದವರ ಪ್ರಾರ್ಥನಾ ಗೀತೆ ಆಗುವ ಸತ್ವವನ್ನು ಹೊಂದಿದೆ. ಪರಮಾತ್ಮ ಜಾಗದಲ್ಲಿ ಲಿಂಗದೇವ ಇಟ್ಟರೆ ಆಗ ಅದು ಲಿಂಗಾಯತರಿಗೆ ಮಾತ್ರ ಪ್ರಾರ್ಥನಾ ಗೀತೆಯಾಗುತ್ತದೆ. ಲಿಂಗದೇವ ಪದವನ್ನು 3 ನೆಯ ಚರಣದಲ್ಲಿ ಬಳಕೆ ಮಾಡಲಾಗಿದೆ. ಆದರಲ್ಲಿ ಯಾವ ದೇವನನ್ನು ವೇದಾಂತಿಗಳು ಪರಬ್ರಹ್ಮ ಎನ್ನುವರೋ, ಆಗಮಿಕರು ಪರಶಿವ ಎನ್ನುವರೋ, ಅವನೇ ಇಸ್ಲಾಮಿನ ಅಲ್ಲಹ, ಕ್ರೈಸ್ತರ ಯಹೋವ, ಆಂಗ್ಲಭಾಷೆಯ ಗಾಡ್, ಲಿಂಗಾಯತ ಧರ್ಮದ ಲಿಂಗದೇವ ಎಂದು ಸೃಷ್ಟಿಕರ್ತನ ಹಿರಿಮೆ ಎತ್ತಿಹಿಡಿಯಲಾಗಿದೆ.

? "ಜಾತಿವಿಡಿದು ನೆನೆವರೆ" ಎಂಬ ಚನ್ನಬಸವಣ್ಣನವರ ಒಂದು ಗೀತೆಯಲ್ಲಿ (ನೀವು ಶರಣ ಗೀತಾಂಜಲಿ ಕೆಸೆಟ್ ಮಾಡಿಸಿದ್ದೀರಿ. ತುಂಬಾ ಚೆನ್ನಾಗಿದೆ) "ಜಂಗಮ ಪ್ರಸಾದವನು ಬಂಡಿ ಮೇಲೆ ಹೇರಿಕೊಂಡು ಗಂಡುಗಲಿ ಬಾಚಿರಾಜ ಮುಂದೆ ನಡೆಯಲು, ಎಂಜಲೆಂದು ಬೊಗಳಿದವರ ಮಂಡೆ ಮೇಲೆ ತಳಿಯಲು ಕೆಂಡವಾಗಿ ಉರಿದುದನು ಕೇಳಿ ಅರಿಯಿರೆ " ಎಂದು ಹೇಳುತ್ತಾರೆ. ಇದರ ಅರ್ಥವೇನು?

★ ಇದು ಯಾವುದೋ ಪ್ರಸಂಗ ವಿವರಿಸುತ್ತದೆ. ನನಗೂ ಬಾಚಿರಾಜನಿಂದ ನಡೆದ ಈ ಪ್ರಸಂಗದ ವಿವರ ಇನ್ನೂ ಸಿಕ್ಕಿಲ್ಲ. ಬಸವ ಧರ್ಮದಲ್ಲಿ ಗಣ ಪ್ರಸಾದಕ್ಕೆ ಬಹಳ ಗೌರವವಿದೆ. ಮಠದಲ್ಲಿ ದಾಸೋಹದ ಅಡಿಗೆ ಮಾಡಿರುತ್ತಾರೆ. ಶ್ರೀಮಂತರ ಮನೆಯ ಅಡಿಗೆ ಉತ್ತಮವಾಗಿರುತ್ತದೆ ಎಂದುಕೊಳ್ಳೋಣ. ಆದರಷ್ಟು ವೈಭವೋಪೇತವಾಗಿ ದಾಸೋಹದ ಅಡಿಗೆ ಇರುವುದಿಲ್ಲವಾದರೂ ಶರಣ

ಧರ್ಮೀಯರು ದಾಸೋಹದ ಅಡಿಗೆಗೆ ಗೌರವ ಕೊಡುತ್ತಾರೆ. ಮನು ಸ್ಮೃತಿಯಲ್ಲಿ 7 ರೀತಿಯ ಅನ್ನಕ್ಕೆ ನಿಷೇಧವಿದೆ. ಅದರಲ್ಲಿ ಸಮೂಹಾನ್ನವೂ ಒಂದು. ಆದರೆ ಲಿಂಗಾಯತ ಧರ್ಮದಲ್ಲಿ ಗಣಪರ್ವದಲ್ಲಿ ಮಾಡಿದ ಸಾಮೂಹಿಕ ಗಣಪ್ರಸಾದ ನಿಷೇಧಾರ್ಹವಲ್ಲ ಸ್ವೀಕಾರಾರ್ಹ. ಅದನ್ನು ಯಾರೋ ವೈದಿಕರು ಎಂಜಲು ಎಂದು ಜರಿದಾಗ ಬಂಡಿಯಲ್ಲಿ ಗಣದಾಸೋಹಕ್ಕೆ ಪ್ರಸಾದ ಒಯ್ಯುತ್ತಿದ್ದ ಬಾಚಿರಾಜ ಆ ನಿಂದಕರ ತಲೆಯ ಮೇಲೆ ಹಾಕಿದಂತೆ ಕಾಣುತ್ತದೆ. ಅದು ಕೆಂಡವಾಗಿ ತಲೆಯನ್ನು ಸುಟ್ಟಿರಬೇಕು. ಅದನ್ನು ಇಲ್ಲಿ ಚನ್ನಬಸವಣ್ಣನವರು ಉಲ್ಲೇಖಿಸಿದ್ದಂತೆ ಕಾಣುತ್ತದೆ.

– ನಾಗಶೆಟ್ಟಿ ಶೆಟಕಾರ, ಬೀದರ

? ದೇವರ ದಾಸಿಮಯ್ಯನವರು ಮತ್ತು ಜೇಡರ ದಾಸಿಮಯ್ಯನವರು ಬೇರೆಬೇರೆಯೋ ಒಂದೆಯೊ ?

★ ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಬೇರೆ ಬೇರೆ. ದೇವಾಂಗ ಕುಲದಲ್ಲಿ ಹುಟ್ಟಿದ ದೇವರ ದಾಸಿಮಯ್ಯನವರು ರೇಷ್ಮೆ ವಸ್ತ್ರ ನೇಯುತ್ತಿದ್ದರು. ಜೈನ ರಾಜನಾದ ಜಯಸಿಂಹನ ಪತ್ನಿ ಸುಗ್ಗಲೆಗೆ ಶಿವದೀಕ್ಷೆ ನೀಡಿ ಶಿವಭಕ್ತಳನ್ನಾಗಿ ಮಾಡಿ, ಆಸ್ಥಾನದಲ್ಲಿ ನಡೆದ ವಾದದಲ್ಲಿ ಶಿವಪಾರಮ್ಯವನ್ನು ಮೆರೆದರು. ಇವರು ವಚನಗಳನ್ನು ರಚಿಸಲಿಲ್ಲ. ನೂಲಿನ ವಸ್ತ್ರ ನೇಯುವ ಜೇಡರ ಕುಲದಲ್ಲಿ ಹುಟ್ಟಿದ ಜೇಡರ ದಾಸಿಮಯ್ಯ(ದಾಸಯ್ಯ)ನವರು ಮೊದಲು ಶಿವದಾಸರಾಗಿದ್ದರೂ ನಂತರ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದಾರೆ. ಇವರು ಅನುಭವ ಮಂಟಪದ ಸದಸ್ಯರು. ತಮಿಳುನಾಡು ಕರ್ನಾಟಕಗಳಲ್ಲಿ ವಿಷ್ಣು ಪಾರಮ್ಯ ಪ್ರತಿಪಾದಿಸುತ್ತಿದ್ದ ವಿಷ್ಣು ದಾಸರು ಶಿವ ಪಾರಮ್ಯ ಪ್ರತಿಪಾದಿಸುತ್ತಿದ್ದ ಶಿವದಾಸರು ಉಭಯತರೂ ತಮ್ಮ ಹೆಸರಿನ ಜೊತೆಗೆ ದಾಸ, ದಾಸಯ್ಯ ಎಂಬುದನ್ನು ಶಿವದೀಕ್ಷಾ ನಂತರ ಸೇರಿಸಿಕೊಳ್ಳುತ್ತಿದ್ದರು. ವಿಷ್ಣು ದಾಸರಾದ ಪುರಂದರ, ಕನಕ, ವಿಜಯ ದಾಸರು ತಮ್ಮ ಹೆಸರಿನ ಮುಂದೆ ದಾಸ ಎಂಬ ಪದ ಸೇರಿಸಿಕೊಂಡಂತೆ ಶಿವಭಕ್ತರಾದವರೂ ದಾಸ ಸೇರಿಸಿಕೊಳ್ಳುತ್ತಿದ್ದರು. ದೇವರ ದಾಸ, ಜೇಡರ ದಾಸ, ಶಂಕರ ದಾಸ. ಇವರೆಲ್ಲರೂ ಬೇರೆ ಬೇರೆ. ವಿಶ್ವಗುರು ಬಸವಣ್ಣನವರು ಉಭಯತರನ್ನೂ ಅವರವರ ಸಾಧನೆಗೆ ಕೊಂಡಾಡಿದ್ದಾರೆ. 1. ದಾಸಯ್ಯ ಶಿವದಾನವೆರೆಯ ನೋಡಯ್ಯ, 2. ಭಕ್ತಿ ಇಲ್ಲದ ಬಡವ ನಾನಯ್ಯ; ದಾಸಯ್ಯನ ಮನೆಯಲ್ಲಿ ಬೇಡಿದೆ. ಎಂಬ ಎರಡು ವಚನಗಳ ವಾಕ್ಯಗಳು ದಾಸಯ್ಯನವರು ಕಲ್ಯಾಣದಲ್ಲಿ ನೆಲೆಸಿದ್ದರು ಎಂಬುದಕ್ಕೆ ಜ್ವಲಂತ ಸಾಕ್ಷಿಗಳು. ಡೋಹರ ಕಕ್ಕಯ್ಯನವರು ಬಸವಣ್ಣನವರಿಂದಲೇ ದೀಕ್ಷೆ ಪಡೆದ ಹಿರಿಯ ಶರಣರು. ಜೇಡರ ದಾಸಿಮಯ್ಯನವರು ಡೋಹರ ಕಕ್ಕಯ್ಯನವರ ಹೆಸರನ್ನು ತಮ್ಮ ವಚನದಲ್ಲಿ ಪ್ರಸ್ತಾಪಿಸಿದ್ದಾರೆ. ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಕೆಲವು ಹಿರಿಯ ಶರಣರ ಹೆಸರು ಉಲ್ಲೇಖಿಸಿ ನಮಿಸುತ್ತಾಳೆ. ಅದರಲ್ಲಿ ದಾಸಿಮಯ್ಯನವರ ಹೆಸರು ಸಹ ಇದೆ. ಮತ್ತೆ ಇನ್ನೂ ಒಂದು ಮಹತ್ವಪೂರ್ಣ ದಾಖಲೆ ಎಂದರೆ ಜೇಡರ ದಾಸಯ್ಯನವರ ಪತ್ನಿ ಎರಡು ವಚನಗಳನ್ನು ಬರೆದಿದ್ದಾಳೆ:

ಬಸವಣ್ಣನಿಂದ ಗುರುಪ್ರಸಾದಿಯಾದೆನು.
ಚೆನ್ನಬಸವಣ್ಣನಿಂದ ಲಿಂಗಪ್ರಸಾದಿಯಾದೆನು.

ಪ್ರಭುದೇವರಿಂದ ಜಂಗಮಪ್ರಸಾದಿಯಾದೆನು.
ಮರುಳ ಶಂಕರದೇವರಿಂದ ಮಹಾಪ್ರಸಾದಿಯಾದೆನು.
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ
ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯಪ್ರಿಯ ರಾಮನಾಥಾ. (ಸ.ವ.ಸಂ.5 - ಪುಟ 700)

ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುದೇವರಂತಾಗಬೇಕು.
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು.
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥಾ ? (ಸ.ವ.ಸಂ.5 -ಪುಟ 701)

ದೇವಾಂಗ ಸಮಾಜದವರು ದೇವರ ದಾಸಿಮಯ್ಯನವರು, ಜೇಡರ(ಜಾಡರ) ಸಮಾಜದವರು ಜೇಡರ ದಾಸಿಮಯ್ಯನವರನ್ನು ತಮ್ಮ ಕುಲದ ಮಹಾತ್ಮರೆಂದು ಪಾರಂಪರಿಕವಾಗಿ ಗೌರವಿಸುತ್ತ ಬಂದಿದ್ದಾರೆ. ಬಟ್ಟೆ ನೇಯುವವರಲ್ಲಿಯೂ ದೇವಾಂಗ (ರೇಷ್ಮೆ) ನೇಯುವವರು, ನೂಲಿನ ಬಟ್ಟೆನೇಯುವವರು (ಜಾಡರು) ಎಂಬುದು ಹಾಗೆಯೇ ಸಾಗಿಬಂದಿರುವುದು ಉಭಯ ಶರಣರೂ ಬೇರೆಬೇರೆ ಎನ್ನಿಸುವುದು.

- ವಚನ ಸುಧಾ, ಚಿತ್ರದುರ್ಗ

? ಅಪ್ಪಣ್ಣನವರು ಹಡಪದವರು ಎಂದರೆ ಕ್ಷೌರಿಕ ಜಾತಿಯವರಲ್ಲ, ಮಾಚಯ್ಯನವರು ಮಡಿವಾಳ ಜನಾಂಗದವರಲ್ಲ. ಅಪ್ಪಣ್ಣನವರು ಹಡಪ ಅಂದರೆ ಚೀಲ ಇರಿಸಿಕೊಂಡು ಅದರಲ್ಲಿ ತಾಂಬೂಲದ ಸಾಮಗ್ರಿ ಇಟ್ಟುಕೊಳ್ಳುತ್ತಿದ್ದರು, ಮಾಚಯ್ಯನವರು ಜಾತಿಯಿಂದ ಬೇರೆ ಆದರೆ ಶರಣರ ಬಟ್ಟೆ ತೊಳೆಯುತ್ತಿದ್ದುದರಿಂದ ಮಡಿವಾಳ ಎಂಬ ರೂಢಿನಾಮ ಬಂದಿತು ಎಂದು ಕೆಲವರ ಅಭಿಪ್ರಾಯ. ತಮ್ಮದು ?

★ ನಮಗೆ ಶರಣರ ಜನ್ಮಜಾತಿ ಯಾವುದಿದ್ದರೂ ನಗಣ್ಯ. ಆದರೆ ಹಿಂದುಳಿದ ದಲಿತ ಸಮೂಹದಿಂದ ಬಂದವರು ಶರಣರಾದರು, ವಚನ ಸಾಹಿತ್ಯ ಸಂವಿಧಾನದ ಶಿಲ್ಪಿಗಳಾದರು ಎಂಬುದು ನಮಗೆ ಅತೀವ ಹೆಮ್ಮೆಯ ವಿಷಯ. ಆದ್ದರಿಂದ ಅವರ ಮೂಲ ಕುಲ ತಿಳಿದಿರಬೇಕು ಎಂಬುದು ನಮ್ಮ ಆಶಯ. ಬಸವಣ್ಣನವರ ಆಪ್ತ ಕಾರ್ಯದರ್ಶಿಯ ಸ್ಥಾನದಲ್ಲಿದ್ದ ಅಪ್ಪಣ್ಣನವರು ಹಡಪಿಗರಾಗಿದ್ದರು. ಅಂದರೆ ಚೀಲ ಇಟ್ಟುಕೊಂಡು ತಾಂಬೂಲದ ಸಾಮಗ್ರಿ ಇಟ್ಟುಕೊಂಡಿರುತ್ತಿದ್ದರು

ಎಂಬುದು ಸತ್ಯ. ಆದರೆ ಜಾತಿಯಿಂದ ಅವರು ಕ್ಷೌರಿಕರು, ಮಾಚಿದೇವರು ಮಡಿವಾಳರು. 800 ವರ್ಷಗಳ ಅವಧಿಯಲ್ಲಿ ಆಯಾ ಜಾತಿಯವರು ತಮ್ಮ ಕುಲದಲ್ಲಿ ಆಗಿಹೋದ ಮಹಾನುಭಾವರು ಎಂದು ಗೌರವಿಸುತ್ತ ಬಂದಿರುವುದು ಮೂಲಜಾತಿ ನಿರ್ಧರಿಸಲು ನಮಗೆ ದೊಡ್ಡಪುರಾವೆ.

- ಚಂದ್ರಿಕಾ ಶಿವಲಿಂಗಪ್ಪ ಪಾಟೀಲ್, ಧಾರವಾಡ

? ಜ್ಞಾನಿಗಳಾದ ಗುರು-ಜಂಗಮರು ಬಂದಿರುತ್ತಾರೆ. ಅವರು ತಮ್ಮ ಇಷ್ಟಲಿಂಗಾರ್ಚನೆ ಪೂರೈಸಿ ನಮಗೆ ಕರುಣೋದಕ ಕೊಡುತ್ತಾರೆ ಎಂದುಕೊಳ್ಳುವಾ. ಆಗ ನಾವು ಸ್ನಾನ ಮಾಡಿ ಬರುತ್ತೇವೆ. ಇನ್ನೂ ಇಷ್ಟಲಿಂಗಾರ್ಚನೆ ಮಾಡಿರುವುದಿಲ್ಲ. ನೇರವಾಗಿ ಕರುಣೋದಕ ಸ್ವೀಕರಿಸಬಹುದೆ ?

★ ಇಲ್ಲ ಸ್ವೀಕರಿಸಬಾರದು. ಮೊದಲನೆಯ ಬಾರಿಗೆ ಬಾಯಿಯಲ್ಲಿ ಇಷ್ಟಲಿಂಗದ ಮೂಲಕ ಬರುವ ಲಿಂಗಕರುಣೋದಕವೇ ಬೀಳಬೇಕು. ನಂತರ ಗುರು/ಜಂಗಮರ ಕರುಣೋದಕವನ್ನು ಇಷ್ಟಲಿಂಗದ ಮೇಲೆ ಎರೆದಾಗಲೀ, ಅವಸರವಿದ್ದರೆ ಹಾಗೆಯೇ ಕೈಯಲ್ಲಿ ಹಾಕಿಸಿಕೊಂಡಾಗಲೀ ಸ್ವೀಕರಿಸಬಹುದು. ಬೆಳಿಗ್ಗೆ ಎದ್ದ ಮೇಲೆ ನಮ್ಮ ನಾಲಿಗೆ ಮೇಲೆ ಇಷ್ಟಲಿಂಗ ತೀರ್ಥವು ಬೀಳಬೇಕು ಎಂಬುದೇ ಲಿಂಗಾರ್ಚನೆಯ ಮರ್ಮ.

- ಡಾ|| ಶಿ.ಬಾ. ಪಾಟೀಲ್, ಸಂಕೇಶ್ವರ

? ಚಿತ್ರದುರ್ಗದ ಮುರುಘರಾಜೇಂದ್ರ ಶರಣರ ಓಟ ಇನ್ನೂ ಎಲ್ಲಿಯವರೆಗೆ ?

★ ಅವರು ಮತ್ತು ಅವರನ್ನು ನಂಬಿ ಅನುಸರಿಸುವವರು ಮೇಲೇಳಲು ಸಾಧ್ಯವಾಗದಂತಹ ತಗ್ಗಿನಲ್ಲಿ ಬೀಳುವವರೆಗೆ ಇರಬಹುದು.

? ಕೂಡಲ ಸಂಗಮದಲ್ಲಿ 2002ರ ಜೂನ್ 1ರಂದು ಗುರು-ವಿರಕ್ತರ ಸಮಾವೇಶ ನಡೆಯಿತು. ಅದು ಏನನ್ನೂ ಸಾಧಿಸಲಿಲ್ಲ. ಅಪವಿತ್ರ ಮೈತ್ರಿ ಮುರಿದೇ ಹೋಯಿತು. ಈ ಬಗ್ಗೆ ತಮ್ಮ ಅಭಿಪ್ರಾಯ.

★ ಇದರ ಫಲಶ್ರುತಿ ಇಷ್ಟೇ ಎಂದು ನಮಗೆಲ್ಲ ಗೊತ್ತಿತ್ತು. ಯಾವುದೇ ತತ್ತ್ವ, ಸಿದ್ಧಾಂತ, ಉದಾತ್ತ ಉದ್ದೇಶ ಇಲ್ಲದೆ ಕೂಡಿದರೆ ಅದು ಒಂದೇ ದಿವಸದ ಗುತ್ತಿಗೆ ಮದುವೆ (Contract marriage)ಯಂತೆ.

? ತಮ್ಮ ಸಮಾಜ ಬಾಂಧವರನ್ನೆಲ್ಲ ಬೇಡ ಜಂಗಮರನ್ನಾಗಿ ಮಾಡುವಂತೆ ಐದೂ ಪೀಠಾಧಿ ೀಶರು ಸರಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ಅಂದ ಮೇಲೆ ಪಂಚಮಸಾಲೆಯವರಾಗಲೀ ಅಥವಾ ಉಳಿದ ಲಿಂಗಾಯತರೇಕೆ ಅವರನ್ನು ಗೌರವಿಸಬೇಕು ? ನಿಮ್ಮ ಅಭಿಪ್ರಾಯ.

★ ಎಲ್ಲ ಪಂಚಮಸಾಲೆಯವರು ನಿಮ್ಮಂತೆ ತತ್ತ್ವ ತಿಳಿದವರಲ್ಲವಲ್ಲ ?! ಹುಟ್ಟಿದ ನೆಲೆಯ ತೃಷ್ಣೆ ಅಂದರೆ ಜಾತಿ ಅಭಿಮಾನ ಬಿಡದವರಿಗೆ ಅನುಭಾವವೆಲ್ಲಿಯದೊ ? ಎನ್ನುತ್ತಾರೆ ಅಲ್ಲಮಪ್ರಭುದೇವರು. ಪಂಚಪೀಠಾಧೀಶರು ಒಂದು ವೇಳೆ ನೀವು ತಿಳಿಸಿದಂತೆ ಬರೀ ಜಾತಿ ಜಂಗಮರ ಬಗ್ಗೆ ಮಾತ್ರ ಹಿತಚಿಂತನೆ ಮಾಡುತ್ತಿದ್ದರೆ ಅವರು ಖಂಡಿತವಾಗಿಯೂ ಇಡೀ ಸಮಾಜಕ್ಕೆ ಮಾನ್ಯರಲ್ಲ! ಇನ್ನು ಕೆಲವರು ಅವರ ಪಲ್ಲಕ್ಕಿ ಉತ್ಸವ ಮಾಡಿಸುವುದು ನಾಲ್ಕು ಕಾಸು ಸಂಪಾದನೆ ಮಾಡಿಕೊಳ್ಳಲಿಕ್ಕೇ ವಿನಾ ಭಕ್ತಿಭಾವದಿಂದಲ್ಲ.

ಸ್ವಂತ ಪ್ರಯತ್ನ, ಪರಸ್ಪರರ ನೆರವು ನೀಡಿಕೆ, ಬುದ್ಧಿವಂತಿಕೆಗಳಿಂದ ಮುಂದುವರೆಯಬೇಕು ಎಂಬ ಛಲ, ಆತ್ಮ ವಿಶ್ವಾಸ ತುಂಬದೆ ಒಂದು ಕಡೆ ತಾವು ಹುಟ್ಟು ಜಂಗಮರು, ಶ್ರೇಷ್ಠರು ಎಂಬ ಮೇಲರಿಮೆಯಿಂದ ವರ್ತಿಸಿ ಇತರ ಲಿಂಗಾಯತರನ್ನು ಲಿಂಗಾಯತೇತರರನ್ನು ಕೀಳಾಗಿ ಕಾಣುವುದು, ಇನ್ನೊಂದು ಕಡೆ ತಾವು ಬೇಡ ಜಂಗಮರೆಂದು ಪ್ರತ್ಯೇಕಗೊಂಡು ಪರಿಶಿಷ್ಟಜಾತಿಯವರಿಗೆ ವಂಚಿಸಿ ಅವರ ಸವಲತ್ತುಗಳನ್ನು ತಾವು ಪಡೆಯಲೆತ್ನಿಸುವುದು ಲಜ್ಜಾಸ್ಪದ ವರ್ತನೆ ಎಂದೇ ನಮ್ಮ ಅಭಿಪ್ರಾಯ.

– ಸಾವಿತ್ರಿ ದೊಡ್ಡಮನಿ, ಪಿ.ಸಿ.ಬಿ. ಕಾಲನಿ, ರಾಯಚೂರು

? ನಾವು ಬಸವ ಭಕ್ತರು ಗುರುಗಳು ಹೇಳಿರುವಂತೆ ನಾವು ದಿನನಿತ್ಯ ಪೂಜೆ, ಸಂಜೆಯ ಪ್ರಾರ್ಥನೆ ನೆನಹು, ವಾರದ ಪ್ರಾರ್ಥನೆ ಶರಣ ಸಂಗಮ ಮಾಡುತ್ತೇವೆ. ಆದರೆ ದಿನದಿನಕ್ಕೆ ಅನ್ಯಾಯ, ಅತ್ಯಾಚಾರ ಜಾಸ್ತಿಯಾಗುತ್ತಲೇ ಇವೆಯಲ್ಲ, ಇದಕ್ಕೆ ನಿಮ್ಮ ಉತ್ತರವೇನು ?

★ ನೀವಷ್ಟೇ ಮಾಡಿದರೆ ಸಾಲದು, ಇನ್ನೂ ಹೆಚ್ಚಿನ ಜನರನ್ನು ಪರಿವರ್ತಿಸಿ ದೇವರ ಪೂಜೆ, ಪ್ರಾರ್ಥನೆಗಳಲ್ಲಿ ತೊಡಗಿಸಬೇಕು. ಒಳ್ಳೆಯ ಮೌಲ್ಯಗಳೆಲ್ಲ ನಾಶವಾಗಿ ಸಮಾಜವು ದಿನದಿನಕ್ಕೆ ನೈತಿಕ ಅಧಃಪತನ ಹೊಂದುತ್ತಿದೆ. ಇದರಿಂದ ಉತ್ತಮರು ತಾಳ್ಮೆ ಕಳೆದುಕೊಳ್ಳದೆ, ಒಳ್ಳೆಯ ಮೌಲ್ಯಗಳಲ್ಲಿ ನಂಬಿಕೆ ತೊರೆಯದೆ ತಮ್ಮ ಆದರ್ಶವನ್ನು ಮುಂದುವರಿಸಬೇಕು. ಇಲ್ಲದಿದ್ದರೆ ಸಮಾಜ ಇನ್ನಷ್ಟು ಭಯಂಕರವಾಗುವುದು.

–ಕರುಣಾಕರ ಸೀಮಿಕೇರಿ, ಬಿಜಾಪುರ

? ಬಸವ ಪಥ ಎಂಬ ಬಸವ ಸಮಿತಿಯ ಪತ್ರಿಕೆಯಲ್ಲಿ ಶ್ರೀ ಅರವಿಂದ ಜತ್ತಿಯವರು ಲಿಂ|| ಶ್ರೀ ಬಿ.ಡಿ. ಜತ್ತಿಯವರ ಮಾತುಗಳನ್ನು ನೆನಪು ಮಾಡಿಕೊಳ್ಳುತ್ತ ''ತಂದೆಯವರು ಮೊದಲು ಬಸವಣ್ಣನಾಗಲು ಕಲಿಯಿರಿ ಎಂದು ಹೇಳುತ್ತಿದ್ದರು. ಆದರ ಅಂತರಾರ್ಥ ಈಗ ತಿಳಿಯುತ್ತಿದೆ'' ಎಂದು ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

★ ಅಂಥ ಮಾರ್ಗದರ್ಶನ ತಪ್ಪು. ಮೊದಲು ಬಸವಣ್ಣನವರನ್ನು ಅರಿಯಿರಿ, ಅಥವಾ ಬಸವ ಮಾರ್ಗದಲ್ಲಿ ನಡೆಯಲು ಕಲಿಯಿರಿ ಎಂದು ಹೇಳಬಹುದೇ ವಿನಾ ಬಸವಣ್ಣನಾಗಲು ಕಲಿಯಿರಿ ಎಂದು ಯಾವಾಗಲೂ ಹೇಳಬಾರದು ? ದೇವನಾಗುವುದು ಸುಲಭ ಬಸವಣ್ಣನವರಾಗಲು ಸಾಧ್ಯವಿಲ್ಲ, ಆಕಾಶಕ್ಕೆ ಸಮ ಆಕಾಶವೇ ವಿನಾ ಬೇರೊಂದಲ್ಲ. ''ಶಿವನಾಗಲು ಬಹುದು ಬಸವನಾಗಲು ಬಾರದು'', ''ಎನ್ನನ್ನು ಬಸವಣ್ಣನನ್ನಾಗಿ ಹುಟ್ಟಿಸದೆ ಪ್ರಭುವಾಗಿ ಏಕೆ ಹುಟ್ಟಿಸಿದೆ ?'' ಎಂದು ಅಲ್ಲಮಪ್ರಭುವಿನಂತಹ ದಾರ್ಶನಿಕ ದಿಗ್ಗಜವೇ ಹೇಳಿರುವಾಗ ಇನ್ನು ಉಳಿದವರ ಪಾಡೇನು ? ಮಾನವ ಜಗತ್ತಿನಲ್ಲಿ ಸೃಷ್ಟಿಕರ್ತ ಲಿಂಗದೇವನು ಕಟೆದಿರುವ ಅಪರೂಪದ, ಪರಿಪೂರ್ಣ ಶಿಲ್ಪ- ಬಸವಣ್ಣನವರು. ಆದ್ದರಿಂದ ಅವರಿಗೆ ಸರಿ ಸಾಟಿ ಎಂಬಂತೆ ಯಾರನ್ನೂ ಹೋಲಿಸಬಾರದು; ಯಾವ ಸ್ವಾಮಿಗಳು, ಮಠಾಧೀಶರು, ರಾಜಕಾರಣಿಗಳು, ಸುಧಾರಕರನ್ನು ಅಭಿನವ ಬಸವಣ್ಣ ಎನ್ನಬಾರದು. ಯಾರೇ ಆಗಲಿ ಬಸವ ಶರಣರಾಗಬಹುದು; ಬಸವ ಸುತ-ಸುತೆಯರಾಗಬಹುದು ಮಾತ್ರ.

– ಕಾಂತರಾಜ, ತುಮಕೂರು

? ಈ ಕಾಲದಲ್ಲಿ ಒಳ್ಳೆಯತನಕ್ಕೆ ಬೆಲೆ ಇಲ್ಲ. ತಮ್ಮಂತಹವರು ಶಾಂತವಾಗಿರಲು, ಕಾಲಕ್ಕಾಗಿ ಕಾಯಲು ಹೇಳುತ್ತೀರಿ. ಆದರೆ ಸಜ್ಜನರಿಗೆ ತೊಂದರೆ ದುರ್ಜನರಿಗೇ ಸುಖ. ಅಂದಾಗ ದೇವರು ಏನು ಮಾಡುತ್ತಾನೆ ಎಂದು ನಿರಾಶೆಯ ಜೊತೆಗೆ ಆಕ್ರೋಶವು ಉಂಟಾಗುವುದಲ್ಲವೆ?

★ ಒಳ್ಳೆಯತನಕ್ಕೇ ಆತ್ಯಂತಿಕ ಬೆಲೆ ಸಿಗುವುದು. ತಡೆದುಕೊಳ್ಳುವವರಿಗೆ ಕೊಂಚ ಕಾಲ ಕಷ್ಟವಾಗಬಹುದು. ಆದರೆ ಅವರ ಸಹನೆ ಒಳ್ಳೆಯ ಮೌಲ್ಯಗಳ ಬಗ್ಗೆ ಇನ್ನಿತರ ಜನರಲ್ಲಿ ಶ್ರದ್ಧೆಯನ್ನು ವರ್ಧಿಸುತ್ತದೆ. ಮೊದಲನೆಯ ಕಲ್ಯಾಣ ಪರ್ವದ ಸಮಯದಲ್ಲಿ ಭೀಮಣ್ಣ ಖಂಡ್ರೆ, ಡಾ|| ಮಲಕರೆಡ್ಡಿ ಭೀಮಣ್ಣನವರ ಮಗ ಈಶ್ವರ ಖಂಡ್ರೆ ಇವರೆಲ್ಲರು ತೋರಿಸಿದ ಅಟ್ಟಹಾಸ, ದೌರ್ಜನ್ಯ ಎಷ್ಟು, ಎಸ್.ಎಂ.ಕೃಷ್ಣ ಇವರೆಲ್ಲರ ಪ್ರಚೋದನೆಯಿಂದ ಶರಣರ ಮೇಲೆ ಎಂಥಾ ದೌರ್ಜನ್ಯ ಮಾಡಿಸಿದರು ? ಇವರುಗಳ ಹೆಸರು ನವಕಲ್ಯಾಣದ ಕಥೆಯಲ್ಲಿ ವಿಲನ್-ಖಳನಾಯಕರ ಸಾಲಿನಲ್ಲಿ ಕಾಯಂ ಆಯಿತು. ಜೊತೆಗೆ ಚುನಾವಣೆಯಲ್ಲಿ ಎಂಥಾ ದುಃಸ್ಥಿತಿ ಪ್ರಾಪ್ತವಾಯಿತು. ಅಂದಾಗ ದೇವರು ಸುಮ್ಮನಿದ್ದಾನೆ ಎಂದು ನೀವು ದೇವರನ್ನು ಸಂಶಯಿಸುವುದು ಸರಿಯೆ ?

– ಚಂದ್ರಕಾಂತ ಬಿದರಗಡ್ಡಿ, ಹುಬ್ಬಳ್ಳಿ

? ಸೋನಿಯಾಜಿ ಎಂಥಾ ತ್ಯಾಗಮಯಿಯಲ್ಲವೆ ? ಪ್ರಧಾನಿಯ ಪಟ್ಟದ ಹೊಸ್ತಿಲಲ್ಲಿ ನಿಂತಿರುವಾಗ ಇನ್ನು ಒಂದೇ ಹೆಜ್ಜೆ ಹತ್ತಿರವಿರುವಾಗ ಅಂತರಾತ್ಮದ ಕರೆಗೆ ಓಗೊಟ್ಟು ಪ್ರಧಾನಿ ಹುದ್ದೆಯನ್ನು ನಿರಾಕರಿಸಿದ್ದು ಅವರ ತ್ಯಾಗಕ್ಕೆ ಸಾಕ್ಷಿಯೆಂದು ನನ್ನ ಅಭಿಪ್ರಾಯ; ತಮ್ಮದು !

★ ಅದು ಒಲ್ಲೆ, ಇದು ಒಲ್ಲೆ; ಬೆಲ್ಲೊಲ್ಲೆ! ಯಾಕೊಲ್ಲೆ? ಇಲ್ಲದಕ್ಕೊಲ್ಲೆ! ನಿಮ್ಮಂತಹ ಮುಗ್ಧರು ಇರುವಾಗ ಸೋನಿಯಾಜಿಯ ನಿರಾಕರಣೆಯಲ್ಲಿ ತ್ಯಾಗವನ್ನು ಗುರುತಿಸುವುದೇನು ಕಷ್ಟ. ನಿಜಕ್ಕೂ ತ್ಯಾಗಮೂರ್ತಿಯಾಗಿದ್ದರೆ, ಬೆಂಬಲಿಗರ ಪಟ್ಟಿ ಹಿಡಿದು ರಾಷ್ಟ್ರಪತಿಯವರ ಬಳಿಗೆ ಸರ್ಕಾರ ರಚನೆಯ ಉದ್ದೇಶದೊಡನೆ ಹೋಗುತ್ತಲೇ ಇರಲಿಲ್ಲ. ''ನನ್ನ ಉದ್ದೇಶ ಪರಿಶ್ರಮದಿಂದ ಪಾರ್ಟಿಯನ್ನು ಅಧಿಕಾರಕ್ಕೆ ತರುವುದಾಗಿತ್ತು, ತಂದಾಯಿತು; ನಾನು ವಿದೇಶಿ ಮೂಲದ ವ್ಯಕ್ತಿ; ನೀವು ನಾಯಕನನ್ನು ಆಯ್ಕೆ ಮಾಡಿಕೊಳ್ಳಿರಿ'' ಎನ್ನಬಹುದಿತ್ತು; ಇಲ್ಲವೇ ಮನಮೋಹನ ಸಿಂಗ್ ಅವರನ್ನೇ ಪ್ರಧಾನಿಯನ್ನಾಗಿ ಸೂಚಿಸಬಹುದಿತ್ತು. ಪ್ರಧಾನಿ ಆಗೇ ಬಿಟ್ಟೆ ಎನ್ನುವ ಹುಮ್ಮಸ್ಸಿನೊಡನೆ ರಾಷ್ಟ್ರಪತಿ ಬಳಿ ಹೋಗಿದ್ದಾರೆ. ಯಾವುದೋ ಅತಿ ಮುಖ್ಯ ತಾಂತ್ರಿಕ ತೊಡಕು ಉಂಟಾಗಿದೆ. ಬೇರೆ ದಾರಿ ಇಲ್ಲದೆ ಅಂತರಾತ್ಮದ ಮೊರೆಹೊಕ್ಕಿದ್ದಾರೆ. ಪ್ರಧಾನಿಯಾದರೆ ಜೀವಭಯ ಎಂಬ ಮಕ್ಕಳ ಕರುಳಕರೆಗೆ ಓಗೊಟ್ಟು ಬಿಟ್ಟಿದ್ದರೆ, ಆಗ ಮಕ್ಕಳು ಖುಷಿಯಿಂದ ಇರುತ್ತಿದ್ದರು. ತಾಯಿಯ ಪ್ರಧಾನಿ ಪಟ್ಟದ ಅವಕಾಶ ವಂಚನೆ ತಿಳಿಯುತ್ತಲೇ ಮಗ, ಮಗಳು, ಅಳಿಯ ಅವರ ಮುಖದ ಮೇಲೆ ಉಂಟಾದ ದುಃಖದ ಛಾಯೆಯೇ ಸೋನಿಯಾ ಅನಿವಾರ್ಯವಾಗಿ ಪ್ರಧಾನಿಪಟ್ಟವನ್ನು ಬಿಡಬೇಕಾಯಿತು ಎಂಬುದಕ್ಕೆ ಸಾಕ್ಷಿನುಡಿಯುತ್ತದೆ.

★★★

ಡಾ|| ಚಿದಾನಂದ ಮೂರ್ತಿ ಅರಿತಂತೆ ಪ್ರಸಾದ ತತ್ತ್ವ ?

- ಮಾತಾಜಿ

"ಶಿವಭಕ್ತರು (ಶಿವಗಣ) ಊಟ ಮಾಡಿ ತಟ್ಟೆಯಲ್ಲಿ ಉಳಿಸಿದ ಆಹಾರಭಾಗವನ್ನು (ಅದೇ ಶಿವಪ್ರಸಾದ) ಶ್ರದ್ಧೆಯಿಂದ ಸಂಗ್ರಹಿಸಿ ತಂದು ಅದನ್ನು ಭಕ್ತಿಯಿಂದ ಪೂಜಿಸಿ ಸಂತೋಷದಿಂದ ಅದನ್ನು ಸ್ವೀಕರಿಸುವವನೇ ಶಿವಗಣ ಪ್ರಸಾದಿ. ಶಿವಗಣಗಳ ಪ್ರಸಾದವನ್ನು, ತಿಂದು ಬಿಟ್ಟ ಆಹಾರವನ್ನು ತೆಗೆದುಕೊಳ್ಳುವವನೇ ಶಿವಗಣ ಪ್ರಸಾದಿ; ಮಹಾದೇವಯ್ಯ ಅಂತಹ ವ್ಯಕ್ತಿಯಾಗಿದ್ದನೆಂಬುದು ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದಲ್ಲಿದ್ದ ಆಯ್ದಕ್ಕಿ ಮಾರಯ್ಯನು ಶರಣರ ಮನೆಗಳಲ್ಲಿ ದಾನ ನೀಡುವಾಗ ಆಕಸ್ಮಿಕವಾಗಿ ನೆಲದ ಮೇಲೆ ಬೀಳುತ್ತಿದ್ದ ಧಾನ್ಯವನ್ನು ಸಂಗ್ರಹಿಸಿ ತಂದು ಅದರಿಂದ ಅಡುಗೆ ಮಾಡಿಸಿ ಅದರಿಂದ ತೃಪ್ತನಾಗುತ್ತಿದ್ದ ವ್ಯಕ್ತಿಯಾಗಿದ್ದರೆ, ಕ್ರಿ.ಶ. 1400ರ ಮಹಾದೇವಯ್ಯನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶರಣರು ಊಟ ಮಾಡಿ ತಟ್ಟೆಯಲ್ಲಿ ಉಳಿಸುತ್ತಿದ್ದ ಶೇಷಾನ್ನವನ್ನು (ಆಧುನಿಕರ ದೃಷ್ಟಿಯಿಂದ ಹೇಳುವುದಾದರೆ ಎಂಜಲನ್ನು, ಅಂದರೆ ಅಂದಿನ ಶರಣರ ದೃಷ್ಟಿಯಿಂದ ಹೇಳುವುದಾದರೆ 'ಪ್ರಸಾದ'ವನ್ನು) ಸಂಗ್ರಹಿಸಿ ಭೋಗಿಸುತ್ತಿದ್ದ ಅಪರೂಪದ ಶರಣನಾಗಿದ್ದ".

ಹೀಗೆ ಬರೆದಿರುವ (ಪುಟ 156) ಡಾ|| ಚಿದಾನಂದ ಮೂರ್ತಿಯವರು, ಎಲ್. ಬಸವರಾಜು ಸಂಪಾದಿಸಿರುವ ಶೂನ್ಯ ಸಂಪಾದನೆ, ಪುಟ 71, ಉಲ್ಲೇಖಿಸಿ ಬಸವಣ್ಣನ ಮನೆಗೆ ಬರುತ್ತಿದ್ದ ಶಿವಗಣ ಪ್ರಸಾದಿಗಳ ವರ್ಣನೆ ಹೀಗಿದೆ. "ಮತ್ತಂ ಶಿವಗಣಂಗಳು ಆರೋಗಿಸಿ ಮಿಕ್ಕ ಶಿವ ಪ್ರಸಾದಮಂ ಕಂಡು, ಉಬ್ಬಿಕೊಬ್ಬಿ ನಲಿನಲಿದಾಡುತ್ತ, ಆ ಪ್ರಸಾದದೊಳು ಅಣು ಮಾತ್ರಮಂ ನೆಲಕ್ಕೆ ತಪ್ಪಲೀಯದೆ ಎತ್ತಿ ತಂದು, ಮಹಾಪ್ರಸಾದರಾಶಿಯಂ ಮಾಡಿ, ಆ ಪ್ರಸಾದಮಂ ಅಷ್ಟವಿಧಾರ್ಚನೆಯಿಂದ ಅರ್ಚಿಸಿ, ಪರಮಾನಂದದಿಂ ಪ್ರಸಾದಮಂ ಸ್ವೀಕಾರ ಮಾಡಿ ಪರಮ ಪರಿಣಾಮದೊಳಿಪ್ಪ ಶಿವಗಣ ಪ್ರಸಾದಿಗಳ್" (ವಚನ ಶೋಧ - 2, ಪುಟ 156) ಎಂದು ವಿವರಿಸುತ್ತಾರೆ.

ಡಾ|| ಚಿ.ಮೂ. ಸಹಿತವಾಗಿ ಅನೇಕ ಸಾಹಿತಿಗಳಿಗೆ ಪ್ರಸಾದ ತತ್ತ್ವದ ಮಾಹಿತಿ, ಮಹತಿ, ವಿಧಿ-ವಿಧಾನ ತಿಳಿದಿರುವುದೇ ಇಲ್ಲ. ಬಸವ ಧರ್ಮದ ಪ್ರಕಾರ ತಟ್ಟೆಯಲ್ಲಿ ಪ್ರಸಾದವನ್ನು ಶರಣರು ಬಿಡುವುದೇ ನಿಷಿದ್ಧ. ಒಂದು ಅಗುಳನ್ನೂ ಬಿಡದೆ ಉಂಡು, ನಂತರ ತಟ್ಟೆ ತೊಳೆದು ಅದರ ನೀರನ್ನು ಕುಡಿದು, ಸ್ವಚ್ಛವಾಗಿ ಒರೆಸಿ, ವಿಭೂತಿ ಧರಿಸಿ ಇಟ್ಟರೆ ಅದು ಊಟ ಮಾಡಿದ ತಟ್ಟೆ ಎನಿಸುವುದೇ ಇಲ್ಲ. ಮಠಾಧಿಪತಿಗಳಷ್ಟೆ ಅಲ್ಲ ಬಸವ ತತ್ತ್ವ ಅರಿತ ಇಂದಿನ ನಮ್ಮ ಶರಣರು ಸಹ ಒಂದು ಅಗುಳನ್ನು ಬಿಡದೆ ಪ್ರಸಾದ ಸ್ವೀಕರಿಸುತ್ತಾರೆ. ಇವತ್ತಿನ ಆಢ್ಯ ಆಧುನಿಕ ಜನ ಅರ್ಧ ಉಂಡು ಅರ್ಧ ಬಿಟ್ಟು ಕಸದ ಡಬ್ಬಿಗೆ ಎಸೆಯುವ ಸಂಸ್ಕೃತಿ ನಮ್ಮ ಶರಣರದಲ್ಲ.

ಶಿವಗಣ ಪ್ರಸಾದಿ ಮಹದೇವಯ್ಯನ ವಿವರಣೆ ನೋಡಿದರೆ ಆತನಿಗೆ ಸಹ ಆದಿ ಶರಣರ ಪ್ರಸಾದ ತತ್ತ್ವ ತಿಳಿದಂತೆ ತೋರದು "ಪ್ರಸಾದದಲ್ಲಿ ಅಣು ಮಾತ್ರವೂ ನೆಲಕ್ಕೆ ಬೀಳದಂತೆ ಎತ್ತಿ ತಂದು, ಮಹಾಪ್ರಸಾದ ರಾಶಿಯಂ ಮಾಡಿ, ಆ ಪ್ರಸಾದವಂ ಅಷ್ಟವಿಧಾರ್ಚನೆಯಿಂದ ಅರ್ಚಿಸಿ", ಎಂದು ಬರೆಯುತ್ತಾನೆ. ಮುಂಬಯಿಯಲ್ಲಿ ಓರ್ವ ದಂಪತಿಗಳು ಮದುವೆ ಮನೆ, ಸಂತೋಷ ಕೂಟಗಳಲ್ಲಿ ಉಂಡು ಬಿಟ್ಟ ಮತ್ತು ಹೆಚ್ಚಾಗಿ ಉಳಿದ ಆಹಾರ ಪದಾರ್ಥ ಸಂಗ್ರಹಿಸಿ ನೂರಾರು ಅನಾಥ

ಮಕ್ಕಳನ್ನು ಸಾಕುವರಂತೆ. ಶಿವಗಣ ಪ್ರಸಾದಿ ಮಹಾದೇವಯ್ಯನ ವಿವರಣೆ ಮುಂಬಯಿಯ ಪ್ರಸಂಗಕ್ಕೆ ಹೋಲುತ್ತದೆಯೇ ವಿನಾ 12ನೆಯ ಶತಮಾನದ ಮಹಾಮನೆಯ ಸಂಸ್ಕೃತಿಗಲ್ಲ.

ಶರಣ ತತ್ತ್ವದ ಪ್ರಕಾರ ಊಟಕ್ಕೆ ಎಡೆ ಮಾಡುವವರು ಒಂದು ಅಗುಳು ಚೆಲ್ಲುವಂತಿಲ್ಲ; ಉಣ್ಣುವವರು ತಟ್ಟೆ ಸುತ್ತ ಚೆಲ್ಲುವಂತಿಲ್ಲ, ತಟ್ಟೆಯಲ್ಲಿ ಬಿಡುವಂತೆಯೂ ಇಲ್ಲ. ಅಂದಾಗ ಬಿದ್ದುದನ್ನು ಎತ್ತಿಕೊಳ್ಳುವುದು ಎಲ್ಲಿ ಬಂತು ? ಪ್ರಸಾದ ರಾಶಿಯನ್ನು ಅಷ್ಟವಿಧಾರ್ಚನೆಯಿಂದ ಅರ್ಚಿಸುವುದೂ ನಿಷಿದ್ಧ. ಗುರು-ಲಿಂಗ-ಜಂಗಮದ ಹೊರತು ಇನ್ನಾವುದೂ ಪೂಜಾರ್ಹವಲ್ಲ ಅಂದಾಗ ಶರಣರು ಅನ್ನವನ್ನೇಕೆ ಪೂಜಿಸುವರು ?

<u>ಶಿವ ಗಣ ಪ್ರಸಾದ ಇದಕ್ಕೆ ಹೀಗೆಲ್ಲ ಅರ್ಥ ಮಾಡಬಹುದು :</u>

1. ಒಂಟಿಯಾಗಿ ಇದ್ದಿರಬಹುದಾದ ಶರಣ ಮಹಾದೇವಯ್ಯ ಸ್ವಯಂಪಾಕ ಮಾಡಿಕೊಳ್ಳುವ ಬದಲು ಮನೆಮನೆಗೆ ಹೋಗಿ ಪ್ರಸಾದ ಭಿಕ್ಷೆ ಪಡೆದು ತಂದು ಊಟ ಮಾಡುತ್ತಿದ್ದ.

ಕಂತೆ ಭಿಕ್ಷದ ಅಯ್ಯನವರು ಮನೆಮನೆಗೆ ಹೋದಾಗ ಅನ್ನ, ರೊಟ್ಟಿ, ಸಾರು, ಪಲ್ಯ ಇತ್ಯಾದಿ ತಮ್ಮ ಮನೆಗಳಲ್ಲಿ ಮಾಡಿದ ಅಡಿಗೆಯನ್ನು ಜಂಗಮರಿಗೆಂದು ಮೊದಲೇ ಇಟ್ಟು, ಕೊಡುವುದು ವಾಡಿಕೆ. ಅದನ್ನು ತಂದು ಉಣ್ಣುವುದು ಗಣ ಪ್ರಸಾದ. ಈ ರೀತಿ ಸಂಗ್ರಹಿಸಿದ ಕಂತೆಯ ಭಿಕ್ಷದಿಂದ ಯಾತ್ರಿಕರಿಗೆ, ಪ್ರವಾಸಿಕರಿಗೆ ದಾಸೋಹ ಮಾಡುತ್ತಾರೆ. ಎಷ್ಟೋ ಬಡ ಮಕ್ಕಳ ಹಾಸ್ಟೆಲ್ ನಡೆಸುತ್ತಾರೆ. ಗುರು ಮಲ್ಲೇಶ್ವರರು ಇಂಥ ಅನೇಕ ದಾಸೋಹ ಮಠಗಳನ್ನು ಪ್ರಾರಂಭಿಸಿದ್ದಾರೆ.

2. ಗಣ ಪ್ರಸಾದ ಎಂದರೆ ಸಾಮೂಹಿಕ ಪರ್ವಗಳಲ್ಲಿ ಮಾಡಿದ ಪ್ರಸಾದವೂ ಅಹುದು. ಶರಣ ಸಂಸ್ಕೃತಿಯಲ್ಲಿ ಇದಕ್ಕೆ ಬಹಳ ಗೌರವವಿದೆ. ಶ್ರೀಮಂತರು ತಮ್ಮ ಮನೆಯ ಭಕ್ಷ್ಯಭೋಜ್ಯಗಳಿಗಿಂತಲೂ ಈ ಗಣ ಪ್ರಸಾದದ ಅಂಬಲಿ, ರೊಟ್ಟಿ, ಮುದ್ದೆ ಮುಂತಾದುವೇ ಹೆಚ್ಚು ಎಂದು ಭಾವಿಸುತ್ತಾರೆ.

3. ಪ್ರಸಾದದಲ್ಲಿ ಒಕ್ಕ ಪ್ರಸಾದ, ಮಿಕ್ಕ ಪ್ರಸಾದ ಎಂದು ಇವೆ. **ಒಕ್ಕ ಪ್ರಸಾದ** ಎಂದರೆ (ಕಕ್ಕಯ್ಯನೊಕ್ಕುದ ಇಕ್ಕ ನೋಡಯ್ಯ ಎಂಬ ವಚನ ವಾಕ್ಯ) ಗುರು-ಜಂಗಮರು ಪ್ರಸಾದ ಸ್ವೀಕರಿಸುವಾಗ ಅವರಲ್ಲಿ ಅನನ್ಯ ಭಕ್ತಿ-ಗೌರವ ಇದ್ದವರು ಬಂದು ಬೊಗಸೆ ಒಡ್ಡುವರು. ನಾವು ಆಗ ಸ್ವೀಕರಿಸುತ್ತಿರುವ ಪ್ರಸಾದದ ತಟ್ಟೆಯಿಂದ ಒಂದು ತುತ್ತು (ಗುರು/ಜಂಗಮರು) ತೆಗೆದುಕೊಟ್ಟರೆ, ಅದನ್ನು ಭಕ್ತಿಯಿಂದ ಕಣ್ಣಿಗೊತ್ತಿಗೊಂಡು ಸ್ವೀಕರಿಸುವರು.

ಮಿಕ್ಕ ಪ್ರಸಾದ: ತಟ್ಟೆಯಲ್ಲಿ ಜಾಸ್ತಿಯಾಗಿ ಉಳಿದು ಬಿಡುತ್ತದೆ ಎಂದುಕೊಳ್ಳಿರಿ. ಆಗ ತಿನ್ನಲು ಸಾಧ್ಯವಿಲ್ಲ. ಅದನ್ನು ಬಿಸಾಡುವಂತಿಲ್ಲ. ಶಿಷ್ಯರು ಅದನ್ನು ಪಡೆದುಕೊಂಡು ತಾವು ಸ್ವೀಕರಿಸುವರು ಕೆಲವು ಸಲ ಅತಿ ಭಕ್ತಿ ಇರುವವರು ಬೇಕೆಂತಲೇ ತಟ್ಟೆಗೆ ಜಾಸ್ತಿ ನೀಡಿ "ನಂತರ ಉಳಿಸಿ ಕೊಡಿರಿ" ಎಂದು ಕೇಳಿಕೊಳ್ಳುವರು. ಹೀಗೆ ಪಡೆಯುವ ಒಕ್ಕ ಮಿಕ್ಕ ಪ್ರಸಾದವನ್ನು ಎಂಜಲು ಎಂದು ಶರಣ ಧರ್ಮೀಯರು ಭಾವಿಸುವುದಿಲ್ಲ. ಅದೇ ವೈದಿಕ ಮತಾನುಸಾರ ಅದು ಎಂಜಲು. ಅದಕ್ಕೇ ಹಾಗೆ ಎಂಜಲೆಂದು ಮೂಗು ಮುರಿಯುವವರನ್ನು ಕಂಡು ಕೋಪಗೊಂಡು ಶರಣರು ಪ್ರಶ್ನಿಸುವರು, "ಹೆಂಡತಿಯ ಎಂಜಲನ್ನು ಗಂಡ, ಗಂಡನ ಎಂಜಲನ್ನು ಹೆಂಡತಿ ತಿನ್ನುವುದಿಲ್ಲವೆ? ವೇಶ್ಯೆಯ ಎಂಜಲನ್ನು

ತಿನ್ನುವುದಿಲ್ಲವೆ ? ಹಾಲು ಕರುವಿನ ಎಂಜಲಲ್ಲವೆ ? ಹೂವು ದುಂಬಿಯ ಎಂಜಲಲ್ಲವೆ ? ನೀರು ಕಪ್ಪೆ- ಮೀನುಗಳ ಎಂಜಲಲ್ಲವೆ?'' ಎಂದು ಶರಣರು ಪ್ರಶ್ನಿಸುವರು. ಗುರು / ಜಂಗಮರು ಒಕ್ಕಪ್ರಸಾದ ಕೊಟ್ಟಾಗ ಅದನ್ನು ತಕ್ಷಣ ಸ್ವೀಕರಿಸಬೇಕೇ ವಿನಾ ತೆಗೆದಿಟ್ಟು ನಂತರ ಯಾವಾಗಲೋ ಉಣ್ಣುವುದಲ್ಲ.

ಆದ್ದರಿಂದ ಗಣ ಪ್ರಸಾದವೆಂದರೆ ಶರಣರ ಮನೆಗಳಿಂದ ಸಂಗ್ರಹಿಸಿದ ಅನ್ನಪ್ರಸಾದ ಎಂದು ಅರಿಯುವುದೇ ಸೂಕ್ತ. ಆ ಪ್ರಸಾದವನ್ನು ಮನೆಯವರು ಸ್ನಾನ- ಪೂಜೆ ಮಾಡಿ ಸಿದ್ಧಪಡಿಸಿರುವರಲ್ಲದೆ, ಅಡಿಗೆಯಾದ ತಕ್ಷಣ ಪಾತ್ರೆಗಳಿಗೆ ಭಸ್ಮಧಾರಣೆ ಮಾಡಿ, ಮೊದಲೇ ಕಂತೆಯ ಭಿಕ್ಷದವರಿಗಾಗಿ ಎತ್ತಿ ಇಟ್ಟು ನಂತರ ಮನೆಯವರು ಊಟ ಮಾಡುತ್ತಾರೆ. ನಾವು ಸಣ್ಣವರಿದ್ದಾಗ ಇದನ್ನೆಲ್ಲ ಪ್ರತ್ಯಕ್ಷ ಕಂಡಿದ್ದೇವೆ.

ಡಾ|| ಚಿ.ಮೂ ಅವರ ಲೇಖನ ಓದುತ್ತಿದ್ದರೆ ಅವರ ಕೆಲವು ಅಪಕ್ವ ವಿಚಾರ ಕಂಡು ಮೈ ಪರಚಿಕೊಳ್ಳುವಂತೆ ಆಗುತ್ತದೆ. ''ಶಿವಗಣ ಪ್ರಸಾದಿ ಮಹಾದೇವಯ್ಯ ಶರಣರು ಊಟ ಮಾಡಿ ತಟ್ಟೆಯಲ್ಲಿ ಉಳಿಸುತ್ತಿದ್ದ ಶೇಷಾನ್ನವನ್ನು ಸಂಗ್ರಹಿಸಿ ಭೋಗಿಸುತ್ತಿದ್ದ ಅಪರೂಪದ ಶರಣನಾಗಿದ್ದ'' ಎಂದು ಬರೆಯುತ್ತಾರೆ. ಶರಣರು ಊಟ ಮಾಡಿ ತಟ್ಟೆಯಲ್ಲಿ ಉಳಿಸಲು ಪರವಾನಗಿಯೇ ಇರಲಿಲ್ಲ. ಹಾಗಾದರೆ ಆ ತಟ್ಟೆಯನ್ನು ತೊಳೆಯದೆ ಇಡುತ್ತಿದ್ದರೆ ? ಅಥವಾ ಹಾಗೆ ಉಂಡು ಬಿಟ್ಟುದನ್ನು ಬೇರೆ ಕಡೆ ಇಟ್ಟಿರುತ್ತಿದ್ದರೆ ? ಮುಸುರೆ ಪಾತ್ರೆಗೆ ಹಾಕಿ ಮಹಾದೇವಯ್ಯನಂತಹ ಪ್ರಸಾದಿಗೆ ಕೊಡುತ್ತಿದ್ದರೆ ? ಶರಣರ ಪ್ರಸಾದ ತತ್ತ್ವದ ಗಂಧ ಚಿ.ಮೂ ಅವರಿಗೆ ಇಲ್ಲದಿದ್ದರೆ ಹೋಗಲಿ ಕಾಮನ್ ಸೆನ್ಸ್ (ಸಾಮಾನ್ಯ ಜ್ಞಾನ) ಆದರೂ ಬೇಡವೆ? ಈ ಮಹಾನ್ (ಅಜ್ಞಾನಿ ಅಥವಾ ಅರೆಜ್ಞಾನಿ) ಸಂಶೋಧಕರ ಮುಂದಿನ ಮಾತು ನೋಡಿರಿ, ''ಆ ಮಹಾದೇವಯ್ಯ ನಿಶ್ಚಿತವಾಗಿಯೂ ಗುರು ವರ್ಗದ ಶರಣನಾಗಿರಲಿಲ್ಲ. ಗುರುವರ್ಗದವನಾಗಿದ್ದರೆ ಸಮಾಜವು ಅವನ ಕಾಯಕಕ್ಕೆ ನಿಶ್ಚಯವಾಗಿಯೂ ಅವಕಾಶ ನೀಡುತ್ತಿರಲಿಲ್ಲ. ಅವನು ನಿಶ್ಚಿತವಾಗಿಯೂ ಭಕ್ತವರ್ಗದ ಶರಣ'' (ಪುಟ 156)

1. ಭಕ್ತ ವರ್ಗ, ಗುರು ವರ್ಗ ಇವೆಲ್ಲ 20ನೆಯ ಶತಮಾನದ ಪಂಚಾಚಾರ್ಯವಾದಿಗಳ ಪದ ಸೃಷ್ಟಿ. ಮಹಾದೇವಯ್ಯನೇ ಇರಲಿ, ಸಾಕ್ಷಾತ್ ಅಲ್ಲಮಪ್ರಭುವೇ ಇರಲಿ ದೇವರಿಗೆ ಭಕ್ತ, ಭಕ್ತರಿಗೆ ಗುರು ಮತ್ತು ಜ್ಞಾನ ನೀಡುವ ಜಂಗಮ.

2. ಭಿಕ್ಷೆ ಸಂಗ್ರಹಿಸುವುದು ಎಂದೂ ಕಾಯಕವಲ್ಲ. ಇಂಥ ಸಂಶೋಧಕರಿಗೆ ಅಂಥ ಸಾಮಾನ್ಯ ವಿಷಯವೂ ತಿಳಿಯಬಾರದೆ ? ಜ್ಞಾನ ಬೋಧೆ ಜಂಗಮನ ಕಾಯಕ; ಅದಕ್ಕಾಗಿ ಭಕ್ತರು ಊಟ, ವಸ್ತ್ರ ಧನ ಕೊಡುತ್ತಾರೆ. ಮಹಾದೇವಯ್ಯನು ಅಂಥ ಜ್ಞಾನಿ; ಬಹುಶಃ ಆತನು ಸಾಹಿತಿ, ಸಂಪಾದನಾ ಕಾರ್ಯ ಪರಿಣಿತ. ಶಿವ(ಗಣ) ಪ್ರಸಾದದ ಮೇಲೆ ಉಪಜೀವನ ಮಾಡುತ್ತಿದ್ದ. ಸ್ವತಃ ನಮ್ಮ ಗುರುಗಳು (ಎಷ್ಟೋ ಜನ ಸ್ವಾಮಿಗಳು) ಪ್ರವಚನಕ್ಕೆ ಹೋದಾಗ ಭಕ್ತರ ಮನೆಯಿಂದ ಕಳಿಸುತ್ತಿದ್ದ (ಗಣ) ಪ್ರಸಾದ ಸ್ವೀಕರಿಸಿ, ಬೋಧೆಯ ಕಾಯಕ ಮಾಡುತ್ತಿದ್ದರು. ಭಿಕ್ಷಾಟನೆ ಬಸವ ಧರ್ಮದ ಪ್ರಕಾರ ಕಾಯಕವಲ್ಲ. ಅದನ್ನು ಆಯ್ದಕ್ಕಿ ಮಾರಯ್ಯನ ಪ್ರಸಂಗದಲ್ಲಿ ಚರ್ಚಿಸಲಾಗಿದೆ. ''ಕಾಯಕ ಸತ್ತು, ಹಣ- ಹೊನ್ನ ಬೇಡಿದೆ ಎಂದರೆ ಅಮರೇಶ್ವರ ಲಿಂಗಕ್ಕೆ ದೂರ''. ಕಂತೆಯ ಭಿಕ್ಷವನ್ನು ಇಂದು ಮಾಡುತ್ತಿರುವ ಅನೇಕ ಅಯ್ಯನವರು ''ಬೇಡುವುದು ನಮ್ಮ ಕಾಯಕ'' ಎಂದೇ ತಿಳಿದಿದ್ದಾರೆ. ಇದು ಶುದ್ಧಾಂಗ ತಪ್ಪು. ಅವರು ಧರ್ಮದ ಜ್ಞಾನ ನೀಡಬೇಕು. ಅದಕ್ಕೆ ಪ್ರತಿಫಲವಾಗಿ ಭಕ್ತರು ಜಂಗಮರ ಜೀವನ

ನಿರ್ವಹಣೆಗೆ ಕೋರುಧಾನ್ಯ (ಅಂದರೆ ದವಸಧಾನ್ಯ) ಇಲ್ಲವೇ ಕಂತೆಯ ಭಿಕ್ಷೆ (ಸಿದ್ಧವಾದ ಅಡಿಗೆ) ಕೊಡಬೇಕು. ಇದೇ ಉದ್ದೇಶದಿಂದಲೇ ಶಿವಗಣ ಪ್ರಸಾದಿ ಮಹಾದೇವಯ್ಯ ಗಣ ಪ್ರಸಾದ ಸ್ವೀಕರಿಸುತ್ತ ತನ್ನನ್ನು ತಾನು ಬಸವ ಧರ್ಮ ಪ್ರಚಾರಕ್ಕೆ ಸಮರ್ಪಿಸಿಕೊಂಡಿದ್ದ.

ಡಾ|| ಚಿ.ಮೂ ಅವರು ವಿಶೇಷ ಸಂಶೋಧನೆಯಿಂದ ಕಂಡು ಹಿಡಿದ ಇನ್ನೊಂದು ಅಜ್ಞಾನದ ಸಂಗತಿಯನ್ನು ವಿಶ್ಲೇಷಿಸಿ ಈ ಲೇಖನ ಮುಗಿಸುತ್ತೇನೆ.

''ಹನ್ನೆರಡನೆಯ ಶತಮಾನದಲ್ಲಿದ್ದ ಆಯ್ದಕ್ಕಿ ಮಾರಯ್ಯನು ಶರಣರ ಮನೆಗಳಲ್ಲಿ ದಾನ ನೀಡುವಾಗ ಆಕಸ್ಮಿಕವಾಗಿ ನೆಲದ ಮೇಲೆ ಬೀಳುತ್ತಿದ್ದ ಧಾನ್ಯವನ್ನು ಸಂಗ್ರಹಿಸಿ ತಂದು ಅದರಿಂದ ಅಡುಗೆ ಮಾಡಿಸಿ ಅದರಿಂದ ತೃಪ್ತನಾಗುತ್ತಿದ್ದ ವ್ಯಕ್ತಿಯಾಗಿದ್ದರೆ....'' (ಪುಟ 156)

1. ಎಲ್ಲರೂ ಕಾಯಕ ಜೀವಿಗಳೇ ಆಗಿದ್ದಾಗ ದಾನ ಪಡೆಯಲು ಬರುವವರು ಯಾರಿದ್ದರು ?

2. ಕೋರುಧಾನ್ಯ ಪಡೆಯಲು ಬರುವ ಬೋಧಕ ಜಂಗಮನಿಗೆ ಅಕ್ಕಿ ಭಿಕ್ಷೆ ನೀಡುವಾಗ ''ಆಯ್ದುಕೊಳ್ಳುವಷ್ಟು'' ಮನೆಯವರು ಚೆಲ್ಲುತ್ತಿದ್ದರೆ ? ಹಾಗೆ ಚೆಲ್ಲಿದರೆ ಅವರು ಎತ್ತಿಕೊಳ್ಳುತ್ತಿರಲಿಲ್ಲವೆ ? ಮನೆ ಮನೆ ತಿರುಗುತ್ತಾ ಆಯ್ದಕ್ಕಿ ಮಾರಯ್ಯ ಬಂದು ಎತ್ತಿಕೊಳ್ಳುವವರೆಗೂ ಹಾಗೆಯೇ ತುಳಿದಾಡುತ್ತಿದ್ದರೆ ?

3. ಚೆಲ್ಲದಂತೆ ದಾನ ಕೊಡಲು ಬರುತ್ತಿರಲಿಲ್ಲವೆ ?

ಹಾಗಾದರೆ ಆಯ್ದಕ್ಕಿ ಕಾಯಕದ ಬಗೆ ಹೇಗೆ ?

1. ಸಾಮೂಹಿಕ ಪ್ರಸಾದ ನಡೆಯುವ ಮಹಾಮನೆಯಲ್ಲಿ, ದಾಸೋಹ ಮಠಗಳಲ್ಲಿ ದೊಡ್ಡ ಪ್ರಮಾಣದ ಅಡಿಗೆ ಆಗುತ್ತಿರುತ್ತದೆ. ಆಗ ಅಕ್ಕಿಯ, ಬೇಳೆಯ ಮೂಟೆ ಒಯ್ಯುವಾಗ ದಾರಿಯಲ್ಲಿ ಕಾಳುಗಳು ಬೀಳುವ ಸಂಭವ ಇರುತ್ತದೆ. ಹಾಗೆಯೇ ಬಿಟ್ಟರೆ ಅವು ತುಳಿಯಲ್ಪಟ್ಟು ಮಣ್ಣಲ್ಲಿ ಸೇರಿ ಹಾಳಾಗುವ ಸಂಭವ ಇರುತ್ತದೆ. ಯಾವ ವಸ್ತುವೂ ಅನುಪಯುಕ್ತವಾಗಿ ಹಾಳಾಗಬಾರದು ಎಂದು ಆಯ್ದಕ್ಕಿ ಕಾಯಕದವರು ಬಂದು ಅವನ್ನು ಸಂಗ್ರಹಿಸುತ್ತಿದ್ದರು.

2. ಉಗ್ರಾಣಗಳಲ್ಲಿಟ್ಟಾಗ ಇಲಿಗಳು ಚೀಲಕಡಿದು ಅಕ್ಕಿ ಇತ್ಯಾದಿ ಸೋರಿ ಬಿದ್ದಿರುತ್ತದೆ. ಅದು ವ್ಯರ್ಥವಾಗಬಾರದು.

3. ಮಾರುಕಟ್ಟೆ ಪ್ರದೇಶದಲ್ಲಿ ಮಾದರಿಗಾಗಿ ತಂದು ಆಹಾರ ಪದಾರ್ಥಗಳ ಬೆಲೆ ಕಟ್ಟಿ ಆ ಧಾನ್ಯ-ವಸ್ತುಗಳನ್ನು ವ್ಯಾಪಾರಸ್ಥರು ಅಲ್ಲೇ ಬಿಟ್ಟು ಹೋದರೆ ಅದು ವ್ಯರ್ಥವಾಗಬಾರದೆಂದು ಆಯ್ದು ತೆಗೆದುಕೊಳ್ಳಲಾಗುತ್ತಿತ್ತು.

4. ಮಾರುಕಟ್ಟೆಗೆ ಧಾನ್ಯ ತಂದು ಹಾಕುವಾಗ, ಜನರು ಅಲ್ಲಿಂದ ಕೊಂಡು ಒಯ್ಯುವಾಗ ಬೀಳಬಹುದಾದ ದವಸ ಧಾನ್ಯಗಳನ್ನು ಆಯ್ದುಕೊಳ್ಳಲಾಗುತ್ತಿತ್ತು. ವ್ಯಾಪಾರಸ್ಥರು ಹೆಚ್ಚಿನ ಹಣ ಸಂಪಾದನೆಯ ಕಡೆಗೆ ಗಮನವಿಡುವರು. ಇಂಥ ಸಣ್ಣ ಆದಾಯದ ಕೆಲಸಕ್ಕೆ ಏಕೆ ಗಮನ ಕೊಡುವರು ? ಅದಕ್ಕಾಗಿಯೇ ಸರಳ ವ್ರತಧಾರಿಗಳಾದ ಶರಣರು ಸಣ್ಣದಾದರೂ ಮಹತ್ವ

ಪೂರ್ಣವಾದ ಆಯ್ದಕ್ಕಿ ಕಾಯಕ ಮಾಡುತ್ತಿದ್ದರು. ಕಲ್ಯಾಣ ಪಟ್ಟಣದ ವಿಸ್ತಾರದ ಹಿನ್ನೆಲೆಯಲ್ಲಿ ಮಾರಯ್ಯನಂತಹ ಇನ್ನು ಅನೇಕ ಶರಣರು ಆಯ್ದಕ್ಕಿ ಕಾಯಕ ಮಾಡುತ್ತಿರಬಹುದು. ಮಾರಯ್ಯ-ಲಕ್ಕಮ್ಮರು ವಚನಗಳನ್ನು ಬರೆದಿರುವುದರಿಂದ ಶೂನ್ಯ ಸಂಪಾದಕರಾಗಿ ಅಮರರಾಗಿದ್ದಾರೆ.

5. ಹೊಲಗದ್ದೆಗಳಲ್ಲಿ ತೆನೆಗಳನ್ನು ಕೊಯ್ಯುವರು. ಆಗ ತೆನೆಗಳಿಂದ ಉದುರಿದ ಕೆಲವು ಕಾಳು ಹೊಲಗದ್ದೆಗಳಲ್ಲಿ ಬೀಳುವವು. ನಂತರ ಕಣದಲ್ಲಿ ರಾಶಿ ಮಾಡುವರು. ರಾಶಿಯನ್ನು ಅಳೆದು ತುಂಬಿದ ನಂತರ ಕಣದಲ್ಲಿ, ಕಣದ ಸುತ್ತ ತುಳಿಯುವ ಎತ್ತುಗಳ ಕಾಲಿನ ಗೊರಸಿಗೆ ಸಿಕ್ಕಿ ಕಾಳುಗಳು ಅತ್ತ ಇತ್ತ ಬಿದ್ದಿರುತ್ತವೆ. ಇಂಥ ಕಾಳುಗಳನ್ನು ಆಯ್ದು ಅವುಗಳ ನಷ್ಟತಪ್ಪಿಸಿ ತಮ್ಮ ಉಪಜೀವನ ಮಾಡಿಕೊಳ್ಳುವುದು ಎಷ್ಟು ಅರ್ಥಪೂರ್ಣ ಮತ್ತು ಪವಿತ್ರ ಉದ್ಯೋಗವಲ್ಲವೆ?

ಬಸವಾದಿ ಪ್ರಮಥರ ವಿಚಾರಧಾರೆಯ ಮರ್ಮವನ್ನರಿಯದೆ ಎಡ್ಡಂಶೆಡ್ಡಂ ಆಗಿ ಡಾ|| ಚಿ.ಮೂ ''ಉಂಡು ಬಿಟ್ಟದ್ದನ್ನು ಶಿವಗಣ ಪ್ರಸಾದಿ ಮಹಾದೇವಯ್ಯ ಸಂಗ್ರಹಿಸಿ ತಿನ್ನುತ್ತಿದ್ದರು; ಆಯ್ದಕ್ಕಿ ಮಾರಯ್ಯ ದಾನಕೊಡುವಾಗ ಚೆಲ್ಲಿದ ಅಕ್ಕಿ ಸಂಗ್ರಹಿಸುತ್ತಿದ್ದರು'' ಎಂದು ಬರೆಯುವುದು ಎಷ್ಟು ಸೂಕ್ತ?! ಅವಿವೇಕದ ವಿವರಣೆ ಎನಿಸದೆ?

. . . .

ಚಿಂದಿ ಆಯುವ ಕೆಲಸ ಮತ್ತು ಅಮೆರಿಕಾದ ಬದಲಾದ ವಿಚಾರ

ಇದೇ ಸಂದರ್ಭದಲ್ಲಿ ಬೇರೊಂದು ವಿಷಯ ಪ್ರಸ್ತಾಪಿಸುತ್ತೇನೆ. ಚಿಂದಿ ಆಯುವ ನಿರ್ಗತಿಕರು ಕಸದ ತೊಟ್ಟಿಗೆ ಎಸೆಯಲಾದ ಪ್ಲಾಸ್ಟಿಕ್ ಹಾಳೆ, ಕವರು, ಕಾಗದ, ವಸ್ತು ಆಯ್ದು ಒಯ್ಯುತ್ತಾರೆ. ಆಮೇಲೆ ಖರೀದಿದಾರರಿಗೆ ವರ್ಗೀಕರಿಸಿ ಮಾರುತ್ತಾರೆ. ಒಂದು ದೃಷ್ಟಿಯಿಂದ ಇದೂ ಒಂದು ಉತ್ತಮ ಕಾಯಕವಲ್ಲವೆ?

ಕೆಲವಾರು ವರ್ಷಗಳ ಹಿಂದೆ ಅಮೆರಿಕಾದವರು ದುರಹಂಕಾರ ಮೇರೆ ಮೀರಿ ದಿನ ಪತ್ರಿಕೆ, ಸಾಪ್ತಾಹಿಕ ಮುಂತಾದುವುಗಳನ್ನು ಸಂಗ್ರಹಿಸಿ ಮಾರುವ ಭಾರತೀಯರ ಮನೋಭಾವದ ಬಗ್ಗೆ ತುಚ್ಛವಾಗಿ ಮಾತನಾಡುತ್ತಿದ್ದರು. ಈಗ ಅವರ ಮನೋಭಾವದಲ್ಲಿ ಬದಲಾವಣೆಯಾಗಿದೆ. ಅವರೂ ಪೇಪರ್‌ಗಳನ್ನು ಪ್ಲಾಸ್ಟಿಕ್ ವಸ್ತುಗಳನ್ನು, ಗಾಜಿನ ಭರಣಿ ಇತ್ಯಾದಿ ಸಂಗ್ರಹಿಸಿ, ವರ್ಗೀಕರಿಸಿ ಕಸ ಒಯ್ಯಲು ಗಾಡಿಗಳು ಬಂದಾಗ ಕೊಡುತ್ತಾರೆ. ಮುಸುರೆ, ಹಸಿ ಪದಾರ್ಥ ಸಂಗ್ರಹಕ್ಕೆ ಒಂದು ಗಾಡಿ, ಗಿಡದ ರೆಂಬೆ, ಹುಲ್ಲು ಮುಂತಾದವುಗಳಿಗಾಗಿ ಇನ್ನೊಂದು ಗಾಡಿ, ಪೇಪರ್ ಪ್ಲಾಸ್ಟಿಕ್ ವಸ್ತುಗಳಿಗಾಗಿ ಮತ್ತೊಂದು ಗಾಡಿ ಹೀಗೆ ಮೂರು ಬರುತ್ತವೆ. ಆದರೂ ಅವರು ಅನುಸರಿಸುವ ಯೂಸ್ ಆಂಡ್ ಥ್ರೋ ಸಿದ್ಧಾಂತದಿಂದ ಸಾಕಷ್ಟು ಕಸ ಜಾಸ್ತಿಯಾಗಿ ಆ ಕಸವನ್ನು ಸಮುದ್ರಗಳಲ್ಲಿ ಚೆಲ್ಲುವುದರಿಂದ ಸಮುದ್ರದೊಳಗಣ ಜೀವಜಾಲಕ್ಕೆ ಕುತ್ತು ಬಂದಿದೆ ಎಂಬುದು ಗಮನಾರ್ಹ. ಪರಿಸರ ಮಾಲಿನ್ಯ, ಕಾಡುಗಳ ನಾಶಕ್ಕೆ ಅಮೆರಿಕಾದ ಜನರ ಜೀವನ ಶೈಲಿ ಬಹಳಷ್ಟು ಕಾರಣವಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ರೀ ಸೈಕ್ಲಿಂಗ್ ಎಂದು ಈಗ ಕಾಗದ, ಪ್ಲಾಸ್ಟಿಕ್ ಮುಂತಾದುವನ್ನು ಪುನಃ ಬಳಸುವ ವಿಧಾನ ಅಮೆರಿಕಾದಲ್ಲಿ ರೂಢಿಗೊಳ್ಳುತ್ತಿದೆ.

ಇದು ನಮ್ಮ ದೇಶ

- ಮಾತಾಜಿ



ಅಮೇಥಿ ಲೋಕಸಭಾ ಕ್ಷೇತ್ರದ ಜಗದೀಶ್‌ಪುರದಲ್ಲಿ ಮಂಗಳವಾರ ನಡೆದ ಸಮಾರಂಭವೊಂದರಲ್ಲಿ ಸಂಸದ ರಾಹುಲ್ ಗಾಂಧಿಯವರಿಗೆ 80 ಕೆ.ಜಿ. ಲಾಡುಗಳೊಂದಿಗೆ ತುಲಾಭಾರ ನಡೆಯುತ್ತಿದ್ದಾಗ ವೃದ್ಧೆಯೊಬ್ಬಳು ಅವರಿಗೆ ಮನವಿ ಸಲ್ಲಿಸಲು ಮುಂದಾದುದನ್ನು ಎಸ್.ಪಿ.ಜಿ ಸಿಬ್ಬಂದಿ ತಡೆಯುತ್ತಿರುವುದು.

ದಿ. 9-6-2004ರ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ದೃಶ್ಯ ಪುಟ. 9 ರಲ್ಲಿ ಕಾಣಬಂದಿತು. ನನ್ನ ಅಂತಃಕರಣ ಕಲಕಿ, ಹೃದಯ ಹಿಂಡಿದಂತಾಗಿ ಕಣ್ಣಲ್ಲಿ ನೀರು ಉಕ್ಕಿದವು. ರಾಜಕುಮಾರ ರಾಹುಲ್ ಗಾಂಧಿ ಸಂಭ್ರಮದಿಂದ ತುಲಾಭಾರ ಮಾಡಿಸಿಕೊಳ್ಳುತ್ತಿದ್ದಾರೆ. ಅಮೇಥಿ ಲೋಕಸಭಾ ಕ್ಷೇತ್ರದ ಜಗದೀಶ ಪುರದಲ್ಲಿ ಮಂಗಳವಾರ ನಡೆದ ಸಮಾರಂಭವೊಂದರಲ್ಲಿ ರಾಹುಲ್ ಗಾಂಧಿಯವರಿಗೆ 80 ಕೆ.ಜಿ. ಲಾಡುಗಳೊಂದಿಗೆ ತುಲಾಭಾರವನ್ನು ಮಾಡುತ್ತಿದ್ದಾರೆ. ಅವರ ಅಭಿಮಾನಿಗಳು ಓರ್ವ ಹಣ್ಣುಹಣ್ಣು ಮುದುಕಿ, ಸೊರಗಿ ಕಡ್ಡಿಯಾದ ದೇಹ ಹೊತ್ತು ಮೈತುಂಬ ಬಟ್ಟೆಯೂ ಇಲ್ಲದೆ, ಕೆದರಿದ ತಲೆಗೂದಲು, ಒಣಗಿ ಕಟ್ಟಿಗೆಯಂತಿರುವ ಕೈಗಳಿಂದ ಮನವಿಯೊಂದನ್ನು ಸಲ್ಲಿಸಲು ರಾಜಕುಮಾರನ ಮುಂದೆ ಬರುತ್ತಿದ್ದಾಳೆ, ನಗೆ ಮೊಗದ ರಾಜಕುಮಾರ ಕುಳಿತು ನೋಡುತ್ತಿದ್ದಾನೆ. ಎಸ್.ಪಿ.ಜಿ ಸಿಬ್ಬಂದಿ ಆ ಮುದುಕಿಯನ್ನು ತಡೆಯುತ್ತಿದ್ದಾರೆ.

ಈ ಚಿತ್ರ ನಮ್ಮ ದೇಶದ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟುತ್ತಿದೆ. ಜನತೆಯ ಕಷ್ಟಸುಖಗಳನ್ನೇ ಅರಿಯದ ಕೊಬ್ಬಿದ ರಾಜಕಾರಣಿಗಳು, ಶ್ರೀಮಂತರು ಸಂಖ್ಯೆಯಲ್ಲಿ ಬೆಳೆದಂತೆ ಅರೆ ಹೊಟ್ಟೆಗೆ ಉಂಡು, ಅರೆ ಬಟ್ಟೆ ತೊಟ್ಟು ಬೀದಿಯನ್ನು ಆಶ್ರಯಿಸುವವರ ಸಂಖ್ಯೆಯೂ ಬೆಳೆಯುತ್ತಿದೆ.

ಆದರ್ಶ ರಾಜಕಾರಣಿ ಚಟರ್ಜಿ

ಕಮ್ಯುನಿಸ್ಟರು ಮತ್ತು ಕಮ್ಯುನಿಸಮ್ ಬಗ್ಗೆ ನನಗೆ (ಮತ್ತು ನಮ್ಮ ಪೂಜ್ಯ ಗುರೂಜಿಯವರಿಗೆ) ಕೊಂಚ ಅಭಿಮಾನವಿದೆ. ಅವರ ಎಲ್ಲ ವಿಚಾರಗಳನ್ನು ನಾವು ಒಪ್ಪದಿದ್ದರೂ ಕಮ್ಯುನಿಸಮ್‌ದಲ್ಲಿ ಮಾನವೀಯ ಕಳಕಳಿ ಇದೆ ಎಂಬುದು ಗಮನಾರ್ಹ. ಎಲ್ಲ ಕಮ್ಯುನಿಷ್ಟರೂ

ಆದರ್ಶವಾದಿಗಳೆಂದು ಹೇಳಲೂ ಆಗದು. ಶ್ರೀ ಸೋಮನಾಥ ಚಟರ್ಜಿ ಕಮ್ಯುನಿಸ್ಟ್ ವಿಚಾರ ಧಾರೆಯವರು, ಸದ್ಯದ ಲೋಕಸಭಾ ಸ್ಪೀಕರ್. ರಾಷ್ಟ್ರಪತಿ ಶ್ರೀ ಅಬ್ದುಲ್ ಕಲಾಂ, ಪ್ರಧಾನಿ ಮನಮೋಹನ್ ಸಿಂಗ್, ಲೋಕಸಭಾಧ್ಯಕ್ಷ ಸೋಮನಾಥ ಚಟರ್ಜಿ - ಮೂವರೂ ರಾಷ್ಟ್ರದ ಉನ್ನತ ಹುದ್ದೆಯಲ್ಲಿ ರುವವರು. ಮೂವರೂ ಆದರ್ಶವಾದಿಗಳು, ಸರಳ ಜೀವಿಗಳು. ಮೂವರೂ ಅಧಿಕಾರ ಸ್ವೀಕಾರ ಮಾಡುವಾಗ ಅದಕ್ಕೆಂದೇ ವಿಶೇಷ ಸೂಟುಗಳನ್ನು ಹೊಲಿಸಿಕೊಳ್ಳಲಿಲ್ಲ.

ಶ್ರೀ ಚಟರ್ಜಿಯವರು ಸ್ಪೀಕರ್ ಆದ ತಕ್ಷಣ ಆಯ್ಕೆಗಾಗಿ ಷೋರೂಂದಿಂದ ತಂದು ಪ್ರದರ್ಶಿಸಿದ ಕಾರುಗಳಲ್ಲಿ ಐಷಾರಾಮಿ ಕಾರು ಬಿಟ್ಟು ಸರಳವಾದ ಅಂಬಾಸಿಡರ್ ಕಾರು ತಮಗೆ ಸಾಕು ಎಂದರು. ನಿವಾಸದ ನವೀಕರಣ ಅಗತ್ಯವಿಲ್ಲ ಎಂದರು. ಅವರು ಬೇಡಿಕೆ ಸಲ್ಲಿಸಿದ್ದು ಅವರ ಅಧ್ಯಯನ ಗ್ರಂಥಗಳನ್ನು ಜೋಡಿಸಿಕೊಳ್ಳಲಿಕ್ಕೆ ಬುಕ್ ಶೆಲ್ಫ್‌ಗಳನ್ನು ಮಾತ್ರ! ಪತ್ರಿಕೆಗಳಲ್ಲಿ ಈ ಸುದ್ದಿ ಓದಿ ನನಗಂತೂ ಅತೀವ ಹೆಮ್ಮೆಯುಂಟಾಯಿತು.

ಇತ್ತೀಚೆಗೆ ನಾನೊಮ್ಮೆ ಟ್ರೇನಿನಲ್ಲಿ ಬರುವಾಗ ನಮ್ಮ ಅಭಿಮಾನಿಯೋರ್ವರು, ''ನಿಮಗೇನು ಕಡಿಮೆ. ಎ.ಸಿ. ಕೋಚ್ ಬುಕ್ ಮಾಡಬಹುದಿತ್ತು ?'' ಎಂದು ಕೇಳಿದರು. ''ಭಕ್ತರು ಕಾಣಿಕೆ ಕೊಡುವುದು ದುಂದು ವೆಚ್ಚ ಮಾಡಲಿಕ್ಕಲ್ಲ. ಸಂಸ್ಥೆ ಬೆಳಸಲಿಕ್ಕೆ'' ಎಂದೆ. ಎ.ಸಿ. ಕೋಚ್‌ದಲ್ಲಿ ಹೋದರೆ ಆರೋಗ್ಯ, ಸಾಮಾನ್ಯ ಡಬ್ಬಿಯಲ್ಲಿ ಹೋದರೆ ಅನಾರೋಗ್ಯವಾಗುವುದೆ ? ಇದರಲ್ಲಿ ನನಗೆ ನಂಬಿಕೆಯಿಲ್ಲ. ಹಾಗೆ ಹೋದರೆ ನನ್ನ ಗೌರವ ಕಮ್ಮಿಯಾಗುತ್ತದೆ ಎಂಬ ಭಾವನೆಯೂ ನನಗಿಲ್ಲ'' ಎಂದೆ.

ನಾನು ಬಾಲ್ಯದಿಂದಲೂ ಗಾಂಧೀಜಿ ಮತ್ತು ಸ್ವಾಮಿ ವಿವೇಕಾನಂದರ ಅಭಿಮಾನಿ ಮತ್ತು ನಂತರ 1965ರಲ್ಲಿ ಪೂಜ್ಯ ಗುರುಗಳ ಭಾಷಣ ಕೇಳಿ ಅಕ್ಕಮಹಾದೇವಿ ಮತ್ತು ಬಸವಣ್ಣನವರ ಆರಾಧಕಳಾದವಳು. ಒಮ್ಮೆ ಮಹಾತ್ಮಾಜೀ ರೈಲಿನ ಮೂರನೆಯ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡುತ್ತಾರೆ. ಆಗ ಪರಿಚಿತರೊಬ್ಬರು, ''ಇದೇನು ಬಾಪೂಜಿ ನೀವು ಮೂರನೆಯ ದರ್ಜೆಯಲ್ಲಿ ಪ್ರಯಾಣಿಸುವುದೆ ?'' ಎನ್ನುತ್ತಾರೆ. ಆಗ ಬಾಪೂಜಿ ಹೇಳುತ್ತಾರೆ, ''ಇನ್ನೇನು ಮಾಡಲಿ ? ನಾಲ್ಕನೆಯ ದರ್ಜೆಯ ಬೋಗಿ ಇಲ್ಲವಲ್ಲಾ''.

ಕೆಲವರು (ಕುಹಕಿಗಳು) ಹೇಳಬಹುದು, ''ನಿಮ್ಮ ಬಳಿ ಎ.ಸಿ. ಕೋಚ್‌ದಲ್ಲಿ ತಿರುಗುವಷ್ಟು ಹಣ ಇರಲಿಕ್ಕಿಲ್ಲ''. ಇದೂ ನಿಜವಿರಬಹುದು ಎಂದುಕೊಳ್ಳೋಣ. ಆಡಂಬರದ ವ್ಯಕ್ತಿಯಾದರೆ ಒಳಗೆ ಪೊಳ್ಳಾಗಿದ್ದರೂ ಹೊರಗೆ ಆಢ್ಯತೆಯಿಂದ ತೋರಿಸಿಕೊಳ್ಳುವುದಿಲ್ಲವೆ ? ಹಾಗೆ ''ಸಾಲ ಮಾಡಿಯಾದರೂ ತುಪ್ಪ ತಿನ್ನು'' ಎಂಬ ಚಾರ್ವಾಕ ಸೂತ್ರವನ್ನು ಅಳವಡಿಸಿಕೊಂಡು ಮೆರೆಯಬಹುದಲ್ಲವೆ ?

★★★

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
809ನೆಯ ಲಿಂಗೈಕ್ಯ ದಿನಾಚರಣೆ



ಶುಕ್ರ (ಮಾತೃ)ವಾರ ದಿ. 20-8-2004ರಂದು ಬೆಳಿಗ್ಗೆ 10-00

ಬೆಂಗಳೂರು ನಗರದ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣಜೀವಾಳ

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಶುಭವಲ್ಲ ಅಶುಭವಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಬಸವಣ್ಣನವರ ಸಮಗ್ರ ವಚನಗಳನ್ನು 12 ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ವಿಶ್ವಗುರು ಬಸವಣ್ಣನವರ 809ನೆಯ ಲಿಂಗೈಕ್ಯ ದಿನಾಚರಣೆ

ಶುಕ್ರ (ಮಾತೃ) ವಾರ ದಿ. 20-8-2004ರಂದು ಬೆಳಿಗ್ಗೆ 10-00

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 809ನೆಯ ಲಿಂಗೈಕ್ಯ ದಿನವು ಶುಕ್ರ (ಮಾತೃ) ವಾರ ದಿ.20-8-2004ರಂದು ಒದಗಿ ಬಂದಿದೆ.

ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು. ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಶನಿ(ಶರಣ)ವಾರ ದಿ.21-8-2004ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸರ್ವರಿಗೂ ಆದರದ ಸುಸ್ವಾಗತ

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು,
ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು
ಪೀಠಾಧ್ಯಕ್ಷರು, ಬಸವ ಕಲ್ಯಾಣ

ವಿಶ್ವಗುರು ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ ಯೋಜನೆಗೆ ಚಾಲನೆ

ಬೀದರ್ ಜಿಲ್ಲೆಯ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಕ್ರಾಂತಿ ಪುರುಷ
ಬಸವಣ್ಣನವರ ನೇತೃತ್ವದಲ್ಲಿ ಅಸಂಖ್ಯಾತ ಶರಣರನ್ನು ಆಕರ್ಷಿಸಿದ ಶರಣ ಭೂಮಿ. ಜಗತ್ತಿನ ಎಲ್ಲ
ಭಾಗಗಳಿಂದಲೂ ಪ್ರವಾಸಿಕರನ್ನು, ಚಿಂತನಶೀಲರನ್ನು ಆಕರ್ಷಿಸುವಂತೆ ಇಂದು ಅದು ಪುನರ್
ನಿರ್ಮಾಣವಾಗಬೇಕಾಗಿದೆ. ಈ ಯೋಜನೆಯ ಅಂಗವಾಗಿ 63 ಅಡಿ ಎತ್ತರದ ಬಸವಣ್ಣನವರ ಬೃಹತ್
ಪುತ್ಥಳಿಯೊಂದನ್ನು ಮತ್ತು ಅನೇಕ ಶರಣರ ಮೂರ್ತಿಗಳನ್ನು, ಶರಣರಿಗೆ ಸ್ಮಾರಕಗಳನ್ನು ನಿರ್ಮಾಣ
ಮಾಡುವ ಯೋಜನೆಯನ್ನು ರೂಪಿಸಲಾಗಿದೆ. ಬೃಹತ್ ಮೂರ್ತಿಯನ್ನು ಮಾಡಲು ಪರಿಣಿತರು,
ಪ್ರಸಿದ್ಧರೂ ಆಗಿರುವ ಶಿಲ್ಪಿಯವರನ್ನು ಕರೆದುಕೊಂಡು ಹೋಗಿ ದಿ. 16-6-2004 ರಂದು ಸ್ಥಳ ವೀಕ್ಷಣೆ
ಮಾಡಲಾಯಿತು. ಮಾತ್ರವಲ್ಲ ಬೃಹತ್ ಪುತ್ಥಳಿಯ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನೂ ಶರಣ ಶೈಲದ
ಮೇಲೆ ಆಯ್ಕೆ ಮಾಡಲಾಗಿದೆ.

ಕೇವಲ 63 ಅಡಿ ಮೂರ್ತಿಯ ನಿರ್ಮಾಣಕ್ಕೆ ಅಂದಾಜು ವೆಚ್ಚ 50 ಲಕ್ಷ ಎಂದು ಶಿಲ್ಪಿಗಳು ಎಸ್ಟಿಮೇಷನ್ ಮಾಡಿದ್ದಾರೆ. ಆದರೆ ಇದಕ್ಕೆ ಪೂರಕವಾಗಿ ಇನ್ನೂ ಕೆಲವು ವೆಚ್ಚಗಳು ಬರುತ್ತವೆ. ಮಾತ್ರವಲ್ಲದೆ ಶರಣರ ಮೂರ್ತಿ, ಸ್ಮಾರಕ, ಧ್ಯಾನ ಮಂಟಪ, ಗವಿ ಇತ್ಯಾದಿಗಳು ಸೇರಿ 50 ಲಕ್ಷ ಹೀಗೆ ಒಂದು ಕೋಟಿ ರೂಪಾಯಿಗಳ ಯೋಜನೆ ರೂಪಿಸಲಾಗಿದೆ. ಈ ಯೋಜನೆಯನ್ನು ಸಾಕಾರಗೊಳಿಸಲು

1. ಬಸವ ಧರ್ಮ ಪೀಠ ಟ್ರಸ್ಟ್
2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್
3. ವಿಶ್ವಕಲ್ಯಾಣ ಮಿರ್ಷ ಚಾರಿಟಬಲ್ ಟ್ರಸ್ಟ್

ಮೂರೂ ಸೇರಿ ಕಾರ್ಯಮಾಡಲು, ದೇಣಿಗೆ ಸಂಗ್ರಹಿಸಲು ನಿರ್ಧರಿಸಿವೆ.

1. ಅವರವರ ಶಕ್ತ್ಯಾನುಸಾರ ಭಕ್ತಿಯಿಂದ ಎಷ್ಟು ಕಾಣಿಕೆ ಕೊಟ್ಟರೂ ಸ್ವೀಕರಿಸಲಾಗುವುದು.
2. 11,000(ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಡೋನರ್ ಬೋರ್ಡ್, ದಾನಿಗಳ ಫಲಕದಲ್ಲಿ ಬರೆಸಲಾಗುವುದು.
3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ (ಹಿಂದೆ, ಎಡ ಮತ್ತು ಬಲಪಕ್ಕ) ಬರುವ ಸ್ಥಳಗಳಲ್ಲಿ ಒಂದು ಕಡೆ ಹಾಕಿಸಲಾಗುವುದು.
4. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಶಿಲೆಯಲ್ಲಿ ಕೆತ್ತಿಸಿ, ಪುತ್ಥಳಿಯ ಕೆಳಗಿನ ಪೀಠದ ಮೂರು ಬದಿಗಳಲ್ಲಿ ಬರುವ ಸ್ಥಳಗಳಲ್ಲಿ ಒಂದು ಕಡೆ ಒಳಗಿನ ಮ್ಯುಸಿಯಮ್‌ದಲ್ಲಿ ಹಾಕಿಸಲಾಗುವುದಲ್ಲದೆ ಅವರ ಒಂದು ಫೋಟೋ ಸಹ ಪ್ರದರ್ಶಿಸಲಾಗುವುದು.

ಸಾಲದ ರೂಪದಲ್ಲಿ ಸಹಾಯ : ಪುತ್ಥಳಿಯ ಪೀಠದ ನಿರ್ಮಾಣದಿಂದ ಆರಂಭಿಸಿ ಬೃಹತ್

ಪುತ್ಥಳಿಯ ನಿರ್ಮಾಣ ಪೂರೈಸಲು ಶಿಲ್ಪಿಗಳು ಒಂದು ವರ್ಷದ ಅವಧಿ ನಿಗದಿ ಪಡಿಸಿದ್ದಾರೆ. ಕೆಲಸ ಆರಂಭವಾದರೆ ಮಧ್ಯೆ ತಡೆಯಿಲ್ಲದೆ ಮುಂದುವರೆಯಬೇಕು. ಇಲ್ಲದಿದ್ದರೆ ವೆಚ್ಚದ ಪ್ರಮಾಣ ಎಲ್ಲೆ ದಾಟುತ್ತದೆ ಎಂಬ ಅಭಿಪ್ರಾಯ ಶಿಲ್ಪಿಗಳದು. ಈ ಹಿನ್ನೆಲೆಯಲ್ಲಿ ದಾನಿಗಳಿಂದ ದೇಣಿಗೆ, ಸಾಲ ನೀಡಿ ಸಹಾಯಹಸ್ತ ಚಾಚಲು ಮುಂದೆ ಬರುವವರಿಂದ 12% ಬಡ್ಡಿಯದರದ ಮೇಲೆ ಸಾಲವನ್ನು ಪಡೆಯಲು ನಿರ್ಧರಿಸಲಾಗಿದೆ. ಬ್ಯಾಂಕ್‌ನ ಬಡ್ಡಿದರ ತೀರಾ ಕಡಿಮೆಯಿರುವುದರಿಂದ ಇರುವ ಹಣದ ಮೇಲೆ ಬಡ್ಡಿ ಪಡೆದು ಉಪಜೀವನ ಮಾಡುವವರಿಗೆ ಬಹಳ ತೊಂದರೆಯಾಗುತ್ತದೆ. ಅಂಥವರು ನಮ್ಮ ಟ್ರಸ್ಟ್‌ಗೆ ಸಾಲಕೊಟ್ಟರೆ ಅವರಿಗೆ 12% ಬಡ್ಡಿ ಕೊಡಲಾಗುವುದು ಮತ್ತು ಅವರು ಯಾವುದಾದರೂ ನಿಗದಿತ ಉದ್ದೇಶಕ್ಕೆ ಹಣ ಇಟ್ಟುಕೊಂಡಿದ್ದು ಉದಾ: ಮನೆ ಕಟ್ಟಿಸಲು, ಮದುವೆ ಮಾಡಲು, ಸೈಟುಕೊಳ್ಳಲು ಇತ್ಯಾದಿ ಆ ಕೆಲಸಕ್ಕೆ ಅಗತ್ಯಬಿದ್ದಾಗ ಎರಡು ತಿಂಗಳ ಮೊದಲಿಗೆ ಸೂಚನೆ ಕೊಟ್ಟರೆ ಅವರ ಹಣವನ್ನು ಹಿಂತಿರುಗಿಸಲಾಗುವುದು.

1. ರಸೀತಿ ಪುಸ್ತಕ ಪಡೆದು ದೇಣಿಗೆ ಸಂಗ್ರಹಿಸಿಕೊಡಲು ಆಸಕ್ತರಾದವರು ಪುಸ್ತಕಗಳನ್ನು ಪತ್ರ ಬರೆದು ತರಿಸಿಕೊಳ್ಳಬಹುದು. ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು-ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ.

2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು, ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಬಯಸುತ್ತೇವೆ.

3. ವಿಶ್ವಕಲ್ಯಾಣ ಮಿರ್ಷ ಸಂಸ್ಥೆಯು ಬೃಹತ್ ಪುತ್ಥಳಿಯ ನಿರ್ಮಾಣದಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ಜೊತೆಗೆ ಕೈ ಜೋಡಿಸುತ್ತಲಿದೆ. ಬಸವ ಗಂಗೋತ್ರಿ ನಗರ ಯೋಜನೆಯ ಆದಾಯದ ಒಂದು ಭಾಗವನ್ನು ಪುತ್ಥಳಿಗೆ ದಾನ ರೂಪದಲ್ಲಿ ಕೊಡಲು ಬಯಸಿದೆ. ಆದ್ದರಿಂದ ನಿವೇಶನಕೊಳ್ಳುವ ಮೂಲಕವೂ ಪರೋಕ್ಷ-ನೆರವು ನೀಡಬಹುದು.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಮಂಟಪ, 2035, 20ನೇ ಮೇನ್ ರೋಡ್, 2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010. ದೂ : 080-23325335/23322790

. . . .

ವಚನ ಕಿರಣ

- ಪೂಜ್ಯ ಮಾತೆ ಅಕ್ಕಮಹಾದೇವಿ

ಪರೋಪಕಾರವೇ ಪುಣ್ಯ ಎಂದುದಾಗಿ, ಸತ್ಕಾರ್ಯ ಪರಸೇವೆಗೈಯುತ್ತ
ಪರಹಿತಚಿಂತನೆಗೆ ತನು ಮನ ಧನಗಳ, ಸವೆಸಿಯೂ ಸವೆಸದಂತಿಪ್ಪವನೇ
ನಿಜ ಶರಣ ಮಾತಾ ಪ್ರಿಯ ಸಚ್ಚಿದಾನಂದ

ಓದುಗರಿಗೆ ಸೂಚನೆ : ಒಂದಕ್ಕಿಂತ ಹೆಚ್ಚು ಪ್ರತಿ ಕಲ್ಯಾಣ ಕಿರಣ ಬರುತ್ತಿದ್ದರೆ ನಿಮ್ಮ ಕ್ರಮ ಸಂಖ್ಯೆ ತಿಳಿಸಿ ಹೆಚ್ಚುವರಿ ಪ್ರತಿ ನಿಲ್ಲಿಸಲು ದೂರವಾಣಿ ಅಥವಾ ಪತ್ರದ ಮೂಲಕ ತಿಳಿಸಿ.

ಸ್ಫುರಣ ಕಿರಣ

- ಮಾತೆ ಅಕ್ಕಮಹಾದೇವಿ

1. ಪೂಜೆಯ ಸಮಯದಲ್ಲಿ ಊದುಬತ್ತಿ ಒದ್ದೆಯಾಗಿದ್ದ ಕಾರಣ ಬೇಗ ಹೊತ್ತಲಿಲ್ಲ, ಹೊತ್ತಲು ಸಮಯ ತೆಗೆದುಕೊಂಡರೂ ನಿಧಾನವಾಗಿ ಸುಡುತ್ತಿತ್ತು. ಒಣ ಊದುಬತ್ತಿಗಿಂತಲೂ ಶಾಂತವಾಗಿತ್ತು. ಒದ್ದೆಯಾದದ್ದೆಂದು ಉದಾಸೀನ ಮಾಡದೆ ಸಹನೆಯಿಂದ ಹಚ್ಚಿದ್ದರಿಂದ ಶಾಂತವಾಗಿ ಉರಿಯುತ್ತಾ ಹೋಗುತ್ತದೆ.

ಹಾಗೆಯೇ ಅಪಕ್ವ ಸಾಧಕರು ಗುರುವಿನ ಕರುಣಾಜಲದಲ್ಲಿ ಮಿಂದು ಸೇವೆ ಮಾಡುತ್ತಾ ಜ್ಞಾನ ಜ್ಯೋತಿಯನ್ನು ಹಚ್ಚಿಕೊಂಡರೆ ಆ ಜ್ಯೋತಿ ನಿಧಾನವಾಗಿ ಹೊತ್ತಿಕೊಳ್ಳುತ್ತಾ ಮುಂದೆ ಆ ಸಾಧಕನು ಸಮಾಜಕ್ಕೆ ಯೋಗ್ಯ ಬೋಧಕನಾಗುವನು, ಮಾರ್ಗದರ್ಶಕನಾಗುವನು. ಶರಣಾಗತಿ, ಶ್ರದ್ಧೆ ಸೇವೆಯಿಲ್ಲದೆ ಅಹಂ ಎಂಬ ಒಣ ಬತ್ತಿಯಾದರೆ ಜ್ಞಾನ ಜ್ಯೋತಿ ಬರಬರನೆ ಉರಿದು ಆ ಸಾಧಕ ಸಮಾಜಕ್ಕೆ ಬಾಧಕನಾಗುವನು. ಗುರುವಿನ, ಶರಣರ ಮಾರ್ಗದರ್ಶನದಲ್ಲಿ ವಿನಯ ವಿವೇಕಗಳಿಂದ ನಡೆಯುತ್ತಾ ಸಮಾಜದ ಕಷ್ಟ ನಿಂದೆ ತೊಂದರೆಗಳಲ್ಲಿ ಅದ್ದಿಕೊಂಡಾಗ ಪಕ್ವಗೊಂಡು ಹಸಿ ಊದುಬತ್ತಿಯಂತೆ ಶಾಂತಿ ಸಹನೆಗಳಿಂದೊಡಗೂಡಿ ಸಮಾಜ, ಧರ್ಮಕ್ಕೆ ತನ್ನನ್ನು ಸವೆಸಿಕೊಳ್ಳುತ್ತಾ ಜ್ಞಾನವೆಂಬ ಸುವಾಸನೆ ಬೀರುತ್ತಾ ಹೋಗುವನು.

2. ಹುಂಡಿಯ ಕಾಣಿಕೆ ಎಣಿಸುತ್ತಿರುವಾಗ 50 ಮತ್ತು 25 ಪೈಸೆ ನಾಣ್ಯಗಳು ಪ್ಲಾಸ್ಟಿಕ್ ಕವರ ತುಂಬಾ ಹಾಕಿದರೂ ಅವುಗಳ ಭಾರ ಮತ್ತು ಮೊತ್ತ ಕಡಿಮೆಯಾಯಿತು. 1 ಮತ್ತು 2 ರೂ. ನಾಣ್ಯಗಳನ್ನು ಅದೇ ಕವರಗಳಲ್ಲಿ ಹಾಕಿದಾಗ ಜಾಗ ಕಡಿಮೆ ಹಿಡಿದು ಭಾರವೂ ಹೆಚ್ಚಾಗಿ ಮೊತ್ತವು ಜಾಸ್ತಿಯಾಯಿತು. ಹಾಗೆಯೇ ಮನುಷ್ಯನು ಕ್ಷುಲ್ಲಕ ಗುಣಗಳಿಂದ ವ್ಯಕ್ತಿತ್ವ ಕುಬ್ಜವಾದಾಗ ಅವನ ಬೇಕುಗಳು ಹೆಚ್ಚಾಗಿ ತನ್ನ ವೈಯಕ್ತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದರಲ್ಲಿಯೇ ಸಮಯ ಹರಣವಾಗಿ ಸಮಾಜಕ್ಕೆ ಹೊರೆಯಾಗಿ ಬೆಲೆ ಕಡಿಮೆ ಮಾಡಿಕೊಳ್ಳುವನು.

ಅದೇ ಮಾನವನು ವಿಶಾಲ ಗುಣಗಳಿಂದ ವ್ಯಕ್ತಿತ್ವವನ್ನು ವಿಕಸಿಸಿಕೊಳ್ಳುತ್ತಾ ತನ್ನ ಅವಶ್ಯಕತೆಗಳನ್ನು ಮಿತಿಗೊಳಿಸಿಕೊಂಡು ತನ್ನಂತೆ ಪರರೆಂದರಿತು ಪ್ರಸಂಗಗಳಿಗೆ ಹೊಂದಿಕೊಳ್ಳುತ್ತಾ ಇದ್ದುದರಲ್ಲಿಯೇ ಸಂತೃಪ್ತಿಯ ಜೀವನ ನಡೆಸುತ್ತಾ ಇತರರಿಗೆ ತೊಂದರೆ ಕಿರಿಕಿರಿಯಾಗದಂತೆ ಪರೋಪಕಾರ, ಸಮಾಜ ಸೇವೆ ಮಾಡುತ್ತ ಎಲ್ಲರಿಗೂ ಪ್ರಿಯವಾಗಿ ಬೆಲೆ ಹೆಚ್ಚಿಸಿಕೊಳ್ಳುವನು.

3. ಕೂಡಲಸಂಗಮದಲ್ಲಿ ಮಳೆ ಬಹಳ ಕಡಿಮೆಯಾದರೂ ಕಳೆ ತೆಗೆದಂತೆಲ್ಲ ಗಿಡಗಳ ಬದಿಯಲ್ಲಿ ಮತ್ತೆ ಬೆಳೆಯುತ್ತಿತ್ತು. ಬೇರೆ ಜಾಗದಲ್ಲಿ ನೀರು ಮುಂತಾದ್ದು ಇಲ್ಲದಿದ್ದರೂ ಹುಲ್ಲು ಕಸ ಹುಲುಸಾಗಿಯೇ ಬೆಳೆಯುತ್ತದೆ. ಆದರೆ ಬೆಳೆ ಬೆಳೆಯಲು ಭೂಮಿಯನ್ನು ಹರಗಿ ಕಳೆ ಕಿತ್ತು ರಂಟೆ ಕುಂಟೆ ಮುಂತಾದ ರೀತಿಯಿಂದ ಉಳುಮೆ ಮಾಡಿ ಮಳೆ ಕಡಿಮೆಯಾದರೆ ನೀರು ಹರಿಸಿ ಗೊಬ್ಬರ ಹಾಕಿ ಶ್ರಮವಹಿಸಿ ದುಡಿದರೂ ನಿರೀಕ್ಷಿತ ರೀತಿಯಲ್ಲಿ ಬೆಳೆ ಬರುವುದು ಕಷ್ಟ. ಹಾಗೇ ವ್ಯಕ್ತಿ ಪ್ರಪಂಚದಲ್ಲಿ ಸಾಮಾನ್ಯರಂತೆ ಜೀವಿಸಲು ಪ್ರಯತ್ನ ಸಾಧನೆ ಬೇಕಿಲ್ಲ. ದುರ್ಗುಣ ದುಶ್ಚಟಗಳಿಗೆ ದಾಸನಾಗಿ ಕೆಳಮಟ್ಟಕ್ಕೆ ಹೋಗಲಿಕ್ಕಂತೂ ಶ್ರಮವೇ ಇಲ್ಲ. ಅದೇ ವ್ಯಕ್ತಿ ಎಲ್ಲರಿಗಿಂತ ಭಿನ್ನವಾದ ಆದರ್ಶ ಜೀವನ ನಡೆಸಿ

ಶರಣನಾಗಲು ಉನ್ನತ ಸ್ಥಾನಕ್ಕೇರಲು ಗುರುಗಳ ಮಹಾತ್ಮರ ಸನ್ನಿಧಿ ಅವರ ಸೇವೆ, ಶ್ರವಣ, ಸಾಧನೆ, ಶರಣರ ಸತ್ಸಂಗ, ಅನುಭವ ಗೋಷ್ಠಿ ಬೇಕು. ಇದಕ್ಕಾಗಿ ಶ್ರಮವಹಿಸಿ ಸತ್ಯ ನ್ಯಾಯ ನೀತಿ ಶ್ರದ್ಧೆಗಳಿಂದ ನಡೆಯುತ್ತಾ ಧರ್ಮದ ದಾರಿಯಲ್ಲಿರಲು ಬಹಳ ಪರಿಶ್ರಮಿಸಬೇಕಾಗುವುದು.

4. ಕೂಡಲಸಂಗಮದಲ್ಲಿ ಬಟ್ಟೆ ತೊಳೆಯುವ ಜಾಗದಲ್ಲಿ ಸುತ್ತೆಲ್ಲಾ ಎಲ್ಲೆಂದರಲ್ಲಿ ನಳದ ನೀರು ಹರಿದು ಪಾಚಿ ಕಟ್ಟಿ ಅಲ್ಲೆಲ್ಲಾ ತಿಕ್ಕಿ ತೊಳೆಯುವುದು ತೊಂದರೆಯಾಗುತ್ತಿತ್ತು. ತೊಳೆಯಲು ಲಕ್ಷ್ಯವಹಿಸದಿದ್ದಾಗ ಜಾರಿ ಬೀಳುವ ಅರಿವೂ ಸಹ ಇಲ್ಲದೆ ಅಲ್ಲಿದ್ದವರು ಅಡ್ಡಾಡುತಿದ್ದುದರಿಂದ ಅದಕ್ಕೆ ಪರಿಹಾರ ಹುಡುಕಿ ಒಂದೇ ಜಾಗದಲ್ಲಿ ನೀರು ಹರಿಯುವಂತೆ ಮಾಡಿಸಿದೆವು. ತೊಳೆಯದಿದ್ದಾಗಲೂ ದಾಟಿ ಹೋಗಿ ಜಾರುವ ಅಪಾಯವೂ ತಪ್ಪಿತು. ತೊಳೆಯಲೂ ಅನುಕೂಲ ಆಯಿತು.

ಇದೇ ರೀತಿ ಮನಸ್ಸು ಬಹ್ವಗ್ರವಾಗಿ ಎಲ್ಲೆಲ್ಲೋ ಹರಿಯುತ್ತಿದ್ದರೆ ಸಣ್ಣ ಕಾರ್ಯವನ್ನು ಸಹ ಮಾಡಲು ಸಾಧ್ಯವಾಗದೆ ಅಶಾಂತಿಯ ಆಗರವಾಗಿ ಇತರರಿಗೂ ಕಿರಿಕಿರಿಯಾಗುವುದು. ಅದೇ ಮನವನ್ನು ಸಾಧನೆಯೆಂಬ ನಿರ್ದಿಷ್ಟ ನಿಯಮಗಳಿಂದ ಏಕಾಗ್ರತೆಯೆಂಬ ಮೋರಿಯಲ್ಲಿ ಹರಿಸತೊಡಗಿದಾಗ ವಿಧಾಯಕ ಕಾರ್ಯಗಳನ್ನು ಮಾಡಬಹುದಲ್ಲದೆ ಆಗಲಾರದೆಂದುಕೊಂಡ ಅಸಾಮಾನ್ಯ ಕಾರ್ಯಗಳನ್ನು ಸಹ ಮಾಡಲು ಸಾಧ್ಯವಾದೀತೆನ್ನಿಸಿತು.

5. ಒಂದು ಸಲ ಪೂಜೆಗೆಂದು ದೀಪಕ್ಕೆ ರೂಮಿನ ಕಪಾಟಿನಲ್ಲಿದ್ದ ಬಾಟಲಿಯಿಂದ ಎಣ್ಣೆ ಹಾಕಿ ದೀಪ ಹೊತ್ತಿಸುತ್ತಿದ್ದಂತೆಯೇ ಬತ್ತಿ ಸಮೇತ ಎಣ್ಣೆಯೆಲ್ಲಾ ಸುಟ್ಟುಹೋಯಿತು. ಮತ್ತೊಮ್ಮೆ ಬತ್ತಿ ಹೊಸೆದು ಎಣ್ಣೆ ಹಾಕಿದರೂ ಅದೇ ರೀತಿ ಆಯಿತು. ಹೀಗೇಕಾಯಿತೆಂದು ಯೋಚಿಸಿದಾಗ ಎಣ್ಣೆ ತೆಳುವಾಗಿದ್ದು ಕಂಡು ಶಂಕೆಯಿಂದ ಮೂಸಿ ನೋಡಿದಾಗ ಸೀಮೆಎಣ್ಣೆ ವಾಸನೆ ಬಂದಿತು. ಯಾರೋ ಆ ಜಾಗದಲ್ಲಿ ಸೀಮೆ ಎಣ್ಣೆ ಚಿಕ್ಕ ಬಾಟಲಿ ಇಟ್ಟಿದ್ದು ನಾನು ದೀಪದ ಎಣ್ಣೆಯೆಂದು ಊಹಿಸಿ ಹಾಕಿದ್ದೆ. ಸೀಮೆ ಎಣ್ಣೆ ಚಿಮಣಿ ಲಾಟೀನು ಮುಂತಾದ್ದಕ್ಕೇ ಸರಿ. ದೀಪವು ಬರಬರನೆ ಉರಿಯುತ್ತಿರುತ್ತದೆ. ದೀಪದಂತಹ ತೆರೆದ ವಸ್ತುಗಳಲ್ಲಿ ಹಾಕಿದಾಗ ಎಣ್ಣೆ ಸಮೇತ ಸಂಪೂರ್ಣ ಸುಟ್ಟು ಹೋಗುವುದೆಂಬ ಅನುಭವವೂ ಬಂದಿತು.

ಹೀಗೆಯೇ ಕೆಲವರು ಸಾಮಾಜಿಕ ಕ್ಷೇತ್ರಗಳಲ್ಲಿ ಸಂಘ ಸಂಸ್ಥೆ ಮಠಗಳಲ್ಲಿ ಯಾವುದೇ ಉನ್ನತ ಆದರ್ಶ, ಉದಾತ್ತವಾದ ಗುರಿಯಿಲ್ಲದೇ ಜನಪ್ರಿಯತೆಗೆ ಮಾರುಹೋಗಿ ಹಿಂದು ಮುಂದು ವಿಚಾರ ಮಾಡದೆ ಮುನ್ನುಗ್ಗಿ ಕಾರ್ಯಗಳನ್ನು ಮಾಡುತ್ತ ಎಲ್ಲರನ್ನು ಮೆಚ್ಚಿಸಿ ಸ್ಥಾನ ದೊರಕಿಸಿಕೊಳ್ಳುತ್ತಾರೆ. ಮುಂದೆ ಬೇರೆಯವರ ಹೊಗಳಿಕೆಗೆ ಉಬ್ಬಿ ಅಧಿಕಾರ ಸ್ಥಾನ ಅಶಾಶ್ವತವೆಂದರಿಯದೆ ದರ್ಪದಿಂದ ಹಕ್ಕು ಚಲಾಯಿಸುತ್ತ ಎಲ್ಲರಿಗೂ ತಲೆನೋವಾಗಿ ಸೀಮೆ ಎಣ್ಣೆ ದೀಪದಂತೆ ಅಲ್ಪಕಾಲದಲ್ಲಿಯೇ ಧಗಧಗನೆ ಉರಿದು ಹೋಗುವರು. ಇನ್ನು ಕೆಲವರು ಉನ್ನತ ಆದರ್ಶಗಳೊಡನೆ ಆಳವಾದ ಗುರಿ ಇರಿಸಿಕೊಂಡು ನೋಡಿದವರಿಗೆ ಇವರಿಂದೇನೂ ಸಾಧನೆಯಾಗದೆಂಬಂತೆ ಕಂಡರೂ ನಿಧಾನವಾಗಿ ಹಂತ ಹಂತವಾಗಿ ಮುಂದುವರಿಯುತ್ತಾ ಬೇರೆ ಜನರ ಟೀಕೆ ಟಿಪ್ಪಣಿಗಳಿಗೆ ಜಗ್ಗದೆ ಆತ್ಮಬಲದಿಂದ ಶಾಂತವಾಗಿ ಉರಿಯುವ ಎಣ್ಣೆಯ ದೀಪದಂತೆ ಮುಂದುವರಿಯುತ್ತಾ ವೈಶಿಷ್ಟ್ಯಪೂರ್ಣವಾದ ಸಾಧನೆಗಳಿಂದ ಮುನ್ನಡೆದು ನಂದಾದೀಪವಾಗಿ ಬೆಳಗುತ್ತಿರುತ್ತಾರೆ.

6. ಒಮ್ಮೆ ಪಾತ್ರೆಯ ಮೇಲೆ ಮುಚ್ಚಿದ್ದು ನೋಡಿ ಅದರಲ್ಲಿ ಏನಾದರೂ ಇರಬಹುದೆಂದು ತೆರೆದು ನೋಡಿದಾಗ ಖಾಲಿಯಿತ್ತು. ಮುಚ್ಚಿದ್ದರಿಂದ ಅದರಲ್ಲೇನಾದರೂ ಪದಾರ್ಥ ಇರಬಹುದೆಂದೇ ತಿಳಿಯುತ್ತೇವೆ. ತೆರೆದು ನೋಡಿದಾಗ ನಿಜ ತಿಳಿಯುತ್ತದೆ.

ಇದೇ ಪ್ರಕಾರ ಕೆಲವರು ತಾವೇನು ಸಾಧಿಸಬಲ್ಲೆವು ಎಂಬ ಅರಿವಿಲ್ಲದೆ ಮುಂದಿನ ಜೀವನದ ವಿಚಾರವನ್ನೂ ಮಾಡದೆ ಮಾತಿನ ಪ್ರತಿಭೆಯ ತಟ್ಟೆ ಮುಚ್ಚಿಕೊಂಡು ಮಠ ಸಂಸ್ಥೆಗಳಿಗೆ ಬರುತ್ತಾರೆ. ಗುರುಗಳು ಹಿರಿಯರು ಅವರ ಸಿಹಿ ಮಾತುಗಳಿಗೆ ಮೆಚ್ಚಿ ಅವರಿಗೆ ಎಲ್ಲ ಅವಕಾಶ ನೀಡಿ ಮುಂದುವರಿಯಲು ಅನುವು ಮಾಡಿಕೊಟ್ಟು ಅವರ ಮಾತಿನ ಪ್ರತಿಭೆಯ ತಟ್ಟೆ ಸರಿಸಿ ಆದರ್ಶಗಳ ದೃಷ್ಟಿಕೋನದಿಂದ ನೋಡುತ್ತ ಪರೀಕ್ಷಿಸತೊಡಗಿದಾಗ ಆದರ್ಶರಹಿತ ಖಾಲಿ ಪಾತ್ರೆಯೆಂದು ತಿಳಿದುಕೊಳ್ಳುವುದರಲ್ಲಿಯೇ ಅವರು ಅಲ್ಲಿಂದ ನಿರ್ಗಮಿಸಿರುತ್ತಾರೆ.

7. ಒಂದು ದಿನ ಕೂಡಲಸಂಗಮದ ಮಹಾಮನೆಯ ಬಳಿಯಲ್ಲಿರುವ ನುಗ್ಗೆ ಗಿಡದ ಮೇಲೆ ಅಟ್ಟಿಸಿಕೊಂಡು ಬಂದ ನಾಯಿಯಿಂದ ತಪ್ಪಿಸಿಕೊಳ್ಳಲೆಂದು ಬೆಕ್ಕು ಹತ್ತಿ ಕುಳಿತಿತು. ನಾಯಿ ಅದರ ಬೆನ್ನು ಹತ್ತಿ ಧಾವಿಸುತ್ತಾ ಬಂದು ಮರವನ್ನೆಲ್ಲಾ ಸುತ್ತಿ ಸುತ್ತಿ ಕಾಯ್ದು ಕಾಯ್ದು ಬಳಲಿ ತಾನೇ ತಿರುಗಿ ಹೋಯಿತು.

ಇದರಂತೆಯೇ ಮಹಾತ್ಮರು ಶರಣರನ್ನು ಅರ್ಥೈಸಿಕೊಳ್ಳಲಾರದ ಸಾಮಾನ್ಯ ಜನರು ನಿಂದೆ ಟೀಕೆ ಮಾಡುತ್ತಾ ಅವರಿಗೆ ತೊಂದರೆಗಳನ್ನು ಕೊಡುತ್ತಲಿದ್ದರೂ ಅವರು ಗುರುಕೃಪೆ ದೇವಕೃಪೆ ಶರಣರ ಸತ್ಸಂಗವೆಂಬ ವೃಕ್ಷದಲ್ಲಿದ್ದು ಯಾರಿಗೂ ಸಿಗದಿದ್ದಾಗ ನಿಂದಕರು, ವಿರೋಧಿಗಳು ತೊಂದರೆ ಕೊಟ್ಟು ಕೊಟ್ಟು ಬಳಲಿ ತಾವೇ ಸುಮ್ಮನಾಗುತ್ತಾರೆ. ಈ ಪ್ರಸಂಗದಿಂದ ಇನ್ನೊಂದು ವಿಚಾರ ಸ್ಫುರಿಸಿತು. ಅಪಾಯ ಇದ್ದಲ್ಲಿ ದೇವರು ಉಪಾಯವನ್ನಿಟ್ಟಿರುತ್ತಾನೆಂದು ಪೂಜ್ಯ ಅಪ್ಪಾಜಿಯವರು ಪ್ರವಚನದಲ್ಲಿ ಹೇಳುತ್ತಿದ್ದುದು ನೆನಪಾಗಿ ಪ್ರತಿಯೊಂದು ಜೀವಿಗೂ ಅಪಾಯ ಸಂಭವಿಸಿದಾಗ ರಕ್ಷಿಸಿಕೊಳ್ಳುವ ಉಪಾಯವಿರಬೇಕೆಂದರಿತು ಬೆಕ್ಕಿಗೆ ಮರ ಏರುವ ಕಲೆಯಿದ್ದು ನಾಯಿಗೆ ಏರಲಾಗದ ನಿಯಮ ಇದ್ದಿರಬೇಕೆನಿಸಿತು.

8. ಹುಂಡಿಯ ಕಾಣಿಕೆಯನ್ನು ಎಣಿಸುವಾಗ 1 ಮತ್ತು 2 ರೂ. ನೋಟುಗಳು ಹರಿದವು ಹೊಲಸಾದವು ಮಾಸಿದವು ಮುದುಡಿಕೊಂಡವು ಇದ್ದು ಅವುಗಳನ್ನು ಬಿಡಿಸಿ ಸರಿಪಡಿಸಿ ಜೋಡಿಸುವುದು ಬಹಳ ಕಿರಿ ಕಿರಿ ಎನಿಸುವುದಲ್ಲದೆ ಅವುಗಳ ಕಟ್ಟುಗಳ ಗಾತ್ರವು ದೊಡ್ಡದಾದರೂ ಮೊತ್ತ ಮಾತ್ರ ಕಡಿಮೆ. 50 ಮತ್ತು 100 ರೂ. ನೋಟುಗಳು ಚೆನ್ನಾಗಿದ್ದು ಎಣಿಸುವಾಗ ಬೇಗ ಆಗುವುದಲ್ಲದೆ ಕಟ್ಟಿನ ಗಾತ್ರ ಕಡಿಮೆಯಾಗಿ ಮೊತ್ತ ಜಾಸ್ತಿಯಾಗುವುದು.

ಹೀಗೆಯೇ ಕೆಲವರು ಸಣ್ಣ ಬುದ್ಧಿ ಕ್ಷುಲ್ಲಕ ಗುಣದವರು ಸಣ್ಣ ಪುಟ್ಟ ಕೆಲಸ ಮಾಡಿದರೂ ಬಹಳ ಕಿರಿ ಕಿರಿ ತೊಂದರೆಕೊಡುತ್ತಾ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡದೆ ಕೆಲಸ ಮುಗಿಸುವಷ್ಟರಲ್ಲಿ ಬೇಸರವಾಗಿ ಬೇಡವೆನ್ನುವಂತಾಗುತ್ತಾರೆ. ಮತ್ತೆ ಕೆಲವರು ವಿಶಾಲ ಬುದ್ಧಿ ಗುಣವಂತಿಕೆಯ ಹೃದಯವಂತರು ದೊಡ್ಡ ದೊಡ್ಡ ಜವಾಬ್ದಾರಿಗಳಿದ್ದರೂ ಎಲ್ಲರ ಕಷ್ಟ-ಸುಖಗಳಿಗೆ ಸ್ಪಂದಿಸುತ್ತಾ ಯಾರಿಗೂ ನೋವಾಗದಂತೆ ಶಿಸ್ತಿನಿಂದ ಕೆಲಸ ನಿರ್ವಹಿಸುತ್ತಾ ಎಲ್ಲರ ಪ್ರೀತಿಗೆ ಪಾತ್ರರಾಗುತ್ತಾರೆ.

★★★

ಬಸವ ವಚನ ವಿಶ್ಲೇಷಣೆ ಇನ್ನೊಂದು ದಿಕ್ಕಿನಿಂದ

- ಶರಣೆ. ಸರೋಜಮ್ಮ ನಾಗರಾಜು

ಹರತನ್ನ ರೂಪವ ತೋರಬೇಕೆಂದು
ಶ್ರೀಗುರು ರೂಪಾಗಿ ಮರ್ತ್ಯಕ್ಕೆ ಬಂದು
ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ,
ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ
ಇಂತೀ ಚತುರ್ವಿಧ ಸ್ಥಲದಲ್ಲಿ ಸಾಹಿತ್ಯವಾದನಯ್ಯ
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನು.

ಹನ್ನೆರಡನೆಯ ಶತಕವು ವಿಶ್ವದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಅಪೂರ್ವವೂ, ಅದ್ವಿತೀಯವೂ ಆದ ಈ ಹನ್ನೆರಡನೆ ಶತಕದ ಯುಗ ಪುರುಷ, ಕ್ರಾಂತಿಪುರುಷ ಗುರು ಬಸವಣ್ಣನವರು.

ಹಾಗೆಂದು ನಾನು ಹೇಳುತ್ತಿಲ್ಲ. ಗುರುಬಸವಣ್ಣನವರ ಸಮಕಾಲೀನರೂ, ಗುರು ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ಪ್ರಥಮ ಅಧ್ಯಕ್ಷರಾಗಿದ್ದ ನಿರಂಜನ ಜಂಗಮ ಮೂರ್ತಿ ಅಲ್ಲಮಪ್ರಭುದೇವರು ಹೇಳಿರುವುದು :

ಯುಗದ ಉತ್ಸಾಹವ ನೋಡಿರೆ
ಪಂಚ ಶಕ್ತಿಗಳಿಗೆ ಪಂಚಪ್ರಧಾನರು
ಅವರ ಆಗುಹೋಗನು ಆ ಶರಣನೆ ಬಲ್ಲ.
ಆ ಶರಣನು ತಾನು ತಾನಾಗಿ ಆರು ದರುಶನಕೆ ಯಾಚಕನಲ್ಲ!
ಮೂರು ದರುಶನಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರಾಗಮ ಪುರಾಣ ಛಂದಸ್ಸು
ನಿಘಂಟುಗಳೆಂಬುದಕ್ಕೆ ಬೇಧಕನಲ್ಲ.
ಅದೆಂತೆಂದಡೆ: ಅವರ ಅಂಗದ ಮೇಲೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪ್ರಸಾದವಿಲ್ಲ, ಪಾದೋದಕವಿಲ್ಲದ ಭಾಷೆ ಕೇಳಿರೆ.
ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಏಕಾರ್ಥವಾದ ಕಾರಣ
ಪ್ರಾಣಿಗಳೆಲ್ಲವು ಪ್ರಣಾಮಂಗೈಯುತ್ತಿದ್ದವು,
ಜೀವಿಗಳೆಲ್ಲವು ಜಯ ಜೀಯಾ ಎನ್ನುತ್ತಿದ್ದವು.
ಆತ್ಮಂಗಳೆಲ್ಲ ಅನುವ ಬೇಡುತ್ತಿದ್ದವು.
ಗುಹೇಶ್ವರ ಸಂಗನ ಬಸವಣ್ಣನ ಪಾದಕ್ಕೆ
ಈರೇಳು ಭುವನವೆಲ್ಲವೂ ಜಯಾ ಜೀಯಾ ಎನುತ್ತಿದ್ದವು.

ನಾನು ಈ ವಚನಕ್ಕೆ ವ್ಯಾಖ್ಯಾನ ಮಾಡುವ ಸಾಹಸಕ್ಕೆ ಹೋಗುವುದಿಲ್ಲ. ಏಕೆಂದರೆ ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತಾಜಿಯವರು ಕಲ್ಯಾಣ ಕಿರಣದಲ್ಲಿ ವಿವರವಾಗಿ

ವಿಷದವಾಗಿ ವ್ಯಾಖ್ಯಾನ ಮಾಡಿದ್ದಾರೆ. ಆದರೆ ನನಗೆ ಈಗ ಬೇಕಾಗಿರುವ ಕೊನೆಯ ಐದು ಸಾಲುಗಳನ್ನು ತೆಗೆದುಕೊಳ್ಳುತ್ತೇನೆ.

ಧರ್ಮಪಿತ ಬಸವಣ್ಣನವರಿಗೆ ಪ್ರಾಣಿಗಳೆಲ್ಲವೂ ಪ್ರಣಾಮಂಗೈಯುತ್ತಿದ್ದವು, ಜೀವಿಗಳೆಲ್ಲವೂ ಜಯಾಜೀಯಾ ಎನುತ್ತಿದ್ದವು. ಆತ್ಮಂಗಳೆಲ್ಲ ಅನುವ ಬೇಡುತ್ತಿದ್ದವು. ಪ್ರಾಣಿಗಳೆಂದರೆ ಯಾವುವು ? ನಾಲ್ಕು ಕಾಲಿನವು ಮಾತ್ರವೇ ? ಅಲ್ಲ-ಅಲ್ಲ ಪ್ರಾಣಿಗಳೆಂದರೆ ಎರಡು ಕಾಲಿರುವ ಮಾನವನೂ ಪ್ರಾಣಿಯೆ ಅಲ್ಲವೇ? ದೇಹದಲ್ಲಿ ಪ್ರಾಣವಿರುವ ಜೀವಿಗಳೆಲ್ಲಾ ಪ್ರಾಣಿಗಳೇ. ಆದ್ದರಿಂದ ಮಾನವನೂ ಪ್ರಾಣಿಯೆ.

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು
ಸಗಣಕ್ಕೆ ಸಾಸಿರ ಹುಳು ಹುಟ್ಟದೆ ದೇವಾ ?
ಕಾಡಮೃಗವೊಂದಾಗಿರಲಾರವೆ ದೇವಾ ?
ಊರಮೃಗವೊಂದಾಗಿರಲಾರವೆ ಹರನೆ ?
ನಮ್ಮ ಲಿಂಗದೇವನ ಶರಣರಿಲ್ಲದ ಊರು ದೇಶ
ವನವಾಸ ನರವಿಂಧ್ಯ ಕಾಣಿರಣ್ಣಾ ಬ. ವ. ದೀ - 158

ಈ ವಚನದಲ್ಲಿ ಅಪ್ಪ ಬಸವಣ್ಣನವರು ಕಾಡು ಮೃಗ, ಊರಮೃಗ ಎನ್ನುವ ಪದಗಳನ್ನು ಬಳಸಿದ್ದಾರೆ. ಕಾಡಿನಲ್ಲಿರುವ ಪ್ರಾಣಿಗಳು ವನ್ಯಜೀವಿಗಳಾದರೆ, ಊರಲ್ಲಿರುವ ಮೃಗಗಳು ಮಾನವ ಪ್ರಾಣಿಗಳು. ಶಿವಚಿಂತೆ, ಶಿವಜ್ಞಾನವಿಲ್ಲದ ಮಾನವ, ಕೆಲವುಸಾರಿ ಕಾಡುಮೃಗಗಳಿಗಿಂತಲೂ ಕೀಳಾಗಿವರ್ತಿಸುತ್ತಾನೆ. ಮಾನವ ಮೃಗವಾಗಲೂ ಬಲ್ಲ, ದೇವನಾಗಲೂ ಬಲ್ಲ.

ಹನ್ನೆರಡನೆ ಶತಕದಲ್ಲಿ ಕೆಳವರ್ಗದ ಮಾನವನ ಸ್ಥಿತಿ ಕಾಡುಮೃಗಗಳಿಗಿಂತ, ನಾಲ್ಕು ಕಾಲಿನ ಪ್ರಾಣಿಗಳಿಗಿಂತ ಉತ್ತಮವೇನೂ ಆಗಿರಲಿಲ್ಲ. ಉತ್ತಮವರ್ಗದವರು ತಮ್ಮ ಹಿತಕ್ಕಾಗಿ, ಸ್ವಾರ್ಥಕ್ಕಾಗಿ ನಾಲ್ಕು ಕಾಲಿನ ಪ್ರಾಣಿಗಳೊಂದಿಗೆ, ನರಬಲಿಯನ್ನೂ ಕೊಡುತ್ತಿದ್ದರು. ಇಂದಿಗೂ ಹರಕೆ ಹೊತ್ತು ನಾಲ್ಕು ಕಾಲಿನ ಪ್ರಾಣಿಗಳನ್ನೂ, ದೇವಿ ದೇವತೆಗಳನ್ನು ಒಲಿಸಿಕೊಳ್ಳಬೇಕೆಂದು ಅಲ್ಲಲ್ಲಿ ನರಬಲಿಗಳನ್ನೂ ಕೊಡುತ್ತಿರುವುದನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಈಗಲೇ ಹೀಗಿರುವಾಗ 12ನೆಯ ಶತಮಾನದಲ್ಲಿ ಹೇಗಿದ್ದಿರಬಹುದು ? ಊಹಿಸಿಕೊಳ್ಳುವುದೇ ಕಷ್ಟವೆನಿಸುತ್ತಿದೆ.

ಅಂತಹ ಮೂಢ ಸ್ಥಿತಿಯಲ್ಲಿದ್ದ ಸಮಾಜವನ್ನು ತಿದ್ದಿ ತೀಡಿ, ಸುವ್ಯವಸ್ಥಿತ ಕಲ್ಯಾಣರಾಜ್ಯ ನಿರ್ಮಾಣ ಮಾಡಿದವರು ಗುರು ಬಸವಣ್ಣನವರು. ಪಶುಬಲಿ, ಪ್ರಾಣಿಬಲಿ, ನರಬಲಿ ನಿಲ್ಲಿಸಿ, ದಯೆ, ಕರುಣೆ, ಅನುಕಂಪದ ತಳಹದಿಯ ಮೇಲೆ ವಿನೂತನ ಸಮಾಜ ನಿರ್ಮಾಣ ಮಾಡಿದವರು ವಿಶ್ವಬಂಧು ಗುರು ಬಸವಣ್ಣನವರು. ಸಕಲ ಜೀವಾವಳಿಗೆ ಲೇಸನ್ನು ಬಯಸಿ, ದೇವ ಸೃಷ್ಟಿಯನ್ನು ಸಂರಕ್ಷಿಸಿದವರು ಮಹಾ ಮಾನವತಾವಾದಿ ಬಸವಣ್ಣನವರು.

ಆದಕ್ಕೆಂದೆ ಪ್ರಾಣಿಗಳೆಲ್ಲವೂ ಗುರು ಬಸವಣ್ಣನವರಿಗೆ ಪ್ರಣಾಮಂಗೈಯುತ್ತಿದ್ದವು, ಆತ್ಮಂಗಳೆಲ್ಲ ಅನುವ ಬೇಡುತ್ತಿದ್ದವು ಎಂದಿದ್ದಾರೆ ಅಲ್ಲಮಪ್ರಭುದೇವರು. ಅಂದಮೇಲೆ ಗುರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮ ಸಸ್ಯಾಹಾರಕ್ಕೆ ಒತ್ತು ಕೊಟ್ಟ, ಅಹಿಂಸೆಯ ತಳಹದಿಯ ಮೇಲೆ ನಿಂತ

ಧರ್ಮ ಎಂಬುದು ನಿರ್ವಿವಾದವಾದದ್ದು. ಆದರೂ ಇಂದು, ಕೆಲವರು ಲಿಂಗಾಯತ ಧರ್ಮ ಸ್ವೀಕರಿಸಿದ ಮಾಂಸಾಹಾರಿಗಳು ಮಾಂಸಾಹಾರ ಸೇವಿಸುವುದು ಬಿಡುವುದು ಅವರ ಐಚ್ಛಿಕ ವಿಷಯ ಎಂಬ ಗುಲ್ಲು ಎಬ್ಬಿಸಿ, ಅಂದೇ ಗುರು ಬಸವಣ್ಣನವರು ಮಾಂಸಾಹಾರ ನಿಷೇಧಿಸಿಲ್ಲ ಎನ್ನುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಒಂದು ವಚನವನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಆ ವಚನ -

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ಲಿಂಗವಿರಲು
ಅವರ ಲಿಂಗವೆಂಬೆ, ಸಂಗನೆಂಬೆ
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆ. ಬ. ವ. ದೀ - 717

ಪ್ರತಿಯೊಬ್ಬ ಮಾನವನಿಗೂ ಮೂರು ಶರೀರಗಳಿರುತ್ತವೆ. ಅವು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂದು. ಹಾಗೆ ಒಂದೇ ಆದ ಲಿಂಗತತ್ತ್ವದಲ್ಲಿ ಇಷ್ಟ ಪ್ರಾಣ, ಭಾವಲಿಂಗಗಳಿರುತ್ತವೆ. ಅವರವರ ಸಾಧನೆಯಂತೆ. ಅವುಗಳ ದರ್ಶನವಾಗುತ್ತದೆ. ಅದೇ ರೀತಿ ಬಸವಾದಿ ಶರಣರ ಅನುಭಾವದ ವಚನಗಳಿಗೂ ಮೂರು ರೀತಿ ಅರ್ಥಗಳಿರುತ್ತವೆ. ಅವು ವಾಚ್ಯಾರ್ಥ, ಭಾವಾರ್ಥ, ಗೂಢಾರ್ಥ ಎಂದು. ಹಾಗೆಯೇ ಮೇಲಿನ ವಚನ ನನ್ನ ಭಾವನೆಯಲ್ಲಿ 'ನ' ಕಾರಾತ್ಮಕವಾದ ವಚನವಾಗಿದೆ. ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ, ಬಾಯಲ್ಲಿ ಸುರೆಯ ಗಡಿಗೆ ಇರುವ ವ್ಯಕ್ತಿ ಕೊರಳಲ್ಲಿ ಲಿಂಗದೇವನನ್ನು ಕಟ್ಟಿಕೊಂಡ ಮಾತ್ರಕ್ಕೆ ಅವರನ್ನು ಲಿಂಗ, ಸಂಗ, ಮುಖಲಿಂಗಿ ಎನ್ನುವುದಿಲ್ಲ ಎಂದಿದ್ದಾರೆ. ಆದರೆ ಮೇಲಿನ ವಚನ ಓದಿ ಯಾರಿಗಾದರೂ ಕೊರಳಲ್ಲಿ ಲಿಂಗದೇವ ನಿದ್ದವನು ಹೇಗೆ ಇರಲಿ ಅವನನ್ನು ಲಿಂಗ, ಸಂಗ, ಮುಖಲಿಂಗಿ ಎಂದಿದ್ದಾರೆ. ಬಸವಣ್ಣನವರು ಎನ್ನಿಸುವುದು ಸಹಜ. ಅವರ ವಿಚಾರಧಾರೆಯ ಹಿನ್ನೆಲೆಯಲ್ಲಿ ಹೀಗಿರಲು ಸಾಧ್ಯವಿಲ್ಲ. ಆದ್ದರಿಂದ ಆ ವಚನ ಹೀಗೇಕೆ ಇದ್ದಿರಬಾರದು? ಎಂಬ ಆಲೋಚನೆ ನನ್ನದು :

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ಲಿಂಗವಿರಲು
ಅವರ ಲಿಂಗವೆಂಬೆನೆ ? ಸಂಗನೆಂಬೆನೆ ?
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆನೆ ?

ಬಸವಾದಿ ಶರಣರ ವಚನಗಳನ್ನು ಮುಂದೆ ಲಿಪಿಕಾರರು ಪ್ರತಿ ಮಾಡುವಾಗ ಕೈ ತಪ್ಪಿನಿಂದ ಒಂದು ಅಕ್ಷರ (ನೆ) ಬಿಟ್ಟು ಹೋಗಿರಬಹುದು. (ಒಂದು ಅಕ್ಷರದ ಪ್ರಮಾದ ಒಂದು ವಚನದ ಅರ್ಥವನ್ನೇ ಬದಲಾಯಿಸುತ್ತದೆ) ಅಥವಾ ಬೇಕೆಂದೇ ಆ ಅಕ್ಷರವನ್ನು (ನೆ) ಬಿಟ್ಟಿರಲೂ ಬಹುದಲ್ಲವೆ ? ಉದಾಹರಣೆಗೆ, ಧರ್ಮಗುರು ಬಸವಣ್ಣನವರಿಗೆ ಲಿಂಗದೇವನ ಅರಿವಾಗುವವರೆಗೂ, ಲಿಂಗಾಯತ ಧರ್ಮ ಸ್ಥಾಪನೆ ಮಾಡುವ ಮೊದಲಿಗೆ ಅವರ ವಚನಗಳ ಅಂಕಿತ 'ಕೂಡಲಸಂಗಮದೇವಾ' ಎಂದಿದ್ದು, ನಂತರದ ವಚನಗಳ ಅಂಕಿತ ಲಿಂಗದೇವಾ ಎಂದಿದ್ದರೂ, ವಚನಗಳನ್ನು ಪ್ರತಿ ಮಾಡುವ ಲಿಪಿಕಾರರ ಪ್ರಮಾದದಿಂದ ಅವರ ಎಲ್ಲಾ ವಚನಗಳ ಅಂಕಿತ ಕೂಡಲ ಸಂಗಮದೇವಾ ಎಂದೇ ಇದ್ದಿದ್ದು, ನಂತರ ಈಗ ಅದು ಪೂಜ್ಯ ಶ್ರೀ ಮಹಾಜಗದ್ಗುರು

ಮಾತಾಜಿಯವರ ಮೂಲಕ ಲಿಂಗದೇವಾ ಎಂದು (ಗುರು ಬಸವ ಪ್ರೇರಣೆಯಂತೆ) ಆದದ್ದು ನಮಗೆಲ್ಲಾ ತಿಳಿದ ಸಂಗತಿಯೇ ಆಗಿದೆ. ಹಾಗೆ ಮೇಲಿನ ವಚನ ಏಕೆ ಆಗಿರಬಾರದು ?

ಅಪ್ಪ ಬಸವಣ್ಣನವರ 'ಸ' ಕಾರಾತ್ಮಕವಾದ ವಚನವೊಂದನ್ನು ಇಲ್ಲಿ ನೋಡೋಣ :

ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹಾರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚನ್ನಯ್ಯನ ?
ಆನು ಹಾರುವನೆಂದಡೆ ಲಿಂಗದೇವಯ್ಯ ನಗುವನಯ್ಯ   ಬ. ವ. ದೀ - 346

ಜಗನ್ಮಾತಾ ಅಕ್ಕಮಹಾದೇವಿ ತಾಯಿಯವರ ನಕಾರಾತ್ಮಕವಾದ ವಚನ ಒಂದನ್ನು ಸಾಹಿತಿಗಳು ಸಕಾರಾತ್ಮಕವಾಗಿ ವ್ಯಾಖ್ಯಾನಿಸುವುದನ್ನು ನಾನು ಕೇಳಿದ್ದೇನೆ :

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ
ನೀವು ಕಾಣಿರೆ ? ನೀವು ಕಾಣಿರೆ ? ನೀವು ಕಾಣಿರೆ ?
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ
ಎರಗಿ ಬಂದಾಡುವ ತುಂಬಿಗಳಿರಾ
ಕೊಳನ ತಡಿಯೊಳಾಡುವ ಹಂಸೆಗಳಿರಾ
ಗಿರಿಗಹ್ವರದೊಳಗಾಡುವ ನವಿಲುಗಳಿರಾ
ಚನ್ನಮಲ್ಲಿಕಾರ್ಜುನನೆಲ್ಲಿದ್ದಿಹನೆಂದು
ನೀವು ಹೇಳಿರೆ, ನೀವು ಹೇಳಿರೆ, ನೀವು ಹೇಳಿರೆ ?

ತಾಯಿಯ ಗರ್ಭದಲ್ಲಿದ್ದಾಗಲೆ ಲಿಂಗ ಸಂಸ್ಕಾರಗೊಂಡು, ಎಳವೆಯಿಂದಲೇ ಗುರುವಿನಿಂದ ಏಕಲಿಂಗದೇವನಿಷ್ಠೆಯ ಜ್ಞಾನವನ್ನು ಪಡೆದು, ಅರಿವಿನ ಖಣಿಯಾಗಿ, ಲಿಂಗದೇವನಿಗೆ ಶರಣ ಸತಿಯಾಗಿ, ಅನುಭಾವದ ರಸವಾರಿಧಿಯಾದ ಅಕ್ಕ ಪಕ್ಷಿಗಳಾದ ಗಿಳಿ, ಕೋಗಿಲೆ, ತುಂಬಿ, ಹಂಸೆ, ನವಿಲುಗಳನ್ನು ಲಿಂಗದೇವನನ್ನು ಕಂಡಿರುವಿರಾ ? ಕಂಡಿದ್ದರೆ ಲಿಂಗದೇವ ಎಲ್ಲಿರುವ ಎಂಬುದನ್ನು ನನಗೆ ಹೇಳಿರಿ ಎಂದು ಕೇಳುತ್ತಾರೆಯೆ ? ಕೇಳಿರಬಹುದೆ ? ಇಲ್ಲ ಸಾಧ್ಯವೇ ಇಲ್ಲ.

ಅದರಲ್ಲೂ ಬಸವ ಕಲ್ಯಾಣದ ಅನುಭಾವಿಗಳ ಹಾಗೂ ಧರ್ಮಪಿತ ಬಸವಣ್ಣನವರ ದಿವ್ಯಸಾನಿಧ್ಯದಲ್ಲಿ ಕೆಲವು ವರ್ಷಗಳನ್ನು ಕಳೆದ ಅಕ್ಕ, ಗುರು ಬಸವಣ್ಣನವರನ್ನು, ಅನುಭಾವಿ ಶರಣರನ್ನು ಬೀಳ್ಕೊಂಡು ಕದಳಿಯ ಬನದತ್ತ ನಡೆದಾಗ ಪಕ್ಷಿಗಳನ್ನು ಕರಿತು ಲಿಂಗದೇವನನ್ನು ಕಂಡಿರುವಿರಾ ಕಂಡಿದ್ದರೆ ತೋರಿಸಿ ಎಂದು ಕೇಳಲು ಸಾಧ್ಯವೆ?. ಶರಣರ, ಅನುಭಾವಿಗಳ ಸಂಗದಲ್ಲಿರುವ ಭವಿಯೇ ಭಕ್ತನಾಗಬಲ್ಲ, ಭಕ್ತನು ಶರಣ, ಅನುಭಾವಿಯಾಗಬಲ್ಲ ಎಂದು ಅಪ್ಪನವರೇ ಅಪ್ಪಣೆ ಕೊಟ್ಟಿದ್ದಾರೆ.

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದಡೆ ಮುತ್ತು ರತ್ನಂಗಳ ಕಾಣಬಹುದು.

ನಮ್ಮ ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ
ಲಿಂಗವ ಕಾಣಬಹುದು.   ಬ. ವ. ದೀ - 857

ಅಂದ ಮೇಲೆ ಅಕ್ಕನವರ ಈ ವಚನ ಸಕಾರಾತ್ಮಕವಾದ, ವಿಡಂಬನಾತ್ಮಕವಾದ ವಚನವಾಗಿದೆ. ವೇದ ಪಠನದಿಂದಲೇ ದೇವನನ್ನು ಕಾಣಬಹುದೆಂದು, ವೇದವನ್ನು ಗಿಳಿಯಂತೆ ಬಾಯಿಪಾಠ ಮಾಡಿಕೊಂಡು ವೇದ ಓದುವವರನ್ನು, ಸಂಗೀತದಿಂದಲೇ ದೇವನನ್ನು ಒಲಿಸಬಹುದೆಂದು, ಕೋಗಿಲೆಯಂತೆ ಮಧುರವಾಗಿ ಹಾಡುವವರನ್ನು, ಒಬ್ಬ ದೇವನನ್ನು ನಂಬದೆ, ಆರಾಧಿಸದೆ ತುಂಬಿಯಂತೆ ಹಲವಾರು ದೇವತೆಗಳನ್ನು ಒಲೈಸುವವರನ್ನು, ನೀರನ್ನು ದೇವರೆಂದು, ಅದರಲ್ಲಿ ಮುಳುಗಿದರೆ ಪಾಪಕಳೆದು ಪುಣ್ಯಪ್ರಾಪ್ತಿಯಾಗುವುದೆಂದು ನೀರಲ್ಲಿ ಮೂಗು ಹಿಡಿದು ಮುಳುಗುವವರನ್ನು, ಹೆಣ್ಣು, ಹೊನ್ನು, ಮಣ್ಣು ಮಾಯೆಯೆಂದು, ನಾಡನ್ನು ತೊರೆದು ಕಾಡಿನಲ್ಲಿ ಬೆಟ್ಟಗಳಲ್ಲಿ ವಿಹರಿಸುವ ಭ್ರಾಂತರನ್ನು ಕಂಡು ಲಿಂಗದೇವ ವೇದಪ್ರಿಯನಲ್ಲ, ನಾದಪ್ರಿಯನಲ್ಲ, ಬಹುದೇವತೋಪಾಸಕರಿಗೆ ಒಲಿವವನಲ್ಲ. ನೀರಿನಲ್ಲಿ ಮುಳುಗುವ ಶೀಲವಂತರಿಗೆ, ಶುದ್ಧವಾದೆವೆಂಬ ಭ್ರಾಂತರಿಗೆ ಒಲಿವವನಲ್ಲ. ಗಿರಿ, ಗಹ್ವರದೊಳಗೆ ಏಕಾಂತದಲ್ಲಿದ್ದು ದೇವನನ್ನು ಹುಡುಕಿದರೆ ಸಿಗುವವನಲ್ಲ. ಆದ್ದರಿಂದ ನೀವಾರೂ ಲಿಂಗದೇವನನ್ನು ಕಂಡಿಲ್ಲ. ಕಾಣಲು ಸಾಧ್ಯವೂ ಇಲ್ಲ. ಲಿಂಗದೇವ ಬಾಹ್ಯ ಆಚರಣೆಗಳಿಗೆ, ಅದೂ ಶುಷ್ಕ ಆಚರಣೆಗಳಿಗೆ ಒಲಿಯುವವನಲ್ಲ. ಅವನು ಹೊರಗೆಲ್ಲಾ ಇಲ್ಲ. ಅವ ಅಂತರಂಗ, ಬಹಿರಂಗ ಶುದ್ಧಿಗೊಂಡವರಲ್ಲಿ ಇರುತ್ತಾನೆ. ಅಂತಹವರು ಲಿಂಗದೇವನನ್ನು ಕಾಣಬಹುದು. ಅವರೇ ಲಿಂಗದೇವನಾಗಿರುತ್ತಾರೆ. ಈ ವಚನಕ್ಕೆ ಹೇಗೆ ಎರಡು ರೀತಿ ವ್ಯಾಖ್ಯಾನಿಸಬಹುದೋ ಹಾಗೆ ಅಪ್ಪ ಬಸವ ಗುರುವಿನ ವಚನಕ್ಕೂ ವ್ಯಾಖ್ಯಾನಿಸಬಹುದು. ನನ್ನ ಅಭಿಪ್ರಾಯವನ್ನು ತಮ್ಮ ಮುಂದಿಟ್ಟಿರುವೆ. ತಾವುಗಳೂ ಚಿಂತಿಸಿರಿ ಎಂದು ಬಿನ್ನೈಸುವೆ.

ಜನರ ಮೌಢ್ಯತೆ

– ಪೂಜ್ಯ ಮಾತೆ ಅಕ್ಕಮಹಾದೇವಿ

ತಾತ್ಕಾಲಿಕ ಆನಂದ ಹೊಂದುವ
ಅನ್ಯ ತತ್ವ ಬೋಧೆಯನಾಲಿಸಲು ಕುರಿ ಹಿಂಡಿನಂತೆ
ದಂಡು ಕಟ್ಟಿ ಓಡುವರೀ ಮನುಜರು
ಪೂಜೆ ಪ್ರಾರ್ಥನೆ ನಿತ್ಯನೇಮಗಳನ್ನು ತಪ್ಪದೇ ಆಚರಿಸಿ
ತಮ್ಮಲ್ಲಿಯೇ ದಿವ್ಯಾನಂದ ಕಂಡುಕೊಳ್ಳುವ ಶರಣರ
ವಚನಗಳ ಪಠಿಸದೆ ವಚನಬೋಧೆಯನಾಲಿಸಿ
ಅಳವಡಿಸಿಕೊಳ್ಳದೆ ಧರ್ಮಗುರು ಬಸವ ತಂದೆಯ
ಧರ್ಮಸಂಹಿತೆ ವಚನ ಸಾಹಿತ್ಯವೆಂಬ ತಾಯಿಯ
ಮರೆತು ಕಂಡವರ ಹಿಂದೆ ಓಡುವ
ಜನರ ಅಜ್ಞಾನಕ್ಕೆನ್ನ ಮನ ಮರುಗಿತ್ತಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

ಪೂಜ್ಯ ಮಾತಾಜಿಯವರಿಂದ ಶರಣೆ. ಸರೋಜಮ್ಮನವರ ವ್ಯಾಖ್ಯಾನದ ಮರು ವಿಶ್ಲೇಷಣೆ

ಶರಣೆ. ಸರೋಜಮ್ಮ ನಾಗರಾಜು ಅವರು ಧರ್ಮಪಿತ ಬಸವಣ್ಣನವರು ವಚನವನ್ನು ಇನ್ನೊಂದು ರೀತಿಯಿಂದ ವಿಶ್ಲೇಷಿಸಿದ್ದಾರೆ. ಹೀಗೆ ವಚನಗಳನ್ನು ಎಲ್ಲ ದಿಕ್ಕಿನಿಂದ, ದೃಷ್ಟಿಕೋನದಿಂದ ವಿಶ್ಲೇಷಿಸುವುದು ಅತ್ಯಗತ್ಯ. ಆದರೆ ಈ ರೀತಿ ಧರ್ಮಪಿತರು ಹೇಳಿರಲು ಸಾಧ್ಯವಿಲ್ಲ:

ಎಡದ ಕೈಯಲಿ ಕತ್ತಿ! ಬಲದ ಕೈಯಲಿ ಮಾಂಸ!
ಬಾಯಲ್ಲಿ ಸುರೆಯ ಗಡಿಗೆ!
ಕೊರಳಲ್ಲಿ ಲಿಂಗ(ದೇವ)ವಿರಲಿ
ಅವರ ಲಿಂಗವೆಂಬೆನೆ? ಸಂಗನೆಂಬೆನೆ?
ಅವರ ಮುಖಲಿಂಗಿಗಳೆಂಬೆನೆ?

"ಅಂಗದ ಮೇಲೆ ಲಿಂಗವಿದ್ದವರ ಸಂಗಮನಾಥನೆಂಬೆ" ಎಂಬ ತತ್ತ್ವಕ್ಕೆ ಸಾಮಾಜಿಕವಾಗಿ ಬದ್ಧರಾದವರು ಬಸವಣ್ಣನವರು. ಅವರು ಹಾಗೆ ಹೇಳಿದುದನ್ನೇ ಬೇಕಂತ ತಿರುಗೇಟು ನೀಡಲು ಮಡಿವಂತರು "ನೀನೇ ಹೇಳಿದ್ದೀಯಲ್ಲ ಬಸವಣ್ಣ, ಸರಿ ಬಿಡು, ಅವನ ಎಡಕೈಯಲ್ಲಿ ಕತ್ತಿ, ಅವನು ಜೀವಹತ್ಯೆ ಮಾಡಿದ್ದಾನೆ ಎನ್ನುವುದಕ್ಕೆ ಸಾಕ್ಷಿಯಾಗಿ ಬಲಗೈಯಲ್ಲಿ ಮಾಂಸವಿದೆ. ಬಾಯಬಳಿ ಸುರೆಯ ಗಡಿಗೆ ತೂಗುತ್ತಿದೆ. ಕೊರಳಲ್ಲಿ ಮಾತ್ರ ಇಷ್ಟಲಿಂಗವಿದೆ. ಅಂದಾಗ ನೀನೇ ಹೇಳಿದ ಮಾತಿನಂತೆ ಅವನನ್ನು ಲಿಂಗವೆನ್ನು, ಸಂಗನೆನ್ನು, ಮುಖಲಿಂಗಿ ಎನ್ನು" ಎಂದು ವ್ಯಂಗ್ಯವಾಡಿದಾಗ ಬಹುಶಃ ಬಸವಣ್ಣನವರು ಶರಣೆ. ಸರೋಜಮ್ಮ ಅರ್ಥಮಾಡಿದಂತೆ ಅಂಥ ಅನಾಚಾರಿಯನ್ನು ಲಿಂಗ ಎನ್ನಬಹುದೆ? ಸಂಗ ಎನ್ನಬಹುದೆ? ಮುಖಲಿಂಗಿ ಎನ್ನಬಹುದೆ? ಎಂದು ನಕಾರಾತ್ಮಕವಾಗಿ ಜರಿದಿದ್ದಾರೆ ಎನ್ನಬಹುದು. ಈ ಭಾವ ಅವರಲ್ಲಿ ಇದ್ದಿದ್ದರೆ ಅವರು ವಚನವನ್ನು ಇನ್ನೊಂದು ವಾಕ್ಯದಿಂದ ಪೂರ್ಣಗೊಳಿಸುತ್ತಿದ್ದರು.

1. ಲಿಂಗ(ಕೂಡಲ ಸಂಗಮ)ದೇವಾ, ಅಂತಪ್ಪ ಅನಾಚಾರಿಯ ಮುಖವ ಎನಗೆ ತೋರದಿರಯ್ಯಾ.

2. ಇಂತಪ್ಪ ಅನಾಚಾರಿಯ ನರಕದೊಳದ್ದುವ ನಮ್ಮ ಲಿಂಗ(ಕೂ.ಸಂ) ದೇವ ಅಥವಾ ಇಂತಪ್ಪ ಅನಾಚಾರಿಯ ಹಲುದೋರಿ ಮೂಗಕೊಯ್ದು ನಮ್ಮ ಲಿಂಗದೇವ. ಆದ್ದರಿಂದ ಈ ವಚನದಲ್ಲಿ ಒಂದು ಬಗೆಯ ಅನುಕಂಪ ಚಲ್ಲವರಿದಿದೆ ಎಂದು ಹೇಳಬಹುದು. ಶುದ್ಧ ಆಚಾರ-ವಿಚಾರಗಳ ಲಿಂಗಾಯತ ಧರ್ಮಸ್ವೀಕರಿಸುವಾಗ ಮೇಲ್‌ವರ್ಣೀಯರಿಗೆ, ಸಸ್ಯಾಹಾರ ಪದ್ಧತಿ ಇರುವ ಜಾತಿಗಳವರಿಗೆ ಕಷ್ಟವಾಗುತ್ತಿರಲಿಲ್ಲ. ತೀರಾ ಕೆಳಗಿನ ಜಾತಿಗಳಿಂದ ಬಂದವರಿಗೆ ಮಾಂಸಾಹಾರ, ಮದ್ಯಪಾನ ಬಿಡಲು ಕಷ್ಟವಾಗಿ ತೊಳಲಾಡುವಾಗ ಸಮಯಾವಕಾಶ ಕೊಟ್ಟು ಅವನನ್ನು ಮೇಲೆತ್ತುವ ಅನುಕಂಪವನ್ನು ಬಸವಣ್ಣನವರ ಮಾತೃಹೃದಯದಲ್ಲಿ ಕಾಣುತ್ತೇವೆ. ಆದ್ದರಿಂದ ಈ ವಚನದ ಮೂಲಕ ಬಸವಣ್ಣನವರು ಮಾಂಸಾಹಾರ, ಮದ್ಯಪಾನ, ಜೀವಹತ್ಯೆ ಮಾಡಲು ಅವಕಾಶ ಕೊಟ್ಟಿದ್ದಾರೆಂದು ಊಹಿಸದೆ, ದುರ್ಬಲರು ತಿದ್ದಿಕೊಳ್ಳಲು ಸಮಯಾವಕಾಶವನ್ನು ಕೊಟ್ಟಿದ್ದಾರೆ ಎಂದು ಅರ್ಥ ಮಾಡಬಹುದು.

★★★

ವಿಸ್ತಾರಗೊಂಡ

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ. ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ

"ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ "ಆರೋವಿಲ್ಲೆ" ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" 2ನೆಯ ಹಂತದ ಯೋಜನೆಯು ಸಹ ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು
ವರ್ಗ 'ಬಿ'-40' X 40'-ವಿಸ್ತೀರ್ಣ 1600 ಚ.ಅಡಿಗಳು
ವರ್ಗ 'ಸಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ

ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 2000-00 (ಎರಡು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ 125-00(ಒಂದುನೂರಾ ಇಪ್ಪತ್ತೈದು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂ : **080 - 2332 5335/ 2332 2790**

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು-ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್‌ಬಾಸ್ಕೋ ಎಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.

★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯ ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.

★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.

ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ 10ನೆಯ ಸಂಸ್ಮರಣೆ

ವರದಿ - ಸಾಧಕ ಬಸವರಸ

''ಕೇವಲ ಪುರಾಣ ಕಥೆಗಳ ಪುಣ್ಯ ಶ್ರವಣ ಮಾಡಿಸುವ ಮೂಢಭಕ್ತಿಯನ್ನೂ ಬೆಳೆಸದೆ, ಶಬ್ದ ಜಾಲದ ಪಾಂಡಿತ್ಯದ ಒಣ ನುಡಿಯ ಹಂದರವನ್ನೂ ಕಟ್ಟದೆ ಬುದ್ಧಿ-ಭಾವ ಎರಡನ್ನೂ ವಿಕಸಿಸುವ ಪ್ರವಚನದ ವಿಶೇಷ ಸಾಧನದಿಂದ ಜನ ಮಾನಸವನ್ನು ತರಬೇತಿಗೊಳಿಸಿದ ಪ್ರವಚನ ತಪಸ್ವಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು. ಪೂಜ್ಯ ಗುರುಗಳಿಗೆ ಪ್ರವಚನವು ಒಂದು ಯಾಂತ್ರಿಕ ಕ್ರಿಯೆಯಾಗದೆ ಸಮಷ್ಟಿಯನ್ನು ಪರಿವರ್ತನೆಗೊಳಿಸುವ ಮಹಾಮಂತ್ರವಾಗಿತ್ತು'' ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಜಗದ್ಗುರು ಮಾತೆ ಮಹಾದೇವಿಯವರು ನುಡಿದರು. ಪೂಜ್ಯ ಲಿಂಗಾನಂದ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಬಸವ ಮಂಟಪದಲ್ಲಿ ಜರುಗಿದ ಶ್ರೀಗಳ 10ನೆಯ ಲಿಂಗೈಕ್ಯ ಸಂಸ್ಮರಣೆಯ ದಿವ್ಯ ಸನ್ನಿಧಿ ವಹಿಸಿದ್ದ ಅವರು ಗುರುಗಳ ಸುದೀರ್ಘ ಸಾಧನೆಯ ಪರಿಚಯ ಮಾಡಿಕೊಟ್ಟರು.

''12ನೆಯ ಶತಮಾನದಲ್ಲಿ ಬಸವಣ್ಣನವರು ಸಮಾನತೆಯನ್ನು ಬೋಧಿಸಿದರಾದರೂ ಸ್ತ್ರೀ ಸಮೂಹವು ಅನುಭವ ಮಂಟಪದಲ್ಲಿ ಪಡೆದ ಪ್ರಾತಿನಿಧ್ಯವನ್ನು ನೂರೊಂದು ವಿರಕ್ತರ ಕಾಲದಲ್ಲಿಯಾಗಲಿ, ನಂತರವಾಗಲಿ ಪಡೆಯಲಾಗಲಿಲ್ಲ. ಬಸವಣ್ಣನವರ ಸ್ತ್ರೀ ಸಮಾನತಾ ತತ್ತ್ವವನ್ನು ಪುನಃ ಅನುಷ್ಠಾನಕ್ಕೆ ತರಲೋಸುಗ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಲು ಪೂಜ್ಯ ಲಿಂಗಾನಂದ ಸ್ವಾಮಿಗಳು ದಿಟ್ಟ ಹೆಜ್ಜೆ ಇಟ್ಟರು. ವಚನ ಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿಯವರು ಬೆಳಕಿಗೆ ತಂದ ವಚನ ಸಾಹಿತ್ಯವು ಗ್ರಂಥಸ್ಥವಾಗಿ ಉಳಿದು ವಿಶ್ವವಿದ್ಯಾಲಯಗಳ ಅಧ್ಯಯನ ಕ್ಷೇತ್ರಕ್ಕೆ ಸೀಮಿತವಾಗಿ ಇದ್ದಾಗ ಹರಿಯುವ ಜ್ಞಾನ ವಾಹಿನಿಯಾಗಿ ಸಂಚರಿಸಿ ಜನ ಸಾಮಾನ್ಯರಿಗೆ ವಚನ ಸಾಹಿತ್ಯ ತಲ್ಪಿಸಿದ ಜಂಗಮ ಜ್ಯೋತಿ ಲಿಂಗಾನಂದ ಸ್ವಾಮಿಗಳು'' ಎಂದು ಪೂಜ್ಯ ಮಾತೆ ಮಹಾದೇವಿಯವರು ಗುಣಗಾನ ಮಾಡಿದರು.

ಕೆ.ಎಲ್.ಇ. ಸಂಸ್ಥೆ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಜೆ.ಎಂ. ಮಲ್ಲಿಕಾರ್ಜುನ್‌ರವರು ಮಾತನಾಡಿ ''ಧರ್ಮದ ಬಗ್ಗೆ ತಪ್ಪು ತಿಳುವಳಿಕೆ ಇದ್ದವರು ಅಜ್ಞಾನದಿಂದಲೋ ಉದಾಸೀನತೆಯಿಂದಲೋ ಶ್ರದ್ಧೆ ಕಳೆದುಕೊಂಡಾಗ ಆ ತಪ್ಪು ಕಲ್ಪನೆ ನಿವಾರಣೆ ಮಾಡುವ ಸಲುವಾಗಿ ಸಂಚಾರಕ್ಕೈಗೊಂಡ ಶ್ರೀಗಳು ಸ್ಮರಣಾರ್ಹರು'' ಎಂದು ಹೇಳಿ, ''ಧರ್ಮವು ಕಾನೂನಿಗಿಂತಲೂ ಮಿಗಿಲಾದುದು. ತಪ್ಪು ಮಾಡಿದ ಮನುಷ್ಯನನ್ನು ಕಾನೂನು ಶಿಕ್ಷಿಸುತ್ತದೆ. ಆದರೆ ಧರ್ಮವು ತಪ್ಪು ಮಾಡದಂತೆ ತಡೆಯುತ್ತದೆ. ಸ್ವಾರ್ಥಿಯಾದ ಶ್ರೀಮಂತನು ಕಾನೂನಿನ ದೃಷ್ಟಿಯಲ್ಲಿ ಅಪರಾಧಿಯಲ್ಲ; ಆದರೆ ತಾನು ಗಳಿಸಿದ್ದನ್ನು ಹಂಚಿ ಉಣ್ಣದೆ ತಾನಷ್ಟೇ ಸುಖಿಯಾಗಿರಬೇಕು ಎನ್ನುವವನು ಧರ್ಮದ ದೃಷ್ಟಿಯಲ್ಲಿ ಅಪರಾಧಿ. ಧರ್ಮದ ಸ್ಪರ್ಶ ಎಲ್ಲ ರಂಗಗಳಿಗೂ ಬೇಕು'' ಎಂದು ನುಡಿದರು.

ಅತಿಥಿಗಳಾಗಿ ಆಗಮಿಸಿದ್ದ ಹೆಚ್.ಎ. ಶರಣಪ್ಪನವರು ''ಪೂಜ್ಯ ಗುರುಗಳ ಪ್ರವಚನ ಕೇಳಿ

ಅನೇಕ ಸಂದೇಹಗಳು ನಿವಾರಣೆಯಾದವು. ದೇವರನ್ನು ಕುರಿತು ಪೂಜ್ಯ ಶ್ರೀಗಳು ನೀಡುತ್ತಿದ್ದ ಉಪನ್ಯಾಸಗಳು ತಾತ್ತ್ವಿಕವಾಗಿ, ತಾರ್ಕಿಕವಾಗಿ ಮನ ಬುದ್ಧಿಗಳಿಗೆ ನಾಟಿ ನಮ್ಮಲ್ಲಿ ಆಂತರಿಕವಾಗಿ ಬದಲಾವಣೆಗಳಾದವು. ಇಂದೂ ಧ್ವನಿ ಸುರುಳಿಗಳ ಮೂಲಕ ಪೂಜ್ಯ ಶ್ರೀಗಳು ನಮ್ಮ ಮಧ್ಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ '' ಎಂದು ತಮ್ಮ ಅನುಭವವನ್ನು ಹೇಳಿದರು. ಸಾಹಿತಿಗಳು, ಕಾರ್ಮಿಕ ಮುಖಂಡರೂ ಆದ ಸತ್ಯಾನಂದರು, ''ನನಗೆ ಮೊದಲಿನಿಂದಲೂ ಧಾರ್ಮಿಕ ಆಚರಣೆಗಳಲ್ಲಿ ಶ್ರದ್ಧೆ ಗಟ್ಟಿಗೊಂಡಿರಲಿಲ್ಲ. ಯಾವ ಗುಡಿ ಗುಂಡಾರಗಳ ಆವರಣಕ್ಕೆ ಸೀಮಿತರಾಗದೆ ಮೈದಾನಗಳಲ್ಲಿ ಪ್ರವಚನ ಮಾಡುವ ಕ್ರಾಂತಿಕಾರಿ ಪ್ರವಚನಕಾರರಾದ ಲಿಂಗಾನಂದ ಸ್ವಾಮಿಗಳ ಪ್ರವಚನಕ್ಕೆ ಒಂದೇ ಒಂದು ದಿನ ನಮ್ಮ ಮಿತ್ರರೊಬ್ಬರು ಕರೆದೊಯ್ದರು. ಅದು ನನ್ನನ್ನು ಸೂಜಿಗಲ್ಲಿನಂತೆ ಸೆಳೆಯಿತು. ನಂತರ ಒಂದೂ ದಿನ ತಪ್ಪದೆ ಒಂದು ತಿಂಗಳ ಕಾಲ ಕೇಳಿದ್ದಲ್ಲದೆ, ಬೇರೆ ಬಡಾವಣೆಗಳಲ್ಲಿ ನಡೆದಾಗ ಸಹ ಹೋಗುವ ಹಂಬಲ ಬೆಳೆಯಿತು. ಶ್ರೀಗಳ ಜ್ಞಾನ ಸಂಪತ್ತು ಅಪಾರ'' ಎಂದು ಗುರುಗಳೊಡನೆ ಕಳೆದ ದಿನಗಳನ್ನು ಸ್ಮರಿಸಿಕೊಂಡರು. ಆರಂಭದಲ್ಲಿ ಪೂಜ್ಯ ಶ್ರೀಗಳ ಪುತ್ಥಳಿಗೆ ಪುಷ್ಪವೃಷ್ಟಿ ಆರತಿ ಮಾಡಲಾಯಿತು. ಇದೇ ಸಂದರ್ಭದಲ್ಲಿ ಬಸವ ಕಲ್ಯಾಣದಿಂದ ವಿಧಾನ ಸಭೆಗೆ ಆಯ್ಕೆಯಾಗಿರುವ ಶಾಸಕ ಮಲ್ಲಿಕಾರ್ಜುನ ಖೂಬಾ ಅವರನ್ನು ಸತ್ಕರಿಸಲಾಯಿತು. ಲಿಂಗಾಯತ ಧರ್ಮ ಮಹಾಸಭಾದ ಪುಟ್ಟರುದ್ರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ''ಪೂಜ್ಯ ಸ್ವಾಮಿಗಳು ಎಂಥಾ ಜ್ಞಾನಿಗಳೋ ಅಷ್ಟೇ ಕಾಯಕ ಯೋಗಿಗಳು. ಬಸವ ಮಂಟಪ ಕಟ್ಟುವಾಗ ಸ್ವತಃ ಕಲ್ಲು, ಕಾಂಕ್ರಿಟುಗಳನ್ನು ಬುಟ್ಟಿಯಲ್ಲಿ ಹೊತ್ತಿದ್ದಾರೆ. ಅವರ ಬದುಕು ಅನುಕರಣೀಯವಾಗಿತ್ತು'' ಎಂದು ನುಡಿದರು. ಈ ಸಂದರ್ಭದಲ್ಲಿ ಶರಣರಾದ ವೀರಣ್ಣ ಕೊರ್ಲ್ಹಳ್ಳಿ ಸ್ವಾಗತಿಸಿದರು. ಎಸ್.ಎನ್. ನೀಲಕಂಠ ಪ್ರಾಸ್ತಾವಿಕ ಭಾಷಣ ಮಾಡಿದರು. ದೇವಿಕಾ ಶರಣಪ್ಪ ಸಭಾ ನಿರ್ವಹಣೆ ಮಾಡಿದರು.

ಬಸವ ಲಿಂಗೈಕ್ಯ ದಿನಾಚರಣೆಯ ವಿಶೇಷ ಕಾರ್ಯಕ್ರಮಕ್ಕೆ ಆಹ್ವಾನ

ಬೆಂಗಳೂರು ನಗರದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ 20-8-2004 ರಂದು 809ನೆಯ ಬಸವ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆಯಷ್ಟೆ ಇದರಲ್ಲಿ ಭಾಗವಹಿಸಲು ಇನ್ನಿತರ ಊರುಗಳಿಂದ ಸಹ ಶರಣ ಬಂಧುಗಳು ಬಂದು ಭಾಗವಹಿಸಲು ಆಹ್ವಾನಿಸುತ್ತಿದ್ದೇವೆ. ರಾಜಾಜಿನಗರದ ಬಸವ ಮಂಟಪದಲ್ಲಿ ಮೊದಲು ನೆಲ ಅಂತಸ್ತು ಮಾತ್ರವಿತ್ತು. ಧನ ದಾಸೋಹಿಗಳ ನೆರವಿನಿಂದ ಎರಡನೆಯ ಮತ್ತು ಮೂರನೆಯ ಅಂತಸ್ತು ಪೂರ್ಣಗೊಳಿಸಲಾಗಿದ್ದು ವಿಶಾಲವಾದ ಪ್ರಾರ್ಥನಾ ಮಂಟಪ ಮತ್ತು ಪ್ರಸಾದ ಮಂಟಪಗಳು ಸಹ ನಿರ್ಮಾಣವಾಗಿವೆ. ಆದ್ದರಿಂದ ಪರವೂರಿನಿಂದ ಬರುವವರಿಗೆ ವಸತಿ ವ್ಯವಸ್ಥೆಗೆ ಅನುಕೂಲವಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಬಂದು ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಹೃತ್ಪೂರ್ವಕವಾಗಿ ಆಹ್ವಾನಿಸುತ್ತೇವೆ.

ಶರಣ. ಎನ್. ಪುಟ್ಟರುದ್ರ	ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ	ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್

ಧರ್ಮ ಪ್ರಚಾರಕರ ತರಬೇತಿ ಯೋಜನೆ


- ಮಾತಾಜಿ

ರಾಯಚೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮತಾಂತರ ವಿಪರೀತಗೊಂಡಿದ್ದು ಸಾಮಾಜಿಕ ತಿರಸ್ಕಾರ ಮತ್ತು ಆರ್ಥಿಕ ಸಂಕಷ್ಟದಿಂದಾಗಿ ದಲಿತರು ಬಹುದೊಡ್ಡ ಸಂಖ್ಯೆಯಲ್ಲಿ ಮತಾಂತರ ಹೊಂದುತ್ತಿದ್ದಾರೆಂದು ಓರ್ವ ನಿಷ್ಠಾವಂತ ಕಾರ್ಯಕರ್ತರಾದ ಪಿ.ಜಿ. ಪಾಟೀಲರು ಕಳವಳಗೊಂಡು ವಿಷಯ ತಿಳಿಸಿದ್ದಾರೆ. ನಮಗೂ ಗೊತ್ತಿದೆ ಇದು ಒಂದು ಹಳ್ಳಿಯ, ಒಂದು ಊರಿನ, ಒಂದು ರಾಜ್ಯದ ಕಥೆಯಲ್ಲ, ಇಡೀ ದೇಶದ ಕಥೆ. ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಹದ್ದಿನ ಕಣ್ಣಿನಿಂದ ಆಸೆಪಟ್ಟು ಅವರನ್ನು ಮತಾಂತರಿಸುತ್ತಿವೆ. ಇದನ್ನು ಟೀಕಿಸಲು ನಮಗೆ ನೈತಿಕ ಹಕ್ಕಿಲ್ಲ. ಏಕೆಂದರೆ ಧರ್ಮವೂ ಒಂದು ಮೂಲಭೂತ ಅವಶ್ಯಕತೆ. ವೈದಿಕ ವಿಚಾರದ ಹಿಂದು ಧರ್ಮಕ್ಕೆ ದಲಿತರಿಗೆ ಸಂಸ್ಕಾರ ಕೊಡಲು ಸಾಧ್ಯವಿಲ್ಲದ ನಿರ್ಬಂಧ. ದೀಕ್ಷೆ ಕೊಡಲು ಸಂಪೂರ್ಣ ಹಕ್ಕನ್ನು ಬಸವ ಧರ್ಮ ನೀಡಿದ್ದರೂ ಪ್ರಚಾರಕರ ಕೊರತೆ ಮತ್ತು ಸಂಪನ್ಮೂಲದ ಕೊರತೆಯಿಂದ ನಾವು ನಿಸ್ಸಹಾಯಕರಾಗಿ ನೋಡುತ್ತಿದ್ದೇವೆ.

ಈ ದಿಶೆಯಲ್ಲಿ ಚಿಂತಿಸಿ ಒಂದು ಆಲೋಚನೆ ಹೊಂದಿದ್ದೇವೆ. ಒಂದು ವಿಶಿಷ್ಟ ತಾಲ್ಲೋಕಿನ (ಎಲ್ಲಿ ಮತಾಂತರ ಜಾಸ್ತಿ ಆಗುತ್ತಿವೆಯೋ ಅಲ್ಲಿನ) 20 ಹಳ್ಳಿಗಳಲ್ಲಿ ದಲಿತ ಕಾರ್ಯಕರ್ತರನ್ನು ಆಯ್ಕೆ ಮಾಡಿ ಅವರಿಗೆ ಒಂದು ತರಬೇತಿ ಶಿಬಿರವನ್ನು 15-20 ದಿವಸ ಕಾಲ ಏರ್ಪಡಿಸಿ, ಸರ್ಟಿಫಿಕೇಟ್ ನೀಡಿ ಪ್ರತಿ ತಿಂಗಳಿಗೆ ರೂ. 500 ಗೌರವ ಧನವನ್ನು ಕೊಟ್ಟು ಆ ಕಾರ್ಯಕರ್ತರನ್ನು ಧರ್ಮಜಾಗೃತಿ ಮಾಡಲು, ಸಂಜೆಯ ತರಗತಿಗಳ ಮೂಲಕ ಅಕ್ಷರ ಜ್ಞಾನ ನೀಡಲು ನೇಮಕ ಮಾಡಬೇಕೆಂದು ಯೋಜನೆ ಹಾಕಲಾಗಿದೆ.

ಇಪ್ಪತ್ತು ಜನರಿಗೆ ತಿಂಗಳಿಗೆ 500 ರೂ. ಕೊಡಲು ನಮ್ಮ ಸಂಸ್ಥೆಗೆ ಸಾಧ್ಯವಾಗದು. ಅದಕ್ಕೆ 20 ಜನ ಶರಣ ಬಂಧುಗಳು ವೈಯಕ್ತಿಕವಾಗಿ ಪ್ರತಿ ತಿಂಗಳೂ ರೂ. 500 ಆ ಪ್ರಚಾರಕರಿಗೆ ಕೊಟ್ಟರೆ ವರ್ಷಕ್ಕೆ ರೂ. 6000 ಒಬ್ಬರಿಗೆ ಖರ್ಚು ಬರುತ್ತದೆ. ವೈಯಕ್ತಿಕವಾಗಿ ಕೊಡಲು ಆಗದಿದ್ದವರು ರಾಷ್ಟ್ರೀಯ ಬಸವ ದಳಗಳ ಮೂಲಕ ಸಂಗ್ರಹಿಸಿ ಕೊಡಬಹುದು. ಒಂದು ರಾ.ಬ.ದಳ ಒಬ್ಬ ವ್ಯಕ್ತಿಯ ಗೌರವ ಧನ ಕೊಟ್ಟರೆ ಬಹಳ ಅಭಿನಂದನಾರ್ಹ ಕಾರ್ಯವಾಗುವುದು. ಸ್ವಯಂ ಪ್ರೇರಣೆಯಿಂದ ಹೀಗೆ ಕೊಡಲು ಮುಂದೆ ಬರುವವರಿಗೆ ಆ ಪ್ರಚಾರಕರ ವಿಳಾಸ ಕೊಡುತ್ತೇವೆ. ಅವರೇ ನೇರವಾಗಿ ಪ್ರಚಾರಕರಿಗೆ ಕಳಿಸಬಹುದು. ಒಂದು ವರ್ಷಕಾಲ ಈ ಪ್ರಯೋಗ ಮಾಡಬೇಕೆಂದು ನಿರ್ಧರಿಸಲಾಗಿದೆ. ಆದ್ದರಿಂದ ವೈಯಕ್ತಿಕವಾಗಿಯಾಗಲೀ, ರಾಷ್ಟ್ರೀಯ ಬಸವ ದಳದ ವತಿಯಿಂದಾಗಲಿ ಈ ಮಹತ್ವಪೂರ್ಣ ಕಾರ್ಯಕ್ರಮಕ್ಕೆ ನೆರವು ನೀಡಬೇಕೆಂದು, ಒಪ್ಪಿಗೆಯನ್ನು ಬೆಂಗಳೂರು ದೂರವಾಣಿಗೆ (080-23325335) ತಿಳಿಸಬೇಕೆಂದು ಸೂಚಿಸುತ್ತೇವೆ. ಈ ಆಲೋಚನೆ ಬರುತ್ತಲೇ ಮೈಸೂರು ರಾ.ಬ.ದಳದ ಶರಣೆ. ಸರೋಜಮ್ಮ ನಾಗರಾಜು ಅವರಿಗೆ ಫೋನ್ ಮಾಡಿದಾಗ ಅವರು ಒಬ್ಬ ಪ್ರಚಾರಕರ ವೆಚ್ಚ ಭರಿಸಲು ತಿಂಗಳಿಗೆ ರೂ. 500 (ವರ್ಷಕ್ಕೆ ರೂ. 6000) ಗೌರವ ಧನ ಕೊಡಲು ಒಪ್ಪಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ.

CPMG/KA/BGW - 50/2003 - 2005
WPP (W) - 17 R. No. 19980/70



ಬೀದರ್‌ನ ಬಸವೇಶ್ವರ ಸರ್ಕಲ್, ನಯಿ ಕಮಾನ್ ಹತ್ತಿರ ರಾಷ್ಟ್ರೀಯ ಬಸವ ದಳ ಹಾಗೂ ಲಿಂಗಾಯತ ಸಮಾಜದವರಿಂದ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಶುಸಂಗೋಪನಾ ಸಚಿವರಾದ ಮಿರಾಜುದ್ದೀನ್ ಪಟೇಲ್‌ರವರಿಗೆ ಸತ್ಕರಿಸಲಾಯಿತು.ಚಿತ್ರದಲ್ಲಿ ರಾಷ್ಟ್ರೀಯ ಬಸವ ದಳದ ಅನೇಕ ಶರಣರನ್ನು ಕಾಣಬಹುದು.